## ಸೋಮವಾರ, ೨೮ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಕೆಳಕಂಡ ಸದಸ್ಯರು ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸಿ, ದ್ಹಾಖಲೆ ಪುಸ್ತಕದಲ್ಲಿ ತಮ್ಮ ಸಹಿ ಹಾಕಿದರು.**

೧. ಪಂಡಿತ್ ಚತುರ್ಭುಜ್ ಪಾಠಕ್ (ಕೇಂದ್ರೀಯ ಭಾರತ ರಾಜ್ಯಗಳ ಸಮೂಹ)
೨. ಮೇಜರ್ ಮಹಾರಾಜ್ ಕುಮಾರ್ ಪುಷ್ಪೇಂದ್ರ ಸಿಂಗ್‌ಜೀ (ಕೇಂದ್ರೀಯ ಭಾರತ ರಾಜ್ಯಗಳ ಸಮೂಹ)
೩. ಸರ್ ಜ್ವಾಲಾ ಪ್ರಸಾದ್ ಶ್ರೀವಾಸ್ತವ (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

### ಸಂಚಾಲಕ ಸಮಿತಿಗೆ ಸದಸ್ಯರ ಚುನಾವಣೆ

**ಮಾನ್ಯ ಸಭಾಧ್ಯಕ್ಷರು :** ಸಂಚಾಲಕ ಸಮಿತಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂಬುದು ಸದಸ್ಯರಿಗೆ ನೆನಪಿದೆ. ಶ್ರೀ ರಾಮಚಂದ್ರ ಮನೋಹರ ನಲವಾಡೆ ಹಾಗೂ ಶ್ರೀ ಸುರೇಶ್‌ಚಂದ್ರ ಮಜುಮ್‌ದಾರ್ ಅವರೀರ್ವರ ನಾಮಪತ್ರಗಳು ಮಾತ್ರ ಖಾಲಿ ಬಿದ್ದ ಸ್ಥಾನಗಳಿಗೆ ಸ್ವೀಕೃತವಾಗಿ, ಇಬ್ಬರೂ ಯುಕ್ತವಾಗಿ ಚುನಾಯಿಸಲ್ಪಟ್ಟಿರುವರೆಂದು ಘೋಷಿಸಲು ನನಗೆ ಸಂತೋಷವಾಗುತ್ತದೆ.

### ಒಕ್ಕೂಟ ಸಂವಿಧಾನ ಸಮಿತಿಯ ವರದಿ

**ಮಾನ್ಯ ಸಭಾಧ್ಯಕ್ಷರು :** ನಾವೀಗ ಒಕ್ಕೂಟ ಸಂವಿಧಾನ ವರದಿಯ ಖಂಡಗಳ ಪರಿಶೀಲನೆಗೆ ಹೋಗೋಣ. ತಡೆಹಿಡಿಯಲ್ಪಟ್ಟ ಖಂಡ ೮.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಇಂದಿನ ವ್ಯವಹಾರವನ್ನು ಪ್ರಾರಂಭಿಸುವ ಮೊದಲು ನನ್ನದೊಂದು ಪುಟ್ಟ ಕೋರಿಕೆ. ನಾನು ಕೋರಬಹುದೆ? ಈ ಮಹಾಮಾನ್ಯ ಸಭೆಯ ಪ್ರತಿಯೋರ್ವ ಸದಸ್ಯರಿಗೂ ನಮ್ಮ ರಾಷ್ಟ್ರಧ್ವಜದ ವಿತರಣೆಗೆ ನಿರ್ದೇಶಿಸುವ ಕೃಪೆ ಮಾಡುತ್ತೀರಾ? ಅವರು ಅದನ್ನು ಶೇಖರಿಸಿ ಇಡುತ್ತಾರೆ. ಈ ಐತಿಹಾಸಿಕ ಸಂದರ್ಭದಲ್ಲಿ ಸರ್ವಾನುಮತದಿಂದ ಅನುಮೋದಿಸಲಾದ ಯೋಗ್ಯ ನೆನಪಿನ ಕಾಣಿಕೆ ಎಂದು ಅದನ್ನು ಪ್ರೀತಿಸುತ್ತಾರೆ. ಇದು ಬೃಹನ್ನೂತನ ಸ್ವತಂತ್ರ ರಾಷ್ಟ್ರೋದಯದ ಸಂದರ್ಭ.

**ಮಾನ್ಯ ಸಭಾಧ್ಯಕ್ಷರು :** ಇದು ತುಸು ಪರಿಶೀಲನಾರ್ಹ ವಿಷಯ. ಸಂಚಾಲಕ ಸಮಿತಿಯೊಡನೆ ಸಮಾಲೋಚಿಸಿ ಅನಂತರ ನಾನು ಘೋಷಿಸುತ್ತೇನೆ.

**ಶ್ರೀ ತಾಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಈ ಅಧಿವೇಶನ ಆಗಸ್ಟ್ ಮೊದಲನೇ ತಾರೀಖು ಮುಗಿಯುವುದೆ ಎಂದು ನಾನು ತಿಳಿಯಬಹುದೆ? ಈ ಮಾಹಿತಿ ಅಗತ್ಯ ಏಕೆಂದರೆ ನಾವು ನಮ್ಮ ಸೀಟುಗಳ ಮುಂಗಡ ಬುಕಿಂಗ್ ಮಾಡಬೇಕು.

**ಮಾನ್ಯ ಸಭಾಧ್ಯಕ್ಷರು** : ನಾನು ಈ ಬೆಳಗ್ಗೆಯಿಂದ ವಿಷಯವನ್ನು ಪರಿಶೀಲಿಸುತ್ತಿದ್ದೇನೆ. ಖಂಡಗಳ ಪರಿಶೀಲನೆ ವಿಷಯದಲ್ಲಿ ನಿಧಾನಗತಿಯಲ್ಲಿ ಸಾಗುತ್ತಿದ್ದೇವೆ. ಹೀಗೆಯೆ ಮುಂದುವರಿದರೆ ೩೧ನೇ ತಾರೀಖಿನೊಳಗೆ ಎಲ್ಲ ಖಂಡಗಳನ್ನೂ ನಾವು ಪರಿಶೀಲಿಸಿ ಮುಗಿಸಬಹುದೆ ಎಂಬುದು ತಿಳಿಯದು. ಈ ಅಧಿವೇಶನವು ೩೧ನೇ ತಾರೀಖಿನೊಳಗೆ ಮುಗಿಯಬೇಕೆಂಬ ಕಾತರ ನನಗೂ ಇದೆ. ಇದರಿಂದ ಸದಸ್ಯರು ಸ್ವಸ್ಥಳಕ್ಕೆ ಹೋಗಿ ಮತ್ತೆ ಆಗಸ್ಟ್ ೧೪ರಂದು ಮರಳಬಹುದು. ಅವರು ಹಿಂತಿರುಗಿದ ಅನಂತರ ನಾವು ಇನ್ನೊಂದು ಸಣ್ಣ ಅಧಿವೇಶನವನ್ನು ಕರೆಯಬೇಕಾಗುತ್ತದೆ. ಆಗ ಕೇಂದ್ರ ಅಧಿಕಾರ ಸಮಿತಿ ಮತ್ತು ಸಲಹಾ ಸಮಿತಿಗೆ ವರದಿಗಳನ್ನೂ, ಇತರ ವಿಷಯಗಳನ್ನೂ ಪರಿಶೀಲಿಸಬೇಕಾಗುತ್ತದೆ. ಇದುವರೆಗೆ ನನಗೆ ನೀಡಿರುವ ಸಲಹೆಯಂತೆ ನಾವು ೩೧ನೇ ದಿನಾಂಕ ಅಧಿವೇಶನ ಮುಗಿಸಬೇಕು ಎಂದುಕೊಂಡಿದ್ದೇನೆ. ಆದರೆ ಆ ವಿಷಯವನ್ನು ಸದಸ್ಯರು ನೆನಪಿನಲ್ಲಿಡುತ್ತಾರೆಂದು ನಂಬಿದ್ದೇನೆ. ಮತ್ತು ಸಾಧ್ಯವಾದಷ್ಟು ಚರ್ಚೆಯನ್ನು ದಕ್ಷತೆಯಿಂದಲೂ ಸುಸಂಗತವಾಗಿರುವಂತೆಯೂ ಕಡಿತಗೊಳಿಸಿ ಈ ವರದಿಯ ಪರಿಶೀಲನೆಯನ್ನು ೩೧ರೊಳಗೆ ಮುಗಿಸುತ್ತಾರೆಂದು ಕೊಂಡಿದ್ದೇನೆ. ಆ ಉದ್ದೇಶ ನೆರವೇರಲು ನಮಗಿನ್ನೂ ನಾಲ್ಕು ದಿನಗಳ ಕಾಲಾವಕಾಶವಿದೆ.

**ಶ್ರೀ ತಾಜಮಲ್ ಹುಸೇನ್** : ನಾನೊಂದು ವಿಷಯ ತಿಳಿಯಬಹುದೆ? ನಾವು ಮುಂಗಡ ನಮ್ಮ ಸೀಟುಗಳ ಬುಕಿಂಗ್ ಮಾಡಬೇಕಿರುವುದರಿಂದ ಕೇಂದ್ರ ಸಮಿತಿಯ ವರದಿಯ ಪರಿಸಮಾಪ್ತಿಯಾಗಲಿ ಆಗದಿರಲಿ ೩೧ರಂದು ಸದನ ಮುಗಿಯುವುದೆ? ಕೆಲಸ ಪೂರ್ಣಗೊಳ್ಳಲಿ ಬಿಡಲಿ ಖಚಿತವಾಗಿ ಒಂದು ದಿನಾಂಕವನ್ನು ಗೊತ್ತುಪಡಿಸುವುದು ಉಚಿತ.

**ಮಾನ್ಯ ಸಭಾಧ್ಯಕ್ಷರು** : ನಾನಾಗಲೆ ಹೇಳಿದಂತೆ, ನನಗೆ ನೀಡಲ್ಪಟ್ಟ ಸಲಹೆಯ ಪ್ರಕಾರ, ೩೧ನೇ ತಾರೀಖು ಅಧಿವೇಶನದ ಕೊನೆಯ ದಿನವಾಗುತ್ತದೆ.

ನಾವು ೭ ಮತ್ತು ೮ನೇ ಖಂಡವನ್ನು ತಡೆಹಿಡಿದಿದ್ದೆವು. ಅವುಗಳನ್ನು ಈಗ ಪರಿಸೀಲಿಸೋಣವೆ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಿ ಚರ್ಚೆಗೆ ತಡೆಹಿಡಿಯಲ್ಪಟ್ಟ ೮–ಎ ಖಂಡವನ್ನು ಈಗ ನಾವು ಪರಿಶೀಲಿಸಬಹುದು.

**ಮಾನ್ಯ ಸಭಾಧ್ಯಕ್ಷರು** : ೮ನೇ ಖಂಡವನ್ನು ನಾವು ಈಗಾಗಲೇ ಅಂಗೀಕರಿಸಿದ್ದೇವೆ ಎಂದುಕೊಂಡಿದ್ದೇನೆ. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಪ್ರಸ್ತಾಪಿಸಿದ ೮–ಎ ಖಂಡವನ್ನು ಈಗ ನಾವು ಪರಿಶೀಲಿಸೋಣ ನಾನು ಓದುತ್ತೇನೆ.

"೮ನೇ ಖಂಡದ ಅನಂತರ ಕೆಳಕಂಡ ಹೊಸ ಖಂಡವನ್ನು ಒಳ ಸೇರಿಸಬೇಕು.

'೮–ಎ (೧) ಒಕ್ಕೂಟದ ಸರ್ಕಾರ ಮತ್ತು ಅದರೊಡನೆ ವಿಲೀನವಾಗುವ ಭಾರತೀಯ ರಾಜ್ಯದೊಡನೆ ಒಡಂಬಡಿಸಿ (ಪರಂತು,) ಭಾರತೀಯ ಒಕ್ಕೂಟ ಮತ್ತು ವಿಲೀನಗೊಳ್ಳುವ ರಾಜ್ಯದ ನಡವಳಿಗಳ ಸಂಬಂಧದ ವಿಷಯದಲ್ಲಿ ಸಂವಿಧಾನದ ಉಪಬಂಧಗಳಿಗೆ ಬದ್ಧವಾಗಿ ಆ ರಾಜ್ಯದಲ್ಲಿ ಯಾವುದೇ ಶಾಸಕಾಂಗ ಮತ್ತು ನ್ಯಾಯಾಂಗ ಪ್ರಕ್ರಿಯೆಯನ್ನು ಜಾರಿಗೊಳಿಸಬಹುದು.

(೨) ಒಕ್ಕೂಟದೊಡನೆ ವಿಲೀನವಾಗದ ಯಾವುದೇ ಭಾರತೀಯ ರಾಜ್ಯದೊಡನೆ ಮಾಡಿಕೊಂಡ ಒಡಂಬಡಿಕೆ, ಒಕ್ಕೂಟದ ಸಂಸತ್ತಿನ ವಿದೇಶಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಸಂಬಂಧಿಸಿದ ಶಾಸಕಾಂಗದ ಅಧಿನಿಯಮಕ್ಕೆ ಬದ್ಧವಾಗಿದ್ದು ಅದರಿಂದ ನಿಯಂತ್ರಿಸಲ್ಪಡುತ್ತದೆ.

೩. ಅಂತಹ ಯಾವುದೇ ಒಡಂಬಡಿಕೆಯ ವ್ಯಾಪ್ತಿಯೊಳಗೆ ಪ್ರಾಂತೀಯ ಸಂವಿಧಾನದ ೮ನೇ ಖಂಡದ ಅಡಿಯಲ್ಲಿ ಪ್ರಾಂತ್ಯ ಮತ್ತು ರಾಜ್ಯದ ನಡುವಣ ಒಪ್ಪಂದದ ಯಾವುದೇ ವಿಷಯಗಳು ಅಡಕವಾಗುವುದಾದರೆ ಎರಡನೆಯ ಒಡಂಬಡಿಕೆ ಹಿಂಪಡೆಯಲ್ಪಟ್ಟು ರದ್ದಾಗುತ್ತದೆ.

೪. ೧ನೇ ಉಪಖಂಡದ ಉಪಬಂಧಗಳ ರೀತ್ಯಾ ಒಂದು ಒಡಂಬಡಿಕೆ ಸಮಾಪ್ತಿಗೊಂಡರೆ ಒಕ್ಕೂಟವು ಒಡಂಬಡಿಕೆಯ ನಿಬಂಧನೆಗಳಿಗೆ ಬದ್ಧವಾಗಿ ಅದರಲ್ಲಿ ನಿರ್ದಿಷ್ಟಪಡಿಸಿರುವ ಶಾಸಕಾಂಗ ಅಥವಾ ನ್ಯಾಯಿಕ ಪ್ರಕಾರ್ಯಗಳನ್ನು ಯುಕ್ತ ಪ್ರಾಧಿಕಾರಗಳ ಮೂಲಕ ಚಾಲನೆಗೆ ತರಬಹುದು.'"

ಯಾರಾದರೂ ಸದಸ್ಯರು ಖಂಡದ ಬಗ್ಗೆ ಏನನ್ನಾದರೂ ಹೇಳುವುದಿದ್ದರೆ ಈಗ ಹೇಳಬಹುದು. ಖಂಡ ೮–ಎಗೆ ಯಾವುದಾದರೂ ತಿದ್ದುಪಡಿ ಇದೆಯೇ ಎಂಬುದನ್ನು ನಾನೀಗ ಪರಿಶೀಲಿಸುತ್ತೇನೆ.

**ಶ್ರೀ ಬಿ.ಎಮ್. ಗುಪ್ತೆ** (ಬಾಂಬೆ : ಸಾಮಾನ್ಯ) : ಮಾನ್ಯರೆ ಒಂದು ಶಾಬ್ದಿಕ ತಿದ್ದುಪಡಿ:

"೨೪.೭.೧೯೪೭ರ ಪೂರಕ ಪಟ್ಟಿ ೧ರ ೫ನೇ ಬಾಬಿನಲ್ಲಿ ಪ್ರಸ್ತಾವಿತ ೮–ಎ ಖಂಡದ ೩ನೇ ಉಪಖಂಡದಲ್ಲಿ 'ಎರಡನೆಯ' ಎಂಬ ಪದಗಳ ಅನಂತರ 'ಒಕ್ಕೂಟದೊಡನೆ ಆಗಿರುವ ಒಡಂಬಡಿಕೆಯ ವ್ಯಾಪ್ತಿಗೆ ಒಳಪಟ್ಟಂತೆ' ಎಂಬ ಪದಗಳನ್ನು ಒಳಗೆ ಸೇರಿಸಬೇಕು."

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ನಾನು ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಬೇರೆ ಯಾರಾದರೂ ಅದರ ಬಗ್ಗೆ ಮಾತನಾಡುವರೆ?

[ಯಾರೂ ಮಾತನಾಡಲಿಲ್ಲ]

ನಾನೀಗ ತಿದ್ದುಪಡಿಗೆ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅದನ್ನು ಅಂಗೀಕರಿಸಿದ್ದಾರೆ:

"೨೪.೭.೧೯೪೭ರ ಪೂರಕ ಪಟ್ಟಿ ೧ರ ೫ನೇ ಬಾಬಿನಲ್ಲಿ ಪ್ರಸ್ತಾವಿತ ೮–ಎ ಖಂಡದ ೩ನೇ ಉಪಖಂಡದಲ್ಲಿ 'ಎರಡನೆಯ' ಎಂಬ ಪದಗಳ ಅನಂತರ ಮಹಾ 'ಒಕ್ಕೂಟದೊಡನೆ ಆಗಿರುವ ಒಡಂಬಡಿಕೆಯ ವ್ಯಾಪ್ತಿಗೆ ಒಳಪಟ್ಟಂತೆ' ಎಂಬ ಪದಗಳನ್ನು ಒಳಸೇರಿಸಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನೀಗ ತಿದ್ದುಪಡಿಯಾದ ಖಂಡವನ್ನು ಮಂಡಿಸುತ್ತೇನೆ.

೮–ಎ ಖಂಡ ತಿದ್ದುಪಡಿಯಾಗಿ ಅಂಗೀಕಾರವಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ನಾವು ೧೦ನೇ ಖಂಡವನ್ನು ಪರಿಶೀಲಿಸೋಣ.

## ಖಂಡ – ೧೦

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ ಇದೊಂದು ಬಹಳ ಸರಳ ಖಂಡ

"೧೦. ಅಧ್ಯಕ್ಷರಿಗೆ ತಮ್ಮ ಪ್ರಕಾರ್ಯದಲ್ಲಿ ಸಲಹೆ ನೀಡಲು ಪ್ರಧಾನಿಯವರ ಮುಂದಾಳತ್ವದಲ್ಲಿ ಒಂದು ಸಚಿವ ಮಂಡಳಿ ಇರಬೇಕು."

ನಾನಿದನ್ನು ಮಂಡಿಸಲು ಅನುಮತಿ ಬೇಡುತ್ತೇನೆ.

**ಮ್ಮಾನ್ಯ ಸಭಾಧ್ಯಕ್ಷರು** : ನನಗೆ ಹಲವಾರು ತಿದ್ದುಪಡಿಗಳ ಬಗ್ಗೆ ನೋಟೀಸು ಬಂದಿದೆ. ಶ್ರೀ ಪಾಕರ್ ಸಾಹಿಬ್ ಬಹಾದೂರ್.

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಖ್ ಸೇಠ್** (ಮದರಾಸ್ : ಮುಸ್ಲಿಮ್) : ಅವರು ನಿರ್ಗಮಿಸಿದ್ದಾರೆ. ನನಗೆ ಮತ್ತು ಇತರ ಒಂದಿಬ್ಬರು ಸದಸ್ಯರಿಗೆ, ಅವರ ತಿದ್ದುಪಡಿಗಳನ್ನು ಮಂಡಿಸುವ ಅಧಿಕಾರ ವಹಿಸಿಕೊಟ್ಟಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಅಹಮದ್ ಇಬ್ರಾಹಿಂ ಸಾಹಿಬ್ ಬಹಾದುರ್:

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಖ್ ಸೇಠ್** : ಇಬ್ಬರೂ ನಿರ್ಗಮಿಸಿದ್ದಾರೆ. ತಾವು ನನಗೆ ಅದನ್ನು ಮಂಡಿಸಲು ಅನುಮತಿ ನೀಡಬಹುದೋ ಇಲ್ಲವೋ ತಿಳಿಯದು.

**ಮಾನ್ಯ ಸಭಾಧ್ಯಕ್ಷರು** : ಬೇರೆ ಯಾರಾದರೂ ಸದಸ್ಯರು ಮಂಡಿಸಬಹುದು. ತಾವು ಮಂಡಿಸಲು ಬಯಸುತ್ತೀರಾ?

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಖ್ ಸೇಠ್** : ನಾನು ಮಂಡಿಸುತ್ತೇನೆ.

"೧೦ನೇ ಖಂಡಕ್ಕೆ ಕೆಳಕಂಡಂತೆ ಪ್ರತಿಯೋಜಿಸಬೇಕು:

'೧೦. ರಾಷ್ಟ್ರೀಯ ಸಭೆಯಿಂದ, ಒಂಟಿ ವರ್ಗಾವಣೆಯ ಮತದ ವಿಧಾನದಲ್ಲಿ ಅನುಪಾತೀ ಪ್ರಾತಿನಿಧ್ಯದ ಪದ್ಧತಿಯಲ್ಲಿ ಚುನಾಯಿತರಾದ ಸಚಿವರ ಮಂಡಳಿಯಿರಬೇಕು; ಮತ್ತು ಸಚಿವ ಮಂಡಳಿ ರಾಷ್ಟ್ರೀಯ ಸಭೆಗೆ ಬದ್ಧವಾಗಿರಬೇಕು."

ಮಾನ್ಯರೆ, ಇದನ್ನು ಕುರಿತ ವಿಸ್ತೃತ ಭಾಷಣದ ಅಗತ್ಯವಿಲ್ಲವೆಂದೆನಿಸುತ್ತೆ. ತಿದ್ದುಪಡಿ ಅತ್ಯಂತ ಸರಳವಾದುದು. ಸ್ಪಷ್ಟವಾದುದು ಮತ್ತು ಇದನ್ನು ಸದನ ಅಂಗೀಕರಿಸುವುದೆಂದು ನಂಬುತ್ತೇನೆ. ನಾನು ಮಂಡಿಸುತ್ತೇನೆ.

(೨೧೩ ರಿಂದ ೨೧೭ನೇ ಸಂಖ್ಯೆಯ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಎಚ್.ವಿ. ಪಾಟಸ್ಕರ್** (ಬಾಂಬೆ : ಸಾಮಾನ್ಯ) : ಈ ಖಂಡದ ಅಡಿಯಲ್ಲಿ ನೇಮಕಗೊಳ್ಳುವ ಸಚಿವ ಮಂಡಲಿಗೆ ಸಮಷ್ಟಿ ಹೊಣೆಗಾರಿಕೆ ಅನ್ವಯವಾಗಲೆಂಬ ಕಾರಣಕ್ಕಾಗಿ ಈ ತಿದ್ದುಪಡಿಗೆ ನಾನು ಸೂಚನೆ ಕೊಟ್ಟಿದ್ದೆ. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಪೂರಕ ಪಟ್ಟಿಯಲ್ಲಿ ತತ್ಸಮಾನ ತಿದ್ದುಪಡಿಗೆ ಸೂಚನೆ ಕೊಟ್ಟಿರುವುದರಿಂದ ಈ ತಿದ್ದುಪಡಿಯನ್ನು (ಸಂ. ೨೧೮) ಮಂಡಿಸಲು ನಾನು ಉದ್ದೇಶಿಸಿಲ್ಲ.

**ಪಂಡಿತ್ ಠಾಕುರ್‌ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : *[ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲಿರುವ ತಿದ್ದುಪಡಿ ಹೀಗಿದೆ.

"೧೦ನೇ ಖಂಡದ ಕೊನೆಯಲ್ಲಿ ಕೆಳಗೆ ಕಂಡಂತೆ ಸೇರಿಸಬೇಕು:

'ಪ್ರಧಾನಿಯವರು ಇತರ ಸಚಿವರನ್ನು ಆಯ್ಕೆ ಮಾಡಬೇಕು ಮತ್ತು ಸಮಗ್ರ ಸಚಿವ ಮಂಡಳಿ ಶಾಸನ ಸಭೆಗೆ ಹೊಣೆಯಾಗಿದ್ದು ಜಂಟಿ ಜವಾಬ್ದಾರಿಯ ನಿಯಮದಂತೆ ಸಚಿವ ಮಂಡಲಿಯ ಕರ್ತವ್ಯವನ್ನು ನಿರ್ವಹಿಸಬೇಕು'."

ಭಾರತ ಒಕ್ಕೂಟದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಬೇಕೆಂಬ ನೀತಿಯನ್ನು ಉದ್ದೇಶಗಳ ನಿರ್ಣಯದಲ್ಲಿ ನಿರೂಪಿಸಲಾಗಿದೆ ಎಂಬುದನ್ನು ನಾನು ಸದಸ್ಯರಿಗೆ ನೆನಪು ಮಾಡುವ ಆವಶ್ಯಕತೆ ಇಲ್ಲ. ಪ್ರಜಾಸತ್ತಾತ್ಮಕ ಸರ್ಕಾರ ಸಚಿವ ಮಂಡಲಿಯ ರೂಪದಲ್ಲಿರಬೇಕೆ ಅಥವಾ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿರುವಂತೆ ಅಧ್ಯಕ್ಷೀಯ ಮಾದರಿಯಲ್ಲಿರಬೇಕೆ ಎಂಬುದು ಪ್ರಶ್ನೆ. ಸರ್ಕಾರದ ಅಧಿಕಾರದ ವಿಷಯದಲ್ಲಿ ಒಂದು ಸಣ್ಣ ಅಂಶವನ್ನು ಹೊರತುಪಡಿಸಿ ಪ್ರಾಂತೀಯ ಸಂವಿಧಾನಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿಯುತ ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಬೇಕೆಂಬ ನಿಯಮವನ್ನು ನಾವು ಅಂಗೀಕರಿಸಿದ್ದೇನೆ. ಸರ್ಕಾರದಲ್ಲಿ ಅನುಸರಿಸಬೇಕಾದ ನಿಯಮವೆಂದರೆ ಪ್ರಧಾನಿಯವರು ಇಡೀ ಆಡಳಿತದ ಕೇಂದ್ರ ಬಿಂದುವಾಗಿರಬೇಕು. ಅವರಿಗೆ ಸಂಪೂರ್ಣ ಅಧಿಕಾರ ಇರಬೇಕು. ರಾಷ್ಟ್ರಪತಿಗಳು ಕೇವಲ ಸಂವಿಧಾನದ ಮುಖ್ಯಸ್ಥರಾಗಿರಬೇಕು. ಅವರಿಗೆ ಪ್ರತ್ಯೇಕ ಅಧಿಕಾರ ಅಥವಾ ವಿವೇಚನಾಧಿಕಾರ ನೀಡಬಾರದು. ರಾಷ್ಟ್ರಪತಿಗಳು ಏನೇ ಮಾಡಿದರೂ ಆ ಕ್ರಮ ಅವರ ಸಚಿವರ ಸಲಹೆಯಂತೆ ಮಾಡತಕ್ಕದ್ದು. ಇದೊಂದು ಒಳ್ಳೆಯ ಉದಾಹರಣೆ. ಇದಕ್ಕೆ ಬ್ರಿಟಿಷ್ ಮಾದರಿಯನ್ನು ಇಡೀ ಜಗತ್ತು ಪ್ರಶಂಸಿಸಿದೆ. ಇದು ಕಾರ್ಯಾಂಗ ಅಧಿಕಾರಕ್ಕೆ ಒಂದು ಮಾದರಿ; ಜನತೆಯ ಒಳಿತಿಗೂ, ಕ್ಷೇಮಕ್ಕೂ ಸಾಧಕವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರಾಧ್ಯಕ್ಷರ ಸಂವಿಧಾನವನ್ನು ಕೈಬಿಡುವಲ್ಲಿ ಕೇಂದ್ರ ಅಧಿಕಾರ ಸಮಿತಿ ಅಪಾರ ಪೂರ್ವ ಚಿಂತನೆ ಮತ್ತು ಪರಿಪಕ್ವವಾದ ಪರ್ಯಾಲೋಚನಾ

ಪ್ರಶ್ನೆಯನ್ನು ತೊಡಗಿಸಿದೆ. ಆ ಕಾರಣಕ್ಕೆ ಸದನವು ಈಗಾಗಲೇ ಆ ತಿದ್ದುಪಡಿಗೆ ಬದ್ಧವಾಗಿದ್ದರೂ ಅದನ್ನು ಬ್ರಿಟಿಷ್ ಮಾದರಿಯಲ್ಲಿ ರೂಪಿಸಲಾಗಿದೆ. ಆದರೂ ಪ್ರಧಾನಿಯವರ ದನಿಗೆ ಪರಮಾಧಿಕಾರವಿದ್ದು, ರಾಷ್ಟ್ರಪತಿಗಳು ಕೇವಲ ಮಾರ್ದನಿಗೂಡಿಸುವವರೆಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಯಪಡಿಸಬೇಕು. ಯಾವುದೇ ಸಂದರ್ಭದಲ್ಲೂ ಪ್ರಧಾನಿಯವರ ದನಿ ಅಡಗುವಂತಿಲ್ಲ. ಎರಡನೆಯದಾಗಿ ಪ್ರಧಾನಿಯವರಿಗೆ ತಮ್ಮ ಸಂಪುಟ ಸದಸ್ಯರನ್ನು ಆಯ್ಕೆ ಮಾಡುವ ಹಕ್ಕಿರಬೇಕು ಮತ್ತು ಸಮಷ್ಟಿ ಹೊಣೆಗಾರಿಕೆಗೆ ಬದ್ಧವಾಗಿರಬೇಕು.

ನಾನಿದನ್ನು ಮತ್ತೇನೂ ಒತ್ತಿ ಹೇಳಬೇಕಿಲ್ಲ ಇವು ಮೂರೂ ಮೂಲ ತಿದ್ದುಪಡಿಗಳು ಮತ್ತು ಇವುಗಳು ಪ್ರಜಾಪ್ರಭುತ್ವ ನಿಯಮಗಳನ್ನಾಧರಿಸಿವೆ; ಆದುದರಿಂದ ಸದನದಿಂದ ಇವು ಅಂಗೀಕೃತವಾಗಬೇಕೆಂದು ಕಡೆಯದಾಗಿ ಹೇಳಬಯಸುತ್ತೇನೆ.]*

**ಖಾಜಿ ಸೈಯದ್ ಕರೀಮುದ್ದೀನ್** (ಸಿ.ಪಿ. ಮತ್ತು ಬೇರಾರ್ : ಮುಸ್ಲಿಮ್) : ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿ ಹೀಗಿದೆ:

> ೧೧ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:
>
> ಕೇಂದ್ರದ ಕಾರ್ಯಾಂಗ ಸಂಸತ್ತಿನ ಹೊರಗಿರಬೇಕು; ಅರ್ಥಾತ್ ಶಾಸನ ಸಭೆಯ ಅವಧಿ ಮುಗಿಯುತ್ತಿದ್ದಂತೆ ಅದನ್ನು ವಜಾ ಮಾಡಲಾಗದು; ಭ್ರಷ್ಟಾಚಾರ ಅಥವಾ ದೇಶದ್ರೋಹದ ಕಾರಣಕ್ಕಾಗಿ ನ್ಯಾಯಾಧಿಕರಣದ ಮುಂದೆ ಯಾವುದೇ ಸಮಯ ಛೀಮಾರಿ ಹಾಕಿ ಸಂಪುಟ ಅಥವಾ ಸಂಪುಟಗಳ ಸದಸ್ಯನನ್ನು ವಜಾ ಮಾಡಬಹುದು. ಒಂಟಿ ವರ್ಗಾವಣೀಯ ಮತದ ವಿಧಾನದಲ್ಲಿ ಇಡೀ ಸದನದಿಂದ ಪ್ರಧಾನಿಯವರು ಚುನಾಯಿತರಾಗಬೇಕು. ಇತರ ಸಂಪುಟ ಸಚಿವರು ಒಂಟಿ ವರ್ಗಾವಣೀಯವಲ್ಲದ ಮತದಿಂದ ಚುನಾಯಿತರಾಗಬೇಕು'."

ಮಾನ್ಯರೆ, ಈ ವಿಷಯವನ್ನು ಕುರಿತು ಪ್ರಾಂತೀಯ ಸಮಿತಿಯ ಶಿಫಾರಸುಗಳನ್ನು ಅಂಗೀಕಾರ ಮಾಡುವಾಗ ಒಂದು ಚರ್ಚೆ ನಡೆಯಿತು. ನಾವು ಕೇಂದ್ರದ ಸಂವಿಧಾನವನ್ನು ಕುರಿತು ಪರಿಶೀಲಿಸುತ್ತಿರುವಾಗ ಆ ನಿರ್ಧಾರಕ್ಕೆ ಬದ್ಧರಾಗಿರಬೇಕಿಲ್ಲ. ಸ್ಥಳೀಯ ಸ್ವಸರ್ಕಾರ, ಸ್ಥಳೀಯ ಮಂಡಲಿಗಳು ಮತ್ತು ಪುರಸಭೆಗಳ ಮಟ್ಟಿಗೆ ಹೇಳುವುದಾದರೆ ೧೯೩೫ರ ಅಧಿನಿಯಮದಂತೆ ಕಾರ್ಯನಿರ್ವಹಿಸುತ್ತಿರುವ ಸಂಸದೀಯ ಪದ್ಧತಿ ಶೋಚನೀಯವಾಗಿ ವಿಫಲಗೊಂಡಿದೆ ಎಂಬುದು ನನ್ನ ನಿವೇದನೆ. ಭಾರತಾದ್ಯಂತ ಬಿಕ್ಕಟ್ಟು ಏರ್ಪಟ್ಟಿರುವುದನ್ನು ತಾವೆಲ್ಲರೂ ಗಮನಿಸಿದ್ದೀರಿ. ಇದು ಜನರ ಪ್ರತಿಭೆಗೆ ಶೋಭೆ ತರುವಂತಹುದಲ್ಲ. ಪ್ರಾಂತೀಯ ಸಭೆಗಳ ಮಟ್ಟಿಗೆ ಹೇಳುವುದಾದರೆ ಕಿಂಚಿತ್ ಯಶಸ್ಸು ಕಂಡುಬಂದಿತು. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಕಾಂಗ್ರೆಸ್ ಹೋರಾಡುತ್ತಿತ್ತು. ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ಅಂಶಗಳ ನಡುವಣ ತಾಕಲಾಟ ಬಗೆಹರಿದಿತ್ತು. ಮುಸ್ಲಿಂಲೀಗ್‌ಗೆ ಪಾಕಿಸ್ತಾನ ಆದರ್ಶವಾಗಿತ್ತು. ಮುಸ್ಲಿಂ ಸದಸ್ಯರಲ್ಲಿ ಬಹುತೇಕ, ಮುಸ್ಲಿಂಲೀಗ್ ಪಕ್ಷದ ಟಿಕೆಟ್‌ನಿಂದ ಚುನಾಯಿತರಾದವರು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ನಿರ್ಗಮಿಸಿ ಭಾರತೀಯ ಜನತೆಯ ಬಿಡುಗಡೆಯ ಕಾರ್ಯಕ್ರಮಗಳು ಕಾಣೆಯಾಗಿ, ಪಾಕಿಸ್ತಾನ ಸ್ವತಂತ್ರ ರಾಷ್ಟ್ರವಾದ ಮೇಲೆ ಪಕ್ಷಗಳು ಮತ್ತು ಸಮೂಹಗಳ ಸರಮಾಲೆಯೇ ಹುಟ್ಟಿತು. ಅದರಲ್ಲಿ ಕಮ್ಯುನಿಸ್ಟರು, ಸಮಾಜವಾದಿಗಳು, ಮುಸ್ಲಿಂಲೀಗ್ ಸದಸ್ಯರು ಮತ್ತು ಇತರ ಅನೇಕರಿರುವರು. ಈ ಹಿಂದೆ ನಾವು ಕಂಡ ಭಾರಿ ಬಹುಸಂಖ್ಯಾತರ ವರ್ಗವನ್ನು ಈಗ ನಿರೀಕ್ಷಿಸುವುದು ಅಸಾಧ್ಯ. ಅನೇಕ ಗುಂಪುಗಳಿದ್ದು ಸರ್ಕಾರದ ದೃಢತೆ ಮತ್ತು ಸುಭದ್ರತೆ, ಸುಸ್ಥಿರತೆ ಎಲ್ಲವೂ ಭ್ರಮೆಯಾಗಬಹುದು. ಈ ಹಿಂದೆ ನಾವು ಕಂಡಂತೆ ಪ್ರಾಂತ್ಯಗಳ ಸಂವಿಧಾನದ ಕಾರ್ಯ ವೈಖರಿಯಲ್ಲಿ, ಪ್ರತಿಪಕ್ಷವನ್ನು ಕಡೆಗಣಿಸಲಾಗಿತ್ತು. ನಗಣ್ಯವೆಂದು ಭಾವಿಸಲಾಗಿತ್ತು ಹಾಗೂ ಕೆಲವೊಮ್ಮೆ ಶಿಕ್ಷೆಗೂ ಗುರಿಪಡಿಸಲಾಗಿತ್ತು. ಪ್ರಸ್ತುತ ಜಾರಿಯಲ್ಲಿರುವ ಸಂಸದೀಯ ಪದ್ಧತಿಯನ್ನೂ ಕಂಡಿದ್ದೇವೆ. ಇದು ಸಚಿವ ಮಂಡಲಿಯನ್ನು ಬೆಂಬಲಿಗರ ಪರ ತೋರಿಸುವ ಪಕ್ಷಪಾತ, ಸ್ವಜನ ಹಿತಾಸಕ್ತಿಗೆ ಸೊಪ್ಪು ಹಾಕಿತು. ಸಚಿವರು, ಜನಸೇವೆಗಿಂತ ಮಿಗಿಲಾಗಿ ತಮ್ಮ ಪಕ್ಷದ ಸದಸ್ಯರ ಸೇವೆಯಲ್ಲಿ ಹೆಚ್ಚಾಗಿ ತೊಡಗಿದ್ದರು. ಸಚಿವನಾದವನು ರಾಷ್ಟ್ರದ ವಿಧೇಯ ಸೇವಕನಾಗಿರಲಿಲ್ಲ.

ಬದಲಾಗಿ, ಸಂಪುಟದಲ್ಲಿ ತನ್ನನ್ನು ಬೆಂಬಲಿಸುವವರ ಸೇವಕನಾಗಿದ್ದ. ಆದುದರಿಂದ ಈ ವ್ಯವಸ್ಥೆ ಹಿಂದೆ ಸಮರ್ಪಕ ರೀತಿಯಲ್ಲಿ ಅನುಷ್ಠಾನಗೊಂಡಿಲ್ಲವೆಂಬುದು ನನ್ನ ನಿವೇದನೆ. ಭಾರತ ತನ್ನೊಲವಿನ ಸ್ವಾತಂತ್ರ್ಯದ ಗುರಿ ತಲುಪುತ್ತಿರುವ ಈ ಕಾಲಘಟ್ಟದಲ್ಲಿ ನಾವು ಕಾಣುತ್ತಿರುವುದೇನು–ದೊಂಬಿ, ಹತ್ಯೆ, ಲೂಟಿ; ಇದು ಯಾಕೆ? ಒಂದು ದುರ್ಬಲ ಕಾರ್ಯಾಂಗದ ಯಾನಕ್ಕೆ ಸಚಿವರು ಹುಟ್ಟುಹಾಕುತ್ತಿರುವುದೇ ಕಾರಣ. ಈ ಸಚಿವರು ತಮ್ಮ ಅಸ್ತಿತ್ವಕ್ಕಾಗಿ ಕೋಮು ಸಂಘರ್ಷದಲ್ಲಿ ಆಸಕ್ತಿ ಹೊಂದಿದವರನ್ನು ಆಶ್ರಯಿಸುತ್ತಾರೆ. ಪ್ರತಿಯೊಬ್ಬರೂ ಪಂಡಿತ್ ಜವಾಹರಲಾಲ್ ನೆಹರು ಆಗಲಾರರು. ಪಂಡಿತ್ ಜವಾಹರಲಾಲ್ ನೆಹರು ಅವರು ಬಿಹಾರ್‌ಗೆ ಹೋದಾಗ ಗಲಭೆ ಮುಂದುವರಿಸುವ ಜನರನ್ನು ಬಾಂಬ್ ಇಕ್ಕಿ ಕೊಲ್ಲಲಾಗುವುದೆಂದು ಘೋಷಿಸಿದರು. ಇಡೀ ಭಾರತದಲ್ಲಿ ಯಾರೊಬ್ಬ ಮುಸ್ಲಿಂ ಅಥವಾ ಹಿಂದೂ ಸಚಿವನಾಗಲಿ ಅಂತಹ ನಿಲುವನ್ನು ತಾಳಲಿಲ್ಲ. ವಜ್ರಗಳು ಅಪರೂಪ; ಕಲ್ಲುಗಳು ಅಸಂಖ್ಯ. ಇಂದು ನಮಗೆ ಬೇಕಿರುವುದು ಒಂದು ಬಲಿಷ್ಠ ಸರ್ಕಾರ. ನಾವು ಬಯಸುವುದು ಒಂದು ರಾಷ್ಟ್ರಪ್ರೇಮಿ ಸರ್ಕಾರವನ್ನು ಒಂದು ಪಕ್ಷಪಾತ ರಹಿತವಾದ ಜನರ ಖಯಾಲಿಗೆ ತಲೆ ಭಾಗದ ಕಾರ್ಯಾಂಗವನ್ನು ಬಯಸುತ್ತೇವೆ. ಇಂದು ಎಲ್ಲ ಪ್ರಾಂತ್ಯಗಳೂ ದುರ್ಬಲ, ಅಸ್ಥಿರ ಮನಸ್ಸುಳ್ಳ ಕಾರ್ಯನಿರ್ವಾಹಕರಿಂದ ತುಂಬಿಹೋಗಿವೆ. ಅವರು ಪಕ್ಷದ ಸದಸ್ಯರ ಪ್ರಭಾವಕ್ಕೆ ಪಕ್ಕಾಗುತ್ತಾರೆ. ಅವರು ತಮ್ಮ ಸ್ಥಾನದಲ್ಲಿ ಮುಂದುವರಿಯಬೇಕಿದ್ದರೆ, ಅಂಥವರ ಅವಗ್ರಹಕ್ಕೆ ಪಾತ್ರರಾಗುವುದು ಕಷ್ಟವಾಗುತ್ತದೆ. ಸಂಸದೀಯ ಸರ್ಕಾರ ಪ್ರಜಾಸತ್ತಾತ್ಮಕವೆಂದು ಹೇಳಲಾಗುತ್ತಿದೆ. ಅಮೆರಿಕ ಪ್ರಜಾಸತ್ತಾತ್ಮಕ ರಾಷ್ಟ್ರ. ಅಲ್ಲಿರುವುದೂ ಪ್ರಜಾಸತ್ತಾತ್ಮಕ ಸಂವಿಧಾನವೆ. ಇಲ್ಲಿ ನಾವು ಕಾಣುವುದು ಒಂದು ಸಂಸದೀಯೇತರ ಕಾರ್ಯಾಂಗ. ರಾಷ್ಟ್ರದ ಇಡೀ ಆಡಳಿತ ಮೂರು ಭಾಗವಾಗಿದೆ. ಒಂದು ನ್ಯಾಯಾಂಗ ಇನ್ನೊಂದು ಕಾರ್ಯಾಂಗ; ಮೂರನೆಯದು ಶಾಸಕಾಂಗ. ಶಾಸನಸಭೆ ರೂಪಿಸಿದ ನೀತಿ ನಿಯಮಗಳನ್ನು ಉಲ್ಲಂಘಿಸಲು ಕಾರ್ಯಾಂಗಕ್ಕೆ ಅಸಾಧ್ಯ. ಕಾರ್ಯಾಂಗದ ಅತಿರೇಕವನ್ನು ನಿಯಂತ್ರಿಸಲು ನ್ಯಾಯಾಂಗವಿದೆ. ಇಂತಹ ಸನ್ನಿವೇಶಗಳಲ್ಲಿ ಎಲ್ಲೆಲ್ಲೂ ಕೋಮು ಉದ್ವಿಗ್ನತೆ ಇರುವಾಗ, ಈ ರಾಷ್ಟ್ರದಲ್ಲಿ ವಿಧ್ವಂಸಕ ಶಕ್ತಿಗಳಿರುವಾಗ, ಶಾಸನ ಸಭೆಯ ಮತಚಲಾವಣೆಯಿಂದ ಪದಚ್ಯುತಿಗೊಳಿಸಲಾಗದ ಕಾರ್ಯಾಂಗದ ಹೊರತು ಬೇರೆ ದಾರಿಯಿಲ್ಲ. ಹಿಂದೊಮ್ಮೆ ಪ್ರಾಂತೀಯ ಸಂವಿಧಾನದ ಪರಿಶೀಲನೆಯ ಸಂದರ್ಭದಲ್ಲಿ ಡಾ. ಪಟ್ಟಾಭಿಯವರು ಉನ್ನತ ಬೌದ್ಧಿಕಸ್ತರದಲ್ಲಿ ವಿವರಿಸಲು ಬಯಸಿದ್ದರು. ಭಾವುಕತೆಗೆ ಪಕ್ಕಾಗಿ ಮಾತನಾಡುತ್ತಿದ್ದರೂ ಸಹ ಅವರು ಸಂಸದೀಯೇತರ ಕಾರ್ಯಾಂಗ ಭಾರತಕ್ಕೆ ಹೊಂದುವುದಿಲ್ಲವೆಂದು ಪ್ರತಿಪಾದಿಸುತ್ತಿದ್ದರು. ಅದರ ಬದಲು ಭಾರತಕ್ಕೆ ಪ್ರತ್ಯೇಕ ಮತದಾರರು ಬೇಕೆಂದು ವಾದಿಸುತ್ತಿದ್ದರು. ಕೋಮು ನಿರ್ಣಯದ ಬಗ್ಗೆ ಅವರು ಮಾಡಿದ ವಾದ, ವಿಷಯಕ್ಕೆ ಹೊರತಾಗಿತ್ತು. ಅಮೆರಿಕದಲ್ಲಿ ಕೋಮು ಸಮಸ್ಯೆ ಇಲ್ಲ. ಆದರೂ ಸಂಸದೀಯೇತರ ಕಾರ್ಯಾಂಗ ಪದ್ಧತಿಯನ್ನು ಅಲ್ಲಿ ಅಳವಡಿಸಲಾಗಿದೆ. ಇದು ವಿಭಿನ್ನ ಮತಗಳ ವಿಭಿನ್ನ ಸಿದ್ಧಾಂತಗಳ ದೇಶ. ವಿಭಿನ್ನ ಸಂಸ್ಕೃತಿಗಳ ನಾಡು. ಭಾರತೀಯ ಇತಿಹಾಸದಲ್ಲಿ ಇದೊಂದು ನಿರ್ಣಾಯಕ ಘಟ್ಟ. ಈ ಹೊತ್ತಿನಲ್ಲಿ ನಾವು ಆಂತರಿಕ ಕಲಹವನ್ನು ಬಯಸುವುದಿಲ್ಲ. ಎಲ್ಲ ಆಕ್ರಮಣಗಳನ್ನೂ ತಡೆಯಬಲ್ಲ, ದಿಟ್ಟ ಸರ್ಕಾರವನ್ನು ಬಯಸುವ ಈ ಕ್ಷಣದಲ್ಲಿ ಕನಿಷ್ಠ ಮಧ್ಯಾಂತರ ಅವಧಿಯಲ್ಲಾದರೂ ಒಂದು ಪದಚ್ಯುತಿಗೊಳಿಸಲಾಗದ ಕಾರ್ಯಾಂಗ ಹಾಗೂ ಸಂಸದೀಯೇತರ ಕಾರ್ಯಾಂಗ ಇರಬೇಕು. ಇದರಲ್ಲಿದೆ ಭಾರತೀಯರ ಸಂರಕ್ಷಣೆ. ಪಕ್ಷಪಾತ ಧೋರಣೆಗಾಗಲಿ ಸ್ವಜನಹಿತಾಸಕ್ತಿಗಾಗಲಿ ಇಲ್ಲಿ ಆಸ್ಪದವಿರುವುದಿಲ್ಲ. ನನ್ನ ತಿದ್ದುಪಡಿಯನ್ನು ಅಂಗೀಕರಿಸುವಂತೆ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿಯ ತಾತ್ಪರ್ಯ ಹೀಗಿದೆ: "ಸಚಿವ ಮಂಡಲಿಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಕೊಡುವುದಕ್ಕೆ ಅವಕಾಶ ಕಲ್ಪಿಸಬೇಕು". ಸಚಿವ ಮಂಡಲಿಯ ವಾಸ್ತವ ರಚನೆಯಾದಾಗ ಈ ಅಂಶ ನೆನಪಿನಲ್ಲಿರಲಿ ಎಂದು ಸಲಹೆ ಮಾಡುವುದಕ್ಕಿಂತ ಹೊರತಾಗಿ, ನಾನೇನೂ ಒತ್ತಾಯ ಪಡಿಸಲು ಬಯಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಗೋಕುಲ್‌ಭಾಯ್ ಭಟ್.

**ಶ್ರೀ ಗೋಕುಲ್‌ಭಾಯ್ ಡಿ. ಭಟ್** (ಪೂರ್ವ ರಜಪೂತಾನ ರಾಜ್ಯಗಳ ಸಮೂಹ) : *[ಮಾನ್ಯರೆ: ೧೧ನೇ ಖಂಡ ತಿಳಿಯಪಡಿಸುವಂತೆ ಸಚಿವ ಮಂಡಲಿಯ ಜೊತೆಗೆ ಒಬ್ಬರು ಪ್ರಧಾನಿ ಇರಬೇಕು. ಆದರೆ ಸಚಿವರ ಆಯ್ಕೆ ಅಥವಾ ಅನುಮೋದನೆ ಹೇಗೆ ಎನ್ನುವುದನ್ನು ಅದು ತಿಳಿಸುವುದಿಲ್ಲ. ಸಂಪುಟ ಸಚಿವರು ಸಂಸದರಾಗಿರುತ್ತಾರೆಯೆ? ಹಾಗೆ ಅವರು ಸಂಸದರೆಂದು ನಿರೂಪಿಸುವ ಖಂಡಗಳು ಯಾವುವು? ಅವರ ವೇತನವೆಷ್ಟು? ಅದರಲ್ಲೇನಾದರೂ ಬದಲಾವಣೆ ಮಾಡಬಹುದೆ? ಇದರ ಬಗ್ಗೆ ಎಲ್ಲೂ ತಿಳಿಸಿಲ್ಲ. ಪ್ರಾಂತೀಯ ಸಂವಿಧಾನದಲ್ಲಿ ನಾವು ಮಾಡಿರುವಂತೆ ಇವೆಲ್ಲವನ್ನೂ ಇಲ್ಲಿ ಸ್ಪಷ್ಟಪಡಿಸುವುದು ಉತ್ತಮವೆಂಬ ಅಂಶವನ್ನು ನಾನಿಲ್ಲಿ ಒತ್ತಿ ಹೇಳಲು ಬಯಸುತ್ತೇನೆ. ಆದರೆ ಇದು ಒಕ್ಕೂಟಕ್ಕೆ, ಕೇಂದ್ರಕ್ಕೆ ಸಂಬಂಧಿಸಿದ ವಿಷಯವೆಂದು ಕಾನೂನು ತಜ್ಞರು ಮತ್ತು ನನಗಿಂತ ಕಾನೂನಿನ ಬಗ್ಗೆ ಹೆಚ್ಚು ಪರಿಣತಿಯುಳ್ಳವರು ಹೇಳುತ್ತಾರೆ. ಅಂತಿಮ ಕರಡು ತಯಾರಾದ ಮೇಲೆ ಈ ವಿಷಯವನ್ನು ಪರಿಶೀಲಿಸುವುದರಿಂದ ಎಲ್ಲವೂ ಸ್ಪಷ್ಟವಾಗುತ್ತದೆ; ಈಗ ಚರ್ಚಿಸಿ ಪ್ರಯೋಜನವಿಲ್ಲ ಎನ್ನುತ್ತಾರೆ. ಸಚಿವ ಸಂಪುಟ ಹೇಗೆ ರಚನೆಯಾಗುತ್ತದೆ ಎಂಬುದನ್ನು ಈಗಲೆ ತಿಳಿಸುವುದು ಅತ್ಯಗತ್ಯವೆಂದು ನಾನು ಭಾವಿಸುತ್ತೇನೆ. ಇವೆಲ್ಲವೂ ಪ್ರಾಂತೀಯ ಸಂವಿಧಾನದಲ್ಲಿ ನಿರೂಪಿಸಿದುದಕ್ಕೆ ಅನುಗುಣವಾಗಿರುತ್ತವೆ ಎಂದು ನಮಗೆ ಆಶ್ವಾಸನೆ ನೀಡಲಾಗಿದೆ. ಈ ಭರವಸೆ ಹೊತ್ತು ಮತ್ತು ಈ ತಿದ್ದುಪಡಿಯನ್ನು ಮಂಡಿಸಬಾರದೆಂಬ ಅಭಿಪ್ರಾಯ ಹಾಗೂ ಸಲಹೆಯ ಮೇಲೆ ನಾನು ಸದನದ ಮುಂದೆ ಇದನ್ನು ಮಂಡಿಸಲು ಬಯಸುವುದಿಲ್ಲ.]*

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ ಖಂಡ ಈಗಿರುವಂತೆ ಸಚಿವ ಮಂಡಲಿಯ ಆಯ್ಕೆಯ ವಿಧಾನವನ್ನು ಕುರಿತು ಏನೂ ತಿಳಿಸುವುದಿಲ್ಲ. ಅಂತೆಯೇ ಶಾಸನ ಸಭೆಗೆ ಅದರ ಹೊಣೆ ಏನೆಂಬುದೂ ತಿಳಿಯದು. ಈ ಅಂಶ ಕುರಿತಂತೆ, ಹಲವಾರು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಇದರ ಪ್ರಮುಖ ಅಂಶಗಳೆಲ್ಲವನ್ನೂ ಒಳಗೊಂಡಂತೆ ತಿದ್ದುಪಡಿಯನ್ನು ಮಂಡಿಸಲು ನಾನು ಸೂಚನೆ ಕೊಟ್ಟಿದ್ದೇನೆ. ಅದರಂತೆ ೧೧ನೇ ಖಂಡದ ಕೊನೆಯಲ್ಲಿ ಕೆಳಕಂಡುದನ್ನು ಸೇರಿಸಬೇಕು:

"ಪ್ರಧಾನಿಯವರು ರಾಷ್ಟ್ರಪತಿಗಳಿಂದ ನೇಮಕಗೊಳ್ಳುತ್ತಾರೆ ಮತ್ತು ಪ್ರಧಾನಿಯವರ ಸಲಹೆಯ ಮೇರೆಗೆ ಇತರ ಸಚಿವರು ರಾಷ್ಟ್ರಪತಿಗಳಿಂದ ನೇಮಕಗೊಳ್ಳುತ್ತಾರೆ. ಲೋಕಸಭೆಗೆ ಸಚಿವ ಮಂಡಳಿ ಹೊಣೆಯಾಗಿರುತ್ತದೆ:

ಈ ತಿದ್ದುಪಡಿಯ ಸಾರಾಂಶವನ್ನು ವಿವರಿಸಲು ನನಗೆ ಕೆಲವೇ ಪದಗಳು ಸಾಕು. ಸಚಿವ ಮಂಡಳಿಯ ರಚನೆಗಾಗಿ ಪ್ರಧಾನಿಯವರನ್ನು ರಾಷ್ಟ್ರಪತಿಗಳ ಆಹ್ವಾನಿಸಲೇಬೇಕು. ಸಹಜವಾಗಿಯೇ ರಾಷ್ಟ್ರಪತಿ ಸಂಪ್ರದಾಯ ರೀತ್ಯಾ, ಪಕ್ಷದ ಮುಂದಾಳನ್ನು ಆಹ್ವಾನಿಸುತ್ತಾರೆ. ಆ ಪಕ್ಷವು ಸ್ವಂತ ಸಂಖ್ಯಾಬಲದಿಂದಲೋ ಅಥವಾ ಸದನದಲ್ಲಿರುವ ಇತರ ಸಮೂಹಗಳ ಬೆಂಬಲದಿಂದಲೋ ಸಾಕಷ್ಟು ಸುಸ್ಥಿರವಾದ ಬಹುಸಂಖ್ಯೆಯನ್ನು ಪಡೆದಿರುತ್ತದೆ. ಇತರ ಸಚಿವರನ್ನು ಪ್ರಧಾನಿಯವರ ಸಲಹೆಯ ಮೇರೆ ರಾಷ್ಟ್ರಪತಿಗಳು ಆಯ್ಕೆ ಮಾಡುತ್ತಾರೆ. ಕೆಳಸದನ ಅಥವಾ ಲೋಕಸಭೆಗೆ ಮಂಡಲಿಯು ತೋರಬೇಕಾದ ಸಮಷ್ಟಿ ಹೊಣೆಗಾರಿಕೆಗೆ ಅವಕಾಶ ಮಾಡಿಕೊಡಲಾಗಿರುತ್ತದೆ. ಸಾಮಾನ್ಯ ಹೊಣೆಗಾರಿಕೆ ಇರಬೇಕಾದುದು ಆ ಸದನದ ಬಗ್ಗೆ. ಇಡೀ ಸಂಸತ್ತಿಗಲ್ಲ. ನಾನು ಕಂಡಂತೆ ಒಂದು ತಿದ್ದುಪಡಿಯಲ್ಲಿ ಮಾಡಿರುವ ಸಲಹೆಯ ರೀತ್ಯಾ ಜಂಟಿ ಹಾಗೂ ಬಿಡಿ ಜವಾಬ್ದಾರಿ ಎರಡೂ ಇರಬೇಕು. ನಿರ್ದೇಶಕರ ಮಂಡಲಿಗೂ ಇತರ ಜನರಿಗೂ ನಡುವೆ ಇರಲು ಸಾಧ್ಯವಾಗಬಹುದಾದ ಸಾಧಾರಣ ಒಡಂಬಡಿಕೆಯ ಪದ್ಧತಿಯನ್ನು ಸರ್ಕಾರದ ವಿಷಯದಲ್ಲಿ ಅನುಕರಿಸುವ ಅಗತ್ಯವಿದೆಯೆಂದು ನಾನು ಭಾವಿಸುವುದಿಲ್ಲ. ಲೋಕಸಭೆಗೆ ಮಂಡಳಿಯು ಸಾಮೂಹಿಕ ಹೊಣೆಗಾರಿಕೆ ತೋರುವಂತಾದರೆ ಅಷ್ಟು ಸಾಕು. ಮಾನ್ಯರೆ ನಾನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಗಳ ಬಗ್ಗೆ ನನಗೆ ಸೂಚನೆ ಬಂದಿದೆ. ಖಂಡ ಹಾಗೂ ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತ.

**ಶ್ರೀ ತಾಜಮಲ್ ಹುಸೇನ್ :** ಮಾನ್ಯ ಸಭಾಧ್ಯಕ್ಷರೆ, ಆಡಳಿತ ಪ್ರಕಾರ್ಯಗಳನ್ನು ನಿರ್ವಹಿಸಲು ಅಧ್ಯಕ್ಷರಿಗೆ ಸಲಹೆ ನೀಡುವ ಮಂತ್ರಿಮಂಡಲವೂ ಅದರ ನೇತಾರ ಪ್ರಧಾನಿಯೂ ಇರಬೇಕೆಂದು ೧೦ನೇ ಖಂಡ ತಿಳಿಸುತ್ತದೆ. ಮಾನ್ಯರೆ ಸಚಿವ ಮಂಡಲದ ರಚನೆ ಹೇಗೆ ಎಂಬುದರ ಪ್ರಸ್ತಾವನೆ ಈ ಖಂಡದಲ್ಲಿಲ್ಲ. ಆದುದರಿಂದ ಒಂದು ತಿದ್ದುಪಡಿಯ ಮಂಡನೆ ನನ್ನ ಗಮನಕ್ಕೆ ಬಂದಿದೆ. ಅದರಂತೆ ಒಂಟಿ ವರ್ಗಾವಣೀಯ ಮತದ ವಿಧಾನದಲ್ಲಿ ಅನುಪಾತೀ ಪ್ರಾತಿನಿಧ್ಯದ ನಿಯಮದ ರೀತ್ಯಾ, ಪ್ರತಿಯೊಬ್ಬ ಸಚಿವರೂ ಸಭೆಯಿಂದ ಚುನಾಯಿತರಾಗಬೇಕು ಮತ್ತು ಸಚಿವ ಮಂಡಲಿ ಸಭೆಗೆ ಹೊಣೆಯಾಗಿರಬೇಕು. ಮಾನ್ಯರೆ ಈಗ ನಾವು ಈ ತಿದ್ದುಪಡಿಯನ್ನು ಎರಡು ಭಾಗಗಳಾಗಿ ವಿಭಜಿಸುವುದು ಕ್ಷೇಮ; ಮೊದಲನೆ ಭಾಗ, ಸಚಿವರು ಸಭೆಯಿಂದ ಚುನಾಯಿತರಾಗಬೇಕು. ಎರಡನೇ ಭಾಗ ಸಚಿವರ ಸಂಪುಟ, ಸಭೆಗೆ ಹೊಣೆಯಾಗಿಬೇಕು. ಎರಡನೇ ಭಾಗಕ್ಕೆ ನನ್ನ ಸಂಪೂರ್ಣ ಸಹಮತ ಇದೆ. ಸಚಿವ ಮಂಡಲಿಗೆ ಸಭೆಯಲ್ಲಿ ಬಹುಸಂಖ್ಯಾತರ ಬೆಂಬಲವಿಲ್ಲದಾಗ ಅವರು ಹುದ್ದೆಯಲ್ಲಿರಲಾರರು, ಅಥವಾ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ಆಗಲೂ ಅವರು ನಿರ್ಗಮಿಸುತ್ತಾರೆ. ಆದುದರಿಂದ ತಿದ್ದುಪಡಿಯ ಈ ಭಾಗದ ಬಗ್ಗೆ ನನಗೆ ಒಪ್ಪಿಗೆ ಇದೆ. ಆದರೆ ಸಭೆಯಿಂದ ಸಚಿವರು ಚುನಾಯಿಸಲ್ಪಡುವರೆಂಬ ಮೊದಲ ಭಾಗಕ್ಕೆ ನನ್ನ ಒಪ್ಪಿಗೆ ಇಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ಒಂಟಿ ವರ್ಗಾವಣೆಯ ಮತ ವಿಧಾನದಿಂದ ಅನುಪಾತೀ ಪ್ರಾತಿನಿಧ್ಯದ ನಿಯಮದ ರೀತ್ಯಾ, ಸಭೆಯ ಸದಸ್ಯರಿಂದ ಚುನಾಯಿಸಲ್ಪಡುವುದಾದರೆ ಆಗ ಮುಂದೇನು? ಒಂದು ಸಣ್ಣ ಪಕ್ಷ ಒಂಟಿ ವರ್ಗಾವಣೀಯ ಮತದ ವಿಧಾನದಿಂದ ಅನುಪಾತೀ ಪ್ರಾತಿನಿಧ್ಯ ನಿಯಮದ ರೀತ್ಯಾ ಚುನಾಯಿಸುವುದಾದರೆ ಆ ಸಣ್ಣ ಪಕ್ಷ ಸಚಿವರನ್ನು ಚುನಾಯಿಸುವಲ್ಲಿ ಸಫಲವಾದೀತು. ಮಾನ್ಯರೆ, ಸಭೆಯ ಬಹುಸಂಖ್ಯಾತರ ರಾಜಕೀಯ ನಿಲುವನ್ನು ಆ ಸಣ್ಣಪಕ್ಷ ತಾಳದಿರಬಹುದು. ಹಾಗಾಗಿ ಸಚಿವ ಸಂಪುಟದಲ್ಲಿ ಎರಡು ವಿಭಿನ್ನ ಅಭಿಪ್ರಾಯಗಳು ಸಚಿವರ ನಡುವೆ ಮೂಡಬಹುದು. ಹಾಗಾಗುವುದಾದರೆ ಮಂತ್ರಿಮಂಡಲದಲ್ಲಿ ಕೂಡಿ ಮಾಡುವ ಕಾರ್ಯಕ್ಕೆ ಅವಕಾಶವಿರಲಾರದು. ಇದನ್ನು ಸುಸ್ಥಿರ ಮಂತ್ರಿಮಂಡಲವೆನ್ನಲಾಗದು. ಹೇಗೂ ಈ ವಿಷಯದಲ್ಲಿ ಇಂಗ್ಲಿಷ್ ಪದ್ಧತಿಯನ್ನು ಕಂಡಿದ್ದೇವೆ. ಇಂಗ್ಲೆಂಡ್‌ನಲ್ಲಿ ಈ ಪದ್ಧತಿ ಶತಮಾನಗಳಿಂದ ರೂಢಿಯಲ್ಲಿದೆ. ಅಲ್ಲಿ ಅದು ಯಶಸ್ವಿಯಾಗಿದೆ. ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವುದೇನು? ರಾಜ್ಯದ ಮುಖ್ಯಸ್ಥರು ಎಂದರೆ ದೊರೆಯಿಂದ ಪಕ್ಷದ ಮುಂದಾಳಿಗೆ ಕರೆ ನೀಡಲಾಗುತ್ತದೆ. ಅವರು ಮುಖ್ಯಮಂತ್ರಿಯಾಗಿಯೋ ಪ್ರಧಾನಿಯಾಗಿಯೋ ನೇಮಕಗೊಳ್ಳುತ್ತಾರೆ. ಈ ಮುಖ್ಯಮಂತ್ರಿಯೋ ಪ್ರಧಾನಿಯೋ ಇತರ ಸಚಿವರ ಪಟ್ಟಿಯನ್ನು ಸಲ್ಲಿಸಬೇಕು. ದೊರೆ ಪ್ರಧಾನಿಯೊಡನೆ ಸಮಾಲೋಚಿಸಿ ಎಲ್ಲ ಸಚಿವರನ್ನೂ ನೇಮಕ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಸಚಿವ ಮಂಡಲಿ ಸುಸ್ಥಿರವಾಗಿರುತ್ತದೆ. ಏಕೆಂದರೆ ಪ್ರಧಾನಿಗೆ ಸದನದಲ್ಲಿ ಬಹುಮತವಿದ್ದರೆ ಅವರು ಮುಂದುವರಿಯುತ್ತಾರೆ. ಇಲ್ಲವಾದಲ್ಲಿ ಸಚಿವ ಮಂಡಲಿಯನ್ನು ಮುನ್ನಡೆಸಲಾರರು. ಆದರೆ ಸಚಿವ ಸಂಪುಟದಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ ಸಚಿವರು ಇರುವುದು ನನಗೆ ಒಪ್ಪಿಗೆ ಆಗಲಾರದು.

ಮಾನ್ಯರೆ ಇನ್ನೊಂದು ತಿದ್ದುಪಡಿ ನಮ್ಮ ಮುಂದಿದೆ. ಅದೆಂದರೆ ಕೇಂದ್ರ ಕಾರ್ಯಾಂಗ ಸಂಸದೀಯೇತರವಾಗಿರಬೇಕು. ಪದಚ್ಯುತಿಗೊಳ್ಳದಂತಿರಬೇಕು ಎಂಬುದು. ಭ್ರಷ್ಟಾಚಾರ ಮುಂತಾದ ಆರೋಪಗಳ ಆಧಾರದ ಮೇಲೆ ಯಾವುದೇ ಸಂದರ್ಭದಲ್ಲಾಗಲೀ ನ್ಯಾಯಾಧಿಕರಣದ ಮುಂದೆ ಛೀಮಾರಿ ಹಾಕಿ ಸಚಿವ ಸಂಪುಟದ ಸದಸ್ಯನನ್ನು ಪದಚ್ಯುತಿಗೊಳಿಸಬಹುದು. ಒಂಟಿ ವರ್ಗಾವಣೀಯ ಮತದಿಂದ ಇಡೀ ಸದನ ಪ್ರಧಾನಿಯನ್ನು ಚುನಾಯಿಸಬೇಕು ಇತರ ಸಚಿವರು ಒಂಟಿ ವರ್ಗಾವಣೆಯಾಗದ ಮತದಿಂದ ಚುನಾಯಿಸಲ್ಪಡಬೇಕು.

ಈ ತಿದ್ದುಪಡಿಯನ್ನು ಸುಲಲಿತವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಮೊದಲ ಭಾಗ ಸಚಿವ ಸಂಪುಟ ಸಂಸದೀಯೇತರವಾಗಿರಬೇಕು; ಪದಚ್ಯುತವಾಗಬಾರದು. ಇದನ್ನು ನಾನು ಅನುಮೋದಿಸಲಾರೆ.

ಸಚಿವರ ಸಂಪುಟದ ಸಂಸದೀಯೇತರ ಸ್ವರೂಪ, ಪ್ರಜಾಪ್ರಭುತ್ವ ವಿರೋಧಿ ಎಂದು ನನಗನಿಸುತ್ತೆ. ಸಚಿವ ಸಂಪುಟ, ಸದನದ ವಿಶ್ವಾಸ ಕಳೆದುಕೊಂಡಾಗ ಅದನ್ನು ಅದರ ಸ್ಥಾನದಿಂದ ಇಳಿಸಬೇಕು. ಅದು ಸದನದ ವಿಶ್ವಾಸ ಕಳೆದುಕೊಂಡ ಮೇಲೆ ಒಂದು ನಿಮಿಷ ಕೂಡ ಅಲ್ಲಿರಬಾರದು.

ಎರಡನೆಯ ಭಾಗ, ನ್ಯಾಯಾಧಿಕರಣದ ಮುಂದೆ ಛೀಮಾರಿ ಹಾಕಿ, ಸಚಿವರನ್ನು ಸ್ಥಾನಭ್ರಷ್ಟಗೊಳಿಸುವುದು. ಈ ಅಂಶವೂ ನನಗೆ ಒಪ್ಪಿಗೆಯಾಗಲಿಲ್ಲ. ಒಬ್ಬ ಸಚಿವರು ಸದನದ ವಿಶ್ವಾಸವನ್ನು ಗಳಿಸದಿದ್ದರೆ ಅವರ ವಿರುದ್ಧ ಆರೋಪವೇನಾದರೂ ಇದ್ದರೆ ಆ ವಿಷಯವನ್ನು ಸದನದ ಗಮನಕ್ಕೆ ತಂದು ಅವರನ್ನು ಪದವಿಯಿಂದ ಕೆಳಗಿಳಿಸಬಹುದು. ಅವರನ್ನು ನ್ಯಾಯಾಧಿಕರಣದ ಮುಂದೆ ಎಳೆತರುವುದೇಕೆ? ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೇಗೆ ಕಾರ್ಯಸಾಧ್ಯವೆಂಬುದು ನನಗೆ ತಿಳಿಯದು. ನಮ್ಮ ರಾಷ್ಟ್ರಕ್ಕೆ ನಾವು ಅಳವಡಿಸಬೇಕೆಂದಿರುವ ಈ ಕ್ರಮ ಅರ್ಥಹೀನ.

ಮೂರನೆಯ ಭಾಗ ಪ್ರಧಾನಿಯವರ ಚುನಾವಣೆ. ಇಡೀ ಸದನದ ಒಂಟಿ ವರ್ಗಾವಣೀಯ ಮತ ವಿಧಾನದಿಂದ ಪ್ರಧಾನಿಯ ಚುನಾವಣೆಯಾಗಬೇಕು. ಆದರೆ ಇತರ ಸಚಿವ ಸಂಪುಟ ಸದಸ್ಯರು ಒಂಟಿ ವರ್ಗಾವಣೆಯಾಗದ ಮತವಿಧಾನದಿಂದ ಚುನಾಯಿತರಾಗಬೇಕು. ಗೌರವಾನ್ವಿತ ಪ್ರಸ್ತಾವಕರು ಈ ವ್ಯವಸ್ಥೆಯಿಂದ ಯಾವ ಪ್ರಯೋಜನವನ್ನು ನಿರೀಕ್ಷಿಸುತ್ತಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಇಡೀ ಸದನ ಒಬ್ಬ ವ್ಯಕ್ತಿಯನ್ನು ಚುನಾಯಿಸಿದರೆ, ಬಹುಸಂಖ್ಯಾತ ಪಕ್ಷದಿಂದ ಆ ವ್ಯಕ್ತಿ ಆರಿಸಿಬರುತ್ತಾನೆ. ಒಂದು ವೇಳೆ ಸದನದಲ್ಲಿ ೧೫೦ ಸದಸ್ಯರಿದ್ದು, ಪಕ್ಷವೊಂದೆ ಇದ್ದರೆ ಅದು ಕಾಂಗ್ರೆಸ್ ಅಥವಾ ಲೀಗ್ ಎನ್ನಲಾರೆ; ಏಕೆಂದರೆ ಅಲ್ಲಿ ಹಳೆಯ ಕಾಂಗ್ರೆಸ್ ಅಥವಾ ಹಳೆಯ ಲೀಗ್ ಇರುವುದಿಲ್ಲ. ಹಿಂದೂಸ್ತಾನದಲ್ಲಿ ಪಕ್ಷಗಳು ಬೇರೆ ಬೇರೆ ಕವಲು ದಾರಿಯಲ್ಲಿರುತ್ತವೆ. ಆ ಒಂದು ಪಕ್ಷದಲ್ಲಿ ೧೦೦ ಸದಸ್ಯರಿದ್ದು ವಿರೋಧ ಪಕ್ಷದಲ್ಲಿ ೫೦ ಜನ ಸದಸ್ಯರು ಇರುತ್ತಾರೆ.

**ಖಾಜಿ ಸೈಯದ್ ಕರೀಮುದ್ದೀನ್ :** ಗೌರವಾನ್ವಿತ ಸದಸ್ಯರಿಗೆ ಲೀಗ್ ಅಥವಾ ಕಾಂಗ್ರೆಸ್ ಪಕ್ಷ ಇರಲಾರದೆಂಬುದು ಹೇಗೆ ಗೊತ್ತು?

**ಶ್ರೀ ತಾಜಮಲ್ ಹುಸೇನ್ :** ನನಗೆ ಈ ಪ್ರಶ್ನೆ ಕೇಳಿದ್ದು ಸಂತೋಷ. ಕಾಂಗ್ರೆಸ್ ಪಕ್ಷದ ಏಕಮೇವ ಗುರಿ, ವಿದೇಶಿ ಅಧಿಕಾರದ ಮಧ್ಯ ಪ್ರವೇಶವಿಲ್ಲದೆ ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುವುದು. ಅದು ತನ್ನ ಗುರಿಸಾಧನೆಯಲ್ಲಿ ಯಶಸ್ವಿಯಾಗಿದೆ. ಕಾಂಗ್ರೆಸ್ ತನ್ನ ಗುರಿ ತಲುಪಿದೆ. ಲೀಗ್‌ನ ಗುರಿ, ದೇಶದ ವಿಭಜನೆಯಾಗಿ ಪಾಕಿಸ್ತಾನವನ್ನು ಪಡೆಯುವುದು. ಅದನ್ನು ಅವರು ಪಡೆದಿದ್ದಾರೆ. ಎರಡೂ ಪಕ್ಷಗಳು ಅನುಕ್ರಮವಾಗಿ ತಮ್ಮ ಗುರಿಗಳನ್ನು ಸಾಧಿಸಿವೆ. ಕಾಂಗ್ರೆಸ್ ಬಯಸಿದ್ದು ದೊರೆತಿದೆ, ಲೀಗ್‌ನ ಬಯಕೆ ಈಡೇರಿದೆ. ಈಗ ಎರಡು ಪಕ್ಷಗಳಲ್ಲಿ ವ್ಯತ್ಯಾಸವಿಲ್ಲ. ನಾವೆಲ್ಲರೂ ಭಾರತದಲ್ಲಿ ಇದ್ದೇವೆ. ನಾವೆಲ್ಲ ಭಾರತೀಯರು. ಆದರೆ ನಮ್ಮ ಹಕ್ಕುಗಳ ರಕ್ಷಣೆಯಾಗಬೇಕು.

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರು ದಯಮಾಡಿ ವಿಷಯ ಚರ್ಚೆಗೆ ತಮ್ಮನ್ನು ಸೀಮಿತಗೊಳಿಸಬೇಕು. ಈಗ ಸದನದ ಮುಂದಿರುವ ಚರ್ಚೆ, ಕಾಂಗ್ರೆಸ್ ಮತ್ತು ಲೀಗ್‌ನ ಭವಿಷ್ಯ ಕುರಿತದ್ದಲ್ಲ

**ಶ್ರೀ ತಾಜಮಲ್ ಹುಸೇನ್ :** ಆದರೆ ಗೌರವಾನ್ವಿತ ಸದಸ್ಯರು ಹಳೆಯ ಪಂಥದ ಲೀಗ್ ಅಥವಾ ಕಾಂಗ್ರೆಸ್ ಇರುವುದಿಲ್ಲವೇಕೆಂಬುದರ ವಿವರಣೆ ಕೇಳಿದ್ದಾರೆ. ನಿಮ್ಮ ಅನುಮತಿ ಪಡೆದು ವಿವರ ನೀಡುತ್ತಿರುವುದಾಗಿ ತಿಳಿದೆ; ಆದರೆ ಈಗ ನನಗೆ ಅದು ದೊರೆತಿಲ್ಲವಾದುದರಿಂದ ಅದರ ಬಗ್ಗೆ ಹೆಚ್ಚಿಗೆ ಏನೂ ಹೇಳಲಾರೆ. ನಾವು ತಿಳಿದಂಥ ಆಲೋಚನಾ ಲಹರಿಯುಳ್ಳ ಪಕ್ಷಗಳು ಇನ್ನು ಮುಂದೆ ಇರಲಾರವು ಎಂದಷ್ಟೆ ಹೇಳುತ್ತೇನೆ. ಏಕೆಂದರೆ ಕಾಂಗ್ರೆಸ್ ಮತ್ತು ಲೀಗ್ ಎರಡೂ ಪಕ್ಷಗಳು ತಮ್ಮ ಗುರಿ ಸಾಧಿಸಿವೆ. ಮುಂದೆ ಈ ಪಕ್ಷಗಳು ಹೊಸ ಪಂಥಗಳನ್ನು ಹುಟ್ಟುಹಾಕುತ್ತವೆ.

ನಾನು ಹೇಳುತ್ತಿದ್ದುದು ಇಷ್ಟೆ. ಒಂದು ಪಕ್ಷದಲ್ಲಿ ನೂರು ಸದಸ್ಯರು ಇರುತ್ತಾರೆ. ಆ ಪಕ್ಷವು ತನ್ನ ಮುಖಂಡನನ್ನು ಚುನಾಯಿಸುತ್ತದೆ. ಆ ಮುಖಂಡರು ಪ್ರಧಾನಿಯಾಗುತ್ತಾರೆ. ಒಂದು ವೇಳೆ ಇಬ್ಬರು ಅಭ್ಯರ್ಥಿಗಳಿದ್ದು ಯಶಸ್ವಿ ಅಭ್ಯರ್ಥಿಗಳಿಗೆ ೬೦ ಸದಸ್ಯರ ಬೆಂಬಲವಿದ್ದು, ಮಿಕ್ಕ ೪೦ ಸದಸ್ಯರು ಅವರ ಆಯ್ಕೆಯನ್ನು ವಿರೋಧಿಸುತ್ತಾರೆ. ಅವರು ಇನ್ನುಳಿದ ೫೦ ಸದಸ್ಯರೊಡಗೂಡಿ ವಿರೋಧಿಸಿದರೆ ಆಗೇನಾಗುತ್ತದೆ? ಆಗ ಸದನವು ೬೦ ಪರ ಮತ್ತು ೯೦ ವಿರೋಧ ಪಕ್ಷದ ಸದಸ್ಯರಿಂದ ಕೂಡಿರುತ್ತದೆ. ಸದನದಲ್ಲಿ ಬಹುಸಂಖ್ಯಾತ ಪಕ್ಷದಿಂದ ಮುಖಂಡನ ಆಯ್ಕೆಯಾಗಲು ಸಾಧ್ಯವಿಲ್ಲ. ಅಂತಿಮವಾಗಿ ಚುನಾಯಿತ ಅಭ್ಯರ್ಥಿಯು ಪ್ರಧಾನಿಯಾದರೆ ಅವರು ವಿರೋಧ ಪಕ್ಷದ ಪ್ರಧಾನಿಯಾಗುತ್ತಾರೆ. ಅದು ಪ್ರಜಾಪ್ರಭುತ್ವ ವಿರೋಧಿ ಆಯ್ಕೆ; ನಾನು ಪ್ರಶಂಸಿಸುವ ಪ್ರಜಾಪ್ರಭುತ್ವ ವ್ಯವಸ್ಥೆಗೆ ವ್ಯತಿರಿಕ್ತವಾದುದು. ನಾನು ಮೆಚ್ಚಿದ್ದು ಇಂಗ್ಲಿಷ್ ಪ್ರಜಾಪ್ರಭುತ್ವ ಪದ್ಧತಿ. ಸಾಧ್ಯವಾದಷ್ಟು ಮಟ್ಟಿಗೆ ಭಾರತೀಯ ರೀತಿನೀತಿಗಳಿಗೆ ಹೊಂದುವಂತೆ ಇಂಗ್ಲಿಷ್ ಸಂವಿಧಾನವನ್ನು ಅಳವಡಿಸಬೇಕೆಂಬುದು ನನ್ನ ಆಲೋಚನೆ.

ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಕೊನೆಯದಾಗಿ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿ. ಅದು ಪಂಡಿತ್ ಭಾರ್ಗವ ಅವರ ತಿದ್ದುಪಡಿಯಂತೆಯೇ ಇದೆ. ಅದರಂತೆ ಪ್ರಧಾನಿಯವರನ್ನು ರಾಷ್ಟ್ರಪತಿಗಳು ನೇಮಕ ಮಾಡಬೇಕು. ಪ್ರಧಾನಿಯವರ ಸಲಹೆಯಂತೆ ರಾಷ್ಟ್ರಪತಿಗಳು ಇತರ ಸಚಿವರನ್ನು ನೇಮಕ ಮಾಡಬೇಕು ಮತ್ತು ಸಚಿವ ಸಂಪುಟ ಇಡೀ ಸದನಕ್ಕೆ ಹೊಣೆಯಾಗಿರಬೇಕು. ಇದು ಹೌಸ್ ಆಫ್ ಕಾಮನ್ಸ್‌ನಲ್ಲಿ ಈಗಿರುವ ವ್ಯವಸ್ಥೆ ಮತ್ತು ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ನಾನಾಗಲೆ ತಿಳಿಸಿದಂತೆ ಈ ಪದ್ಧತಿ ಇಂಗ್ಲೆಂಡ್‌ನಲ್ಲಿ ಪರಿಣಾಮಕಾರಿಯಾಗಿದೆ. ನಮ್ಮ ರಾಷ್ಟ್ರದಲ್ಲೂ ಸಹ ಅದೇಕೆ ಯಶಸ್ವಿಯಾಗಲಾರದೆಂಬುದಕ್ಕೆ ಕಾರಣ ಕೊಡಲಾಗದು. ಪಂಡಿತ್ ಭಾರ್ಗವ ಅವರ ತಿದ್ದುಪಡಿಗೂ ನನ್ನ ಬೆಂಬಲವಿದೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಸಭಾಧ್ಯಕ್ಷರೆ, ಈ ಖಂಡವು ನಮ್ಮ ರಾಷ್ಟ್ರೀಯ ಸಂಯುಕ್ತ ಕಾರ್ಯಾಂಗಕ್ಕೆ ಬುನಾದಿ ಹಾಕುವ ಗುರಿ ಹೊಂದಿದೆ. ಈ ಖಂಡಕ್ಕೆ ಎರಡು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ತಿದ್ದುಪಡಿ ಸಂ.೨೧೨ ಮತ್ತು ತಿದ್ದುಪಡಿ ಸಂ.೨೨೧. ಇದರ ಒಟ್ಟಾರೆ ಪರಿಣಾಮ ರಾಷ್ಟ್ರೀಯ ಕಾರ್ಯಾಂಗವನ್ನು ದುರ್ಬಲಗೊಳಿಸುವುದು. ನನ್ನ ಮಿತ್ರ ಶ್ರೀ ಖಾಜಿ ಮತ್ತು ನನ್ನ ಮಿತ್ರ ಶ್ರೀ ಹುಸೇನ್ ಅನುಕ್ರಮವಾಗಿ ಅಮೆರಿಕ ಮತ್ತು ಬ್ರಿಟಿಷ್ ಮಾದರಿಯನ್ನು ಹಾಡಿ ಹೊಗಳಿದರು.

ಮಾನ್ಯರೆ ಇಲ್ಲಿ ನಾವು ಅಳವಡಿಕೆಯ ವಿಷಯಕ್ಕೆ ಬಂದಾಗ ಬ್ರಿಟಿಷ್, ಅಮೆರಿಕ, ರಷ್ಯ, ತುರ್ಕಿ ಅಥವಾ ಫ್ರೆಂಚ್ ಅಥವಾ ಇತರ ಯಾವ ಮಾದರಿಯನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಬೇಕೆಂಬುದನ್ನು ಕುರಿತು ಚಿಂತಿಸುತ್ತಿಲ್ಲ. ಇಲ್ಲಿ ನಾವು ಚಿಂತಿಸುತ್ತಿರುವುದು ಪ್ರಜಾಸತ್ತಾತ್ಮಕ, ಸಕ್ಷಮ ಮತ್ತು ಚಲನಶೀಲ ಸರ್ಕಾರ. ಆ ಸರ್ಕಾರ ಈ ದೇಶದಲ್ಲಿ ಇದುವರೆಗೆ ಆಗಿರುವ ಅವ್ಯವಸ್ಥೆಯನ್ನು ಸರಿಪಡಿಸುವಂತಹುದಾಗಿರಬೇಕು. ರಾಷ್ಟ್ರವನ್ನು ತನ್ನ ಅಧೋಗತಿಯಿಂದ ಮೇಲೆತ್ತುವ ಸರ್ಕಾರವಾಗಿರಬೇಕು. ಪ್ರಜಾಸತ್ತಾತ್ಮಕ ಸಮರ್ಥ, ಚಲನಶೀಲ ಸರ್ಕಾರದ ಅತ್ಯಂತ ಮೂಲಭೂತ ನಿಯಮವೆಂದರೆ ನಾನು ತಿಳಿದಂತೆ ಪ್ರತಿಯೊಂದು ರಾಜಕೀಯ ಅಭಿಪ್ರಾಯದ ಸಾರಭೂತವೂ ಪ್ರತಿಯೊಂದು ಪಂಥದ ನಿಲುವೂ ಪ್ರತಿಶಾಸನ ಸಭೆಯಲ್ಲಿ ಪ್ರಾತಿನಿಧ್ಯ ಪಡೆಯಬೇಕೆಂಬುದೇನೋ ನಿಜ. ಏಕೆಂದರೆ ಇಬ್ಬರ ಆಲೋಚನೆ ಒಬ್ಬರ ಆಲೋಚನೆಗಿಂತ ಉತ್ತಮ. ಇಬ್ಬರ ಚಿಂತನೆಗಿಂತ ಇಪ್ಪತ್ತು ಮಂದಿಯ ಚಿಂತನೆ ಉತ್ತಮ. ಅಂತೆಯೇ ಇಪ್ಪತ್ತು ಮಂದಿಗಿಂತ ಇನ್ನೂರು ಮಂದಿ ಇನ್ನೂ ಉತ್ತಮ. ವಿಶೇಷತಃ ನಾವು ಒಂದು ಚಲನಶೀಲ ಕಾರ್ಯಾಂಗವನ್ನು ರೂಪಿಸುವ ಬಗ್ಗೆ ಆಲೋಚಿಸುತ್ತಿರುವಾಗ ವ್ಯತಿರಿಕ್ತ ತತ್ತ್ವವೂ ಪ್ರಸ್ತುತವಾಗುತ್ತದೆ. ಅರ್ಥಾತ್, ಇಲ್ಲಿಯ ಕಾರ್ಯಾಂಗದಲ್ಲಿ ಇಬ್ಬರು ಇಪ್ಪತ್ತು ಮಂದಿಗಿಂತಲೂ ಇಪ್ಪತ್ತು ಮಂದಿ ಇನ್ನೂರು ಮಂದಿಗಿಂತಲೂ ಉತ್ತಮ. ತುರ್ತು ಪರಿಸ್ಥಿತಿಯಲ್ಲಿ ಪ್ರಾಮಾಣಿಕ, ತ್ವರಿತ

ನಿರ್ಧಾರಗಳು ಅಗತ್ಯವೆನಿಸಿದಾಗ ಚಲನಶೀಲದ ಬೇಡಿಕೆ ಇದ್ದಾಗ; ಒಂದು ತಲೆಗಿಂತ ಎರಡು ಉತ್ತಮ. ಆದರೆ ಈ ತಿದ್ದುಪಡಿಗಳು, ಕಾರ್ಯಾಂಗದ ಬುನಾದಿ ರೂಪಿಸಲು ಆಲೋಚಿಸಲ್ಪಟ್ಟು ಇವು ಅಂಗೀಕೃತವಾದಾಗ ಕಾರ್ಯಾಂಗವನ್ನೇ ದುರ್ಬಲಗೊಳಿಸಲಿಕ್ಕೆ ಹೊರಟಿವೆ. ಇದರಿಂದ ಕಾರ್ಯಾಂಗ ನಿಷ್ಕ್ರಿಯವಾಗುತ್ತದೆ. ಅಸ್ಥಿರವೂ ಜಡವೂ ಆಗುತ್ತದೆ. ನಮ್ಮ ಮುಂದಿನ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಸಮರ್ಥವಾಗುತ್ತವೆ. ಇಷ್ಟಕ್ಕೂ ಸಂಪುಟವಾಗಲಿ ಕಾರ್ಯಾಂಗವಾಗಲಿ ಶಿವಾಜಿಯ ದಿಬ್ಬಣವೋ ಅಥವಾ ಹತ್ತು ಹಲವು ಪ್ರದರ್ಶಿಕೆಗಳ ವಸ್ತು ಪ್ರದರ್ಶನವೊ/ ಅಲ್ಲ, ಅಥವಾ ಬರೆ ಖಿಚಡಿ ಅಲ್ಲ ಆದರೆ ನಾವು ಮಾಡಲು ಹೊರಟಿರುವುದು ಅಸಲಿ ಕ್ರಿಯಾಶೀಲ ಕಾರ್ಯಾಂಗವನ್ನು. ಇಲ್ಲಿ, ಸದನದ ವೇದಿಕೆಯಲ್ಲಿ ನನ್ನ ಮಿತ್ರ ಶ್ರೀ ಖಾಜಿಯವರು ಪಂಡಿತ್ ಜವಾಹರಲಾಲ್ ನೆಹರು ಅವರು ಬಿಹಾರಿನಲ್ಲಿ ಮಾಡಿದ ಘೋಷಣೆಯ ವೈಭವೀಕರಣದಲ್ಲಿ ತೊಡಗಿದ್ದರು. ಬಂಗಾಳ ಮತ್ತು ಇತರ ಭಾಗಗಳಲ್ಲಿ ತತ್ ಸದೃಶ ಘಟನೆಗಳು ನಡೆದಾಗ ಅಥವಾ ಅವಕ್ಕಿಂತ ಭೀಕರ ಘಟನೆಗಳು ನಡೆದಾಗ ಮುಸ್ಲಿಂಲೀಗ್‌ನ ನಾಯಕರನ್ನು ಪ್ರಶಂಸಿಸಿ ಅವರ ಪಾತ್ರವನ್ನು ಹಾಡಿ ಹೊಗಳಲು ನಾವು ಅನೇಕರು ಅಲ್ಲಿರಬೇಕಿತ್ತೆಂದು ಆಶಿಸುತ್ತೇನೆ. ಎಲ್ಲರೂ ತಿಳಿದಿರುವಂತೆ ಪೂರ್ವ ಬಂಗಾಲದಲ್ಲಿ ಹಾಗೂ ಭಾರತದ ಇತರ ಅನೇಕ ಸ್ಥಳಗಳಲ್ಲಿ ಹಿಂಸಾಕೃತ್ಯಗಳು ನಡೆದಾಗ ಪುರುಷರ ಸಾಮೂಹಿಕ ಹತ್ಯೆಯಾದಾಗ ಮಹಿಳೆಯರು ಮಾನಭಂಗಕ್ಕೆ ಒಳಗಾದಾಗ ಮಕ್ಕಳ ಮೇಲೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಸುಟ್ಟಾಗ ಮುಸ್ಲಿಂಲೀಗ್‌ನ ಯಾರೇ ಒಬ್ಬ ಮುಖಂಡನೂ ಕಿಬ್ಬೆಟ್ಟು ಎತ್ತಲಿಲ್ಲ, ಅಂತಹ ಸ್ಥಳಗಳಿಗೆ ಮುಸ್ಲಿಂ ಲೀಗ್‌ನ ಒಬ್ಬ ಮುಖಂಡನೂ ಭೇಟಿ ನೀಡಲಿಲ್ಲ. ಬಿಹಾರ್‌ನಲ್ಲಿ ಪಂಡಿತ್ ಜವಾಹರಲಾಲ್ ನೆಹರು ಮಾಡಿದಂತೆ ಘೋಷಣೆ ಮಾಡಲಿಲ್ಲ. ಇದು ನಾವು ಬಲಿಷ್ಠ ಸಂಘಟಿತ ಭಾರತವನ್ನು ಕಟ್ಟುವ ಕ್ರಮವೆ? ಇದು ನಮ್ಮನ್ನು ಭವಿಷ್ಯದಲ್ಲಿ ಸಕ್ರಿಯಗೊಳಿಸುವುದು ಸರಿಯೆ? ನಿನ್ನೆಯಷ್ಟೆ ಮುಸ್ಲಿಂ ಲೀಗ್‌ನ ಮುಖಂಡರ ಹೇಳಿಕೆಯನ್ನು ಓದಿದೆ. ಅವರು ಪಾಕಿಸ್ತಾನ ಮತ್ತು ಮುಸ್ಲಿಂ ಭಾರತ ಎಂದು ಹೆಸರಿಸಿದ್ದರು. ರಾಷ್ಟ್ರವು ಭಾರತ (ಭರತ ವರ್ಷ) ಮತ್ತು ಪಾಕಿಸ್ತಾನ ಎಂದು ಕೋಮು ಆಧಾರದ ಮೇಲೆ ವಿಭಜನೆಯಾದ ಅನಂತರವಾದರೂ ವೈಮನಸ್ಯದ ಕುಡುಗೋಲು ಭೂಮಿಯೊಳಗೆ ಯೋಜನಗಳ ಆಳಕ್ಕೆ ಹೂಳಲ್ಪಡುವುದೆಂದು ನಿರೀಕ್ಷಿಸಿದ್ದೆ. ಆದರೆ ಅದೇ ಭಾವನೆ ವಿದೇಶದಲ್ಲೂ ಬೇರುಬಿಟ್ಟಿದೆ. ಅದು ಇನ್ನೂ ಹೊಗೆಯಾಡುತ್ತಲೆ ಇದೆ. ಜನರು ಪಾಕಿಸ್ತಾನ ಮತ್ತು ಭಾರತದ ಉಳಿದ ಭಾಗದ ಬಗ್ಗೆ ಯೋಚಿಸಿದ್ದು....

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರು ಚರ್ಚೆಯ ವಿಷಯಕ್ಕಷ್ಟೆ ತಮ್ಮ ಮಾತನ್ನು ಸೀಮಿತಗೊಳಿಸಬೇಕು.

**ಶ್ರೀ ಎಚ್.ವಿ. ಕಾಮತ್ :** ಇಂದು ನಮಗೆ ಬೇಕಿರುವುದು ಐಕಮತ್ಯ. ಕ್ರಿಯಾಶೀಲತೆ, ತ್ಯಾಗ ಮತ್ತು ನಂಬಿಕೆಯ, ಚೋದಕ ಸ್ಫೂರ್ತಿ ಎಂಬುದನ್ನು ವಿವರಿಸಲು ಹೊರಟಿದ್ದೆ. ತಮ್ಮ ಅಸಮಾನ ಪದಲಾವಣ್ಯದ ಕುಂಚದಿಂದ ನಮ್ಮ ಕವಿ, ವಿಶ್ವಕವಿ ರವೀಂದ್ರನಾಥರು ಚಿತ್ರಿಸಿದ ಅಮೋಘ ಕಲ್ಪನೆಯನ್ನು ಮರೆಯದಿರೋಣ. ಅದು ನಮ್ಮನ್ನು ಸಕ್ರಿಯಗೊಳಿಸಬೇಕು; ನಾಳೆಯ ಬದುಕಿನಲ್ಲಿ ನಮ್ಮ ಕಾಯಕಕ್ಕೆ ದಾರಿದೀಪವಾಗಬೇಕು. ತನ್ಮೂಲಕ ನಮ್ಮ ಗತದಿನಗಳ ಶ್ರಮಕ್ಕೆ ತ್ಯಾಗಕ್ಕೆ, ನಮ್ಮ ಪೂರ್ವಜರ ಹುತಾತ್ಮರ ಅರ್ಪಣಾ ಮನೋಭಾವಕ್ಕೆ, ತಕ್ಕುದಾದ ಫಲಶ್ರುತಿಯಾಗಿ ನಮ್ಮ ಬೃಹತ್ ಭಾರತವನ್ನು ಕಟ್ಟುವಂತಾಗಬೇಕು.

ಮಾನ್ಯರೆ ತಮ್ಮ ಅನುಮತಿ ಬೇಡಿ ಅಸಮಾನ ಪದಪುಂಜಗಳಿಂದ ರೂಪಿಸಿದ ವರ್ಣಮಯ ಕಲ್ಪನೆಯನ್ನು ಸಾದರಪಡಿಸುತ್ತೇನೆ:

"ಭಯ ಮುಕ್ತ ಮನ, ಬುವಿಗೆತ್ತಿದ ಶಿರ
ಜ್ಞಾನ ಸ್ವಚ್ಛಂದ ಇರುವಲ್ಲಿ
ನಮ್ಮೊಳಗಣ ಕಿರಿಗೋಡೆಗಳಿಗೆ ನಲುಗಿ, ಜಗವೆಲ್ಲ

ನುಚ್ಚು ನೂರಾಗದಿರುವಲ್ಲಿ
ಅಮುತದಾಳದಿಂದ ನಲ್ನುಡಿಗಳು ಪುಟಿದೇಳುವಲ್ಲಿ ಕಾಯಕದ ದಣಿವು ಕಾಣದ ನಿಡುದೋಳ್ಗಳು
ಪರಿಪೂರ್ಣತೆಯೆಡೆಗೆ ಕೈ ಚಾಚುವಲ್ಲಿ
ತರ್ಕದ ತಿಳಿನೀರಿನ ಹರಿವು ಪಲ್ಲಟಿಸಿ
ನೀರಸ ಹವ್ಯಾಸದ ಮರುಭೂಮಿಗೆ ಹೊರಳದಿರುವಲ್ಲಿ ನಿರಂತರ ಚಿಂತನೆಯ ಮೇಣ್ ಕ್ರಿಯೆಯತ್ತ
ಮನ್ಮನವನು ನೀ ಮುನ್ನಡೆಸುವಲ್ಲಿ
ಓ ತಂದೆ! ಸ್ವಾತಂತ್ರ್ಯದ ಸಗ್ಗದಲಿರಲೆನ್ನ ಜಾಗೃತ ಭಾರತ."

ಜೈಹಿಂದ್!

**ಮಾನ್ಯ ಸಭಾಧ್ಯಕ್ಷರು** : ಪಂಡಿತ್ ಜವಾಹರಲಾಲ್ ನೆಹರು ಅವರು ಕೆಲ ತಿದ್ದುಪಡಿಗಳನ್ನು ಅಂಗೀಕರಿಸಲು ಇಷ್ಟಪಡುತ್ತಾರೆಂದುಕೊಂಡಿದ್ದೇನೆ. ಹೌದಾದರೆ ಚರ್ಚೆಯನ್ನು ಒಂದಿಷ್ಟು ಕಡಿತಗೊಳಿಸಲು ಸಾಧ್ಯವಾಗಬಹುದು. ಚರ್ಚೆ ಮುಂದುವರಿಯುವ ಮುನ್ನ ಅವರು ಒಂದು ಹೇಳಿಕೆ ನೀಡಬೇಕೆಂದು ಇಚ್ಛಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ಯಾವ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ ಮತ್ತಾವುದನ್ನು ನಿರಾಕರಿಸುತ್ತೇನೆ ಎಂಬುದನ್ನು ಸ್ಪಷ್ಟಪಡಿಸಲು, ಮಧ್ಯಪ್ರವೇಶಿಸಲು ಪ್ರಯತ್ನಿಸುತ್ತೇನೆ. ನಾಲ್ಕು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಮೊದಲಿಗೆ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ನಾನು ಅಂಗೀಕರಿಸಲು ಸಿದ್ಧನಿದ್ದೇನೆಂದು ತಿಳಿಸಲು ಬಯಸುತ್ತೇನೆ. ಮಿಕ್ಕವನ್ನು ನಾನು ಅಂಗೀಕರಿಸಲಾರೆ. ಪಂಡಿತ್ ಭಾರ್ಗವ ಅವರ ತಿದ್ದುಪಡಿಯೂ ಹೆಚ್ಚುಕಡಿಮೆ ಅದೇ ಆಗಿರುತ್ತದೆ. ವಾಕ್ಯ ರಚನೆಯಲ್ಲಿ ವ್ಯತ್ಯಾಸವಿದೆಯಷ್ಟೆ. ಮಿಕ್ಕವರು, ಸಂಪೂರ್ಣ ವಿಷಯಕ್ಕೆ ಸಂಬಂಧಿಸದ ಇತರ ವಿಭಿನ್ನ ವಿಷಯಗಳನ್ನು ಪ್ರಸ್ತಾವಿಸಿದ್ದಾರೆ. ಉದಾಹರಣೆಗೆ ಅನುಪಾತೀ ಪ್ರಾತಿನಿಧ್ಯದ ತತ್ತ್ವದ ಮೇಲೆ ಸಚಿವರನ್ನು ಚುನಾಯಿಸುವುದು. ಒಂದು ದುರ್ಬಲ ಸಚಿವ ಮಂಡಲಿಯನ್ನು ರಚಿಸಲು ಇದಕ್ಕಿಂತ ಸುಗಮವಾದ ಮಾರ್ಗ ಬೇರೊಂದಿಲ್ಲ. ಅನುಪಾತೀ ಪ್ರಾತಿನಿಧ್ಯದ ತತ್ತ್ವದ ಆಧಾರದ ಮೇಲೆ ರಚಿಸಿದ ದುರ್ಬಲ ಸಚಿವ ಮಂಡಲಿ, ಅಷ್ಟೇ ದುರ್ಬಲ ಸರ್ಕಾರವನ್ನು ನಡೆಸಲು ಇದಕ್ಕಿಂತ ಸುಲಭವಾದ ಮಾರ್ಗ ಬೇರೊಂದಿಲ್ಲ. ಆದುದರಿಂದ ಈ ತಿದ್ದುಪಡಿಯನ್ನು ಸದನ ತಿರಸ್ಕರಿಸಬೇಕೆಂದು ನಾನು ಬಯಸುತ್ತೇನೆ.

ಇನ್ನೊಂದು ತಿದ್ದುಪಡಿ, ಸಂಪೂರ್ಣ ಬೇರೊಂದು ವಿಷಯವನ್ನೇ ಎತ್ತಿದೆ. ಉದಾಹರಣೆಗೆ ಶ್ರೀ ಕರಿಮುದ್ದೀನ್ ತಿದ್ದುಪಡಿ ಹೇಳುವಂತೆ "ಕೇಂದ್ರದ ಕಾರ್ಯಾಂಗ ಸಂಸದೀಯೇತರ ಎಂದರೆ ಅದನ್ನು ಶಾಸನ ಸಭೆಯ ಅವಧಿ ಮುಗಿಯುತ್ತಿದ್ದಂತೆ ಪದಚ್ಯುತಗೊಳಿಸಲಾಗದು" ಇತ್ಯಾದಿ. ಅದೊಂದು ಮೂಲಭೂತ ಪ್ರಶ್ನೆಯನ್ನೇ ಎಬ್ಬಿಸುತ್ತದೆ. ಯಾವ ಸ್ವರೂಪವನ್ನು ಸಂವಿಧಾನಕ್ಕೆ ಕೊಡುತ್ತೀರಿ? ಸಚಿವ ನಿರ್ದೇಶಿತ ಸಂಸದೀಯ ಅಥವಾ ಅಮೆರಿಕದ ಮಾದರಿಯ ಸಂವಿಧಾನವೆ ಎಂಬುದನ್ನು ಅವಲಂಬಿಸಿರುತ್ತದೆ. ಇದುವರೆಗೆ ನಮ್ಮ ಸಂವಿಧಾನವನ್ನು ಸಚಿವ ನಿರ್ದೇಶಿತ ರೀತಿಯಲ್ಲಿ ರೂಪಿಸಲು ಮುನ್ನಡೆದಿದ್ದೇವೆ. ಈ ನಿಟ್ಟಿನಲ್ಲಿ ಸಾಗಿದ ಬಳಿಕ ಹಿಂತಿರುಗಲಾಗದು ಎಂದು ನನ್ನ ನಿವೇದನೆ. ಹಾಗಾದಲ್ಲಿ ಇಡೀ ವ್ಯವಸ್ಥೆ ಬುಡಮೇಲಾಗುತ್ತದೆ; ಸಂವಿಧಾನದ ಸಂರಚನೆಯೇ ತಲೆಕೆಳಗಾಗುತ್ತದೆ. ಆದುದರಿಂದ ನಾನು ಶ್ರೀ ಕರೀಮುದ್ದೀನ್ ಅಥವಾ ಶ್ರೀ ಪಾಕರ್ ಸಾಹಿಬ್ ಅವರ ತಿದ್ದುಪಡಿಗಳನ್ನು ಅಂಗೀಕರಿಸಲು ಸಾಧ್ಯವಿಲ್ಲ.

ಇನ್ನು ಚರ್ಚೆಯಲ್ಲಿ ಪ್ರಸ್ತಾವಿಸಲಾದ ಇತರ ಅಂಶದ ಬಗ್ಗೆ ಹೇಳುವುದಾದರೆ ಸದನದ ಮುಂದೆ ನಾನು ಮಂಡಿಸಿದ ಮೂಲ ಕರಡು ಹಲವಾರು ವಿಷಯಗಳ ಬಗ್ಗೆ ಸ್ಪಷ್ಟವಾಗಿರಲೇ ಇಲ್ಲ ಎಂಬುದು ಅಪ್ಪಟ ನಿಜ. ಮುಂದೆ ಕರಡು ಪರಿಷ್ಕರಣೆಯ (ಪುನಾರಚನೆಯ) ಸೂಚನೆಗಳು ಕಂಡುಬರುತ್ತವೆ. ಈ ಕರಡನ್ನು ಇಲ್ಲಿ ಸಿದ್ಧಪಡಿಸುವ ಉದ್ದೇಶವಿರಲಿಲ್ಲ. ಕೆಲ ವಿಷಯಗಳನ್ನು ಹಗುರವಾಗಿ ಪರಿಗಣಿಸಲಾಗಿತ್ತು. ಪ್ರಧಾನಿಯವರ

ಸ್ಥಾನಕ್ಕೆ ಅಭ್ಯರ್ಥಿಯಾದವರನ್ನು ರಾಷ್ಟ್ರಪತಿಗಳು ಆಹ್ವಾನಿಸುವರೆಂಬ ವಿಷಯವನ್ನು ವಿವಾದಾತೀತ ಎಂಬಂತೆ ಲಘುವಾಗಿ ಪರಿಗಣಿಸಲಾಗಿತ್ತು. ಏಕೆಂದರೆ ಅವರು ಸದನದ ಬಹುಮತವಿರುವ ಪಕ್ಷ ಅಥವಾ ಸಮೂಹವನ್ನು ಪ್ರತಿನಿಧಿಸುವರೆಂಬ ಕಾರಣಕ್ಕಾಗಿ ಆ ವಿಷಯವನ್ನಷ್ಟು ಗಂಭೀರವಾಗಿ ಪರ್ಯಾಲೋಚಿಸಿರಲಿಲ್ಲ. ಅನಂತರ ಪ್ರಧಾನಿಯವರಿಂದ ಸಚಿವರ ಆಯ್ಕೆ, ಅಂತೆಯೇ ಸದನಕ್ಕೆ ಸಚಿವ ಮಂಡಲದ ಸಾಮೂಹಿಕ ಹೊಣೆಗಾರಿಕೆ, ಇವೆಲ್ಲವೂ ಮಾಮೂಲಿ ವಿಷಯಗಳೆಂಬಂತೆ ತಿಳಿಯಲಾಗಿತ್ತು. ಪ್ರಾಯಃ ಅವೆಲ್ಲವನ್ನೂ ಸ್ಪಷ್ಟವಾಗಿ ವಿವರಿಸುವುದು ಅಗತ್ಯವೆನಿಸುತ್ತೆ. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿ ಇವೆಲ್ಲವನ್ನು ಅತಿ ಸ್ಪಷ್ಟವಾಗಿ ತಿಳಿಸುತ್ತದೆ. ಆದುದರಿಂದ ನಾನು ಆ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ. ಸದನವು ಅದನ್ನು ಅಂಗೀಕರಿಸಿ ಮಿಕ್ಕವನ್ನು ತಿರಸ್ಕರಿಸುತ್ತದೆ ಎಂದು ನಂಬುತ್ತೇನೆ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : *[ಮಾನ್ಯರೆ, ಈ ಚರ್ಚೆಯಲ್ಲಿ ನಾನು ಮಧ್ಯಪ್ರವೇಶಿಸುವ ಉದ್ದೇಶ ಹೊಂದಿರಲಿಲ್ಲ. ಚರ್ಚೆಯ ವಿಷಯ ಎಂದರೆ ಕಾರ್ಯಾಂಗ ಸಂಸದೀಯವಾಗಿರಬೇಕೆ ಅಥವಾ ಸಂಸದೀಯೇತರವಾಗಿರಬೇಕೆ ಎಂಬುದು, ಶೈಕ್ಷಣಿಕ ಆಸಕ್ತಿಯನ್ನು ಕೆರಳಿಸುತ್ತದೆ ಆದರೂ ಅದು ಪ್ರಾಯೋಗಿಕ ರಾಜಕೀಯವಲ್ಲ. ಭಾರತೀಯರ ಒಲವು ಬ್ರಿಟಿಷ್ ಮಾದರಿಯತ್ತ ಇರುವಾಗ ಅಮೆರಿಕದ ಪದ್ಧತಿಯ ಗುಣಗಾನ ಮಾಡಿ ಅಳವಡಿಸುವಂತೆ ಪ್ರಯತ್ನಿಸುವುದು ವ್ಯರ್ಥ. ಸಂವಿಧಾನಗಳು ರೂಪುಗೊಳ್ಳುವಾಗ, ಅವುಗಳಲ್ಲಿ ಪೂರ್ಣತೆಯ ಲಕ್ಷಣಗಳನ್ನು ಕಾಣಬಹುದಾದರೂ ಅವು ಕೇವಲ ತಾತ್ಕಾಲಿಕ. ಬ್ರಿಟಿಷ್ ರಾಜ್ಯಭಾರವನ್ನು ಪದಚ್ಯುತಗೊಳಿಸಿದಂತೆ ಬ್ರಿಟಿಷ್ ಸಂವಿಧಾನದ ಮಾದರಿಯನ್ನು ಕೆಳಗಿಳಿಸಿ ಉತ್ತಮವಾದ ಮಾದರಿಯ ಅಳವಡಿಕೆಯನ್ನು ನೋಡುವವರೆಗೆ ಜೀವಂತ ಇರುವ ಭರವಸೆ ಹೊತ್ತಿದ್ದೇನೆ. ಪಂಡಿತ್ ಜವಾಹರಲಾಲ್ ಅವರು ಬಿಹಾರದಲ್ಲಿ ಕೈಗೊಂಡ ಚಟುವಟಿಕೆಗಳನ್ನು ಹಾಡಿ ಹೊಗಳಿ, ಶ್ರೀ ಕಾಮತ್ ಮತ್ತು ಶ್ರೀ ಖಾಜಿ ಅವರು ಮಾಡಿದ ಭಾಷಣಗಳು ನನ್ನನ್ನು ಬಲವಂತವಾಗಿ ಇಲ್ಲಿಗೆ ಕರೆತಂದಿವೆ. ಅವರ ಹರಿದ ಅಂಗಿ ಮತ್ತು ಅವರು ಪಟ್ಟಶ್ರಮ ಎಲ್ಲಕ್ಕೂ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ. ವಿರೋಧ ಪಕ್ಷದ ಸದಸ್ಯನೊಬ್ಬ ಇತರ ಪಕ್ಷದ ಸದಸ್ಯನನ್ನು ಪ್ರಶಂಸಿಸಿದಾಗ ಆ ಪಕ್ಷದ ಮುಖಕ್ಕೆ ಮಸಿ ಬಳಿಯುವುದಕ್ಕೆ ಅದು ಸಂದರ್ಭವಲ್ಲ. ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸುವ ಪ್ರಯತ್ನ ನಡೆಯಬಾರದು. ಬದಲಿಗೆ ಒಗ್ಗಟ್ಟನ್ನು ಹೆಚ್ಚಿಸುವಂತಿರಬೇಕು.

ಶ್ರೀ ಕಾಮತರು ತಮ್ಮ ಪಾರಿಭಾಷಿಕ ಖಚಿತ್ಯದಿಂದ ಪರಿಸ್ಫುಟವಾಗುವಂತೆ ಬಣ್ಣಿಸಿದ ಕೆಲ ಸಂಗತಿಗಳು ಅವರ ಒಂದು ಅನನ್ಯ ಹಾಗೂ ಅಕಾಲಿಕ ಪ್ರಯತ್ನವಾಗಿತ್ತು. ಮುಸ್ಲಿಮೇತರರ ಮೇಲೆ ಹಲ್ಲೆ ನಡೆದಾಗ ಮುಸ್ಲಿಂಲೀಗ್ ಹೈಕಮ್ಯಾಂಡ್ ಖಂಡಿಸಲಿಲ್ಲವೆಂಬುದು ತಪ್ಪು.]*

**ಮಾನ್ಯ ಸಭಾಧ್ಯಕ್ಷರು** : ನಾವು ಅಸಂಗತ ಚರ್ಚೆಯಲ್ಲಿ ತೊಡಗಿ ಹಳಿ ತಪ್ಪುತ್ತಿದ್ದೇವೆ ಎನಿಸುತ್ತದೆ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ನಾನು ಈ ವಿಷಯವನ್ನು ಕುರಿತು ಚರ್ಚಿಸಲಾರೆ. ಅವರು ಹೇಳಿದುದಷ್ಟೂ ವಾಸ್ತವ ಸಂಗತಿಗಳಲ್ಲ ಎಂದಷ್ಟೆ ತಿಳಿಸುತ್ತಿದ್ದೇನೆ. ಪಂಡಿತ್ ಜವಾಹರಲಾಲ್ ನೆಹರು ಅವರು ಬಿಹಾರಕ್ಕೆ ಹೋಗಿದ್ದುದು ಅಲ್ಲಿ ಕಾಂಗ್ರೆಸ್ ವರಿಷ್ಠರ ನಿಯಂತ್ರಣದಲ್ಲಿ ಆ ಪ್ರದೇಶದ ಸರ್ಕಾರ ಇತ್ತು ಎಂಬ ಕಾರಣಕ್ಕೆ. ಕಾಂಗ್ರೆಸ್ ಹೈಕಮಾಂಡ್ ಅಲ್ಲಿ ಮಧ್ಯ ಪ್ರವೇಶಿಸುವ ಸ್ವಾತಂತ್ರ್ಯ ಪಡೆದಿತ್ತು. ಆದರೆ ಪಂಜಾಬ್‌ನ ಸಚಿವ ಮಂಡಲದ ಮೇಲೆ ಮುಸ್ಲಿಮ್ ಲೀಗ್‌ನ ನಿಯಂತ್ರಣವಿರಲಿಲ್ಲ. ಅದು ವಾಯವ್ಯ ಗಡಿನಾಡು ಪ್ರಾಂತ್ಯದ ೯೩ನೇ ವಿಭಾಗದಲ್ಲಿತ್ತು. ಕಾಂಗ್ರೆಸ್ ಅಧಿಕಾರದಲ್ಲಿತ್ತು.

**ಮಾನ್ಯ ಸಭಾಧ್ಯಕ್ಷರು** : ನಾವು ಯಾವುದೇ ಮಂತ್ರಿಮಂಡಲದ ವರ್ತನೆಯನ್ನಾಗಲಿ ಅಥವಾ ಪಂಡಿತ್ ಜವಾಹರಲಾಲ್ ನೆಹರು ಅವರ ವರ್ತನೆಯನ್ನಾಗಲಿ ಅಥವಾ ಯಾರ ನಡವಳಿಕೆಯನ್ನೂ ಪರಿಶೀಲಿಸುತ್ತಿಲ್ಲ ಎಂದು ಗೌರವಾನ್ವಿತ ಸದಸ್ಯರಿಗೆ ನೆನಪಿಸಲು ನಾನು ಬಯಸುತ್ತೇನೆ. ನಾವಿಲ್ಲಿ ಚರ್ಚಿಸುತ್ತಿರುವುದು ಕೇವಲ

ಸಂವಿಧಾನದ ಒಂದು ಸರಳ ಖಂಡವನ್ನು ಕುರಿತು. ಅವರು ಆ ವಿಷಯಕ್ಕೆ ಬದ್ಧವಾಗಿರಬೇಕೆಂದು ನಾನು ವಿನಂತಿಸುತ್ತೇನೆ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ತಾವು ಮಿಕ್ಕವರಿಗೂ ವಿಷಯಾಂತರಿಸಲು ಅನುಮತಿ ನೀಡಲಾರಿರಿ ಎಂದು ನಂಬುತ್ತೇವೆ.

ಮಾನ್ಯರೆ, ನಾನು ಹೇಳಿದಂತೆ ಅಮೆರಿಕದ ಪದ್ಧತಿಯಲ್ಲಿ ಅತಿ ದೊಡ್ಡ ಪ್ರಯೋಜನವಿದೆ. ಅವುಗಳನ್ನು ಈ ಕ್ಷಣ ಯಾರೂ ಮೆಚ್ಚುತ್ತಿಲ್ಲ. ಕೆಲ ದಿನಗಳ ಹಿಂದೆ ಹರಾಲ್ಡ್ ಒಂದು ಹೊತ್ತಗೆಯನ್ನು ಹೊರ ತಂದಿರುವುದಾಗಿ ನನಗೆ ತಿಳಿದುಬಂದಿತು. ಅದರಲ್ಲಿ ಅವರು ಪದಚ್ಯುತಗೊಳಿಸಲಾಗದ ಕಾರ್ಯಾಂಗ ಇರುವ ಅಮೆರಿಕದ ಪದ್ಧತಿಯನ್ನು ಖಂಡಿಸಿರುವರೆಂದು ಕೇಳಿದೆ. ನಾವೀಗ ಅಳವಡಿಸುತ್ತಿರುವ ಬ್ರಿಟಿಷ್ ಮಾದರಿಯನ್ನು ಅವರು ಪ್ರಶಂಸಿಸಿದ್ದಾರೆ. ಬ್ರಿಟಿಷ್ ಪದ್ಧತಿಯಲ್ಲಿರುವ ವಾಸ್ತವ ಸಂಗತಿಗಳೇನು? ಬ್ರಿಟಿಷ್ ಪದ್ಧತಿಯಲ್ಲಿ ಕಾರ್ಯಾಂಗವನ್ನು ಪದಚ್ಯುತಗೊಳಿಸಬಹುದು. ಅಮೆರಿಕದ ಪದ್ಧತಿಯಲ್ಲಿ ಅದು ಸಾಧ್ಯವಿಲ್ಲ. ಈ ವಿಷಯದಲ್ಲಿ ಎರಡೂ ಪದ್ಧತಿಗಳ ನಡುವೆ ಪ್ರಮುಖವಾದ ಬದಲಾವಣೆ ಕಂಡುಬರುವುದಿಲ್ಲ. ಆಡಳಿತ ವ್ಯವಹಾರಗಳಲ್ಲಿ ಅಷ್ಟೇನೂ ವ್ಯತ್ಯಾಸವಿರುವಂತೆ ಕಂಡುಬರುವುದಿಲ್ಲ. ಇರುವ ಒಂದೇ ಅಂತರವೆಂದರೆ ಮತ ಚಲಾಯಿಸದ ಹಕ್ಕು. ಇದು ಮಂತ್ರಿಮಂಡಲದ ಕಾರ್ಯವೈಖರಿಯ ಸಾರಭೂತ. ಈ ಅಧಿಕಾರವನ್ನು ಶಾಸನ ಸಭೆಗೆ ವಹಿಸಿಕೊಟ್ಟಿರುವುದರಿಂದ ಬ್ರಿಟಿಷ್ ಮತ್ತು ಅಮೆರಿಕ ಪದ್ಧತಿಗಳೆರಡರಲ್ಲೂ ಶಾಸನಸಭೆಗೆ ಸಂಪೂರ್ಣ ಅಧಿಕಾರವುಂಟು. ಆದರೆ ಅಮೆರಿಕದ ಪದ್ಧತಿಯಲ್ಲಿ ಮಾತ್ರ ಅಧ್ಯಕ್ಷರಿಗೆ ನಿರಾಕರಣಾಧಿಕಾರವುಂಟು. ಅಲ್ಲೂ ಸಹ ಹಲವಾರು ನಿರ್ಬಂಧಗಳಿಗೆ ಅವಕಾಶ ಕಲ್ಪಿಸಿರುವುದರಿಂದ ಅಮೆರಿಕದ ಅಧ್ಯಕ್ಷರ ನಿರಾರಕಣಾಧಿಕಾರವನ್ನು ಮೂರನೇ ಎರಡು ಭಾಗ ಬಹುಮತದಿಂದ [ಸದನದ ಪ್ರತಿನಿಧಿಗಳು ಮತ್ತು ಸೆನೆಟ್ ಪ್ರತಿನಿಧಿಗಳೂ ಸೇರಿ] ಅನೂರ್ಜಿತಗೊಳಿಸಬಹುದು. ನಿಧಿನಿಯಂತ್ರಣಾಧಿಕಾರ ಸಂಪೂರ್ಣವಾಗಿ ಶಾಸನಸಭೆಗಿರುತ್ತದೆ ಎಂಬುದನ್ನು ತಾವು ಮನಗಾಣಬಹುದು. ಹಾಗೆಯೇ ಅಮೆರಿಕದ ಸಂಸದೀಯೇತರ ಪದ್ಧತಿಯಲ್ಲೂ, ಇದು ಜಾರಿಯಲ್ಲಿದೆ.

ಶಾಸನ ಸಭೆಗೆ ಸಂಬಂಧಿಸಿದಂತೆ ಇದೇ ನಿಯಮ ಅನ್ವಯವಾಗುತ್ತದೆ. ಶಾಸನಸಭೆ ಕೆಲ ರಕ್ಷಣಾ ವ್ಯವಸ್ಥೆಗಳಿಂದಾಗಿ ಪರಮೋಚ್ಚ ಅಧಿಕಾರವನ್ನು ಹೊಂದಿರುತ್ತದೆ. ಸದಸ್ಯೇತರ ವ್ಯಕ್ತಿಯ ನೇಮಕಾತಿಗೂ ಸದಸ್ಯನ ನೇಮಕಾತಿಗೂ ನಡುವೆ ಗಮನಾರ್ಹ ವ್ಯತ್ಯಾಸ, ದೈನಂದಿನ ವ್ಯವಹಾರಗಳಲ್ಲಿ ಕಂಡುಬರುವುದಿಲ್ಲ ಕೆಲವು ವ್ಯಕ್ತಿಗಳ ಅಭಿಪ್ರಾಯದಂತೆ ಸಂದಿಗ್ಧತೆಯ ಪರಿಸ್ಥಿತಿಯಲ್ಲಿ ಒಂದು ಕೇಂದ್ರೀಯ ನಿಯಂತ್ರಣದ ವ್ಯವಸ್ಥೆ ಇರುವುದು. ಸಣ್ಣಪುಟ್ಟ ಘಟಕಗಳು ಒಗ್ಗೂಡಿ ಪರಿಸ್ಥಿತಿಯನ್ನು ಹದಗೆಡಿಸುವುದಕ್ಕಿಂತ ಇದು ಉತ್ತಮ. ಸಂಕಷ್ಟದ ಸಮಯದಲ್ಲಿ ಅಥವಾ ಬಿಕ್ಕಟ್ಟಿನಲ್ಲಿ ಒಂದು ಪದ್ಧತಿ ಸಮರ್ಪಕವಾಗಿ ಕಾರ್ಯನಿರ್ವಹಿಸುವುದಾದರೆ ಬಿಕ್ಕಟ್ಟಿಲ್ಲದ ಸನ್ನಿವೇಶದಲ್ಲಿ ಯಾಕೆ ನಿರ್ವಹಿಸಲಾರದು? ಬಿಕ್ಕಟ್ಟು ಉದ್ಭವಿಸುವುದು ಅಸಾಧಾರಣ ಸಂದರ್ಭಗಳಲ್ಲಿ. ಅದೊಂದು ನಿಜವಾಗಿಯೂ ಸಂಕೀರ್ಣ ಹಾಗೂ ಅಪರಿಹಾರ್ಯ ಪರಿಸ್ಥಿತಿ. ಅಂತಹ ಸ್ಥಿತಿಯಲ್ಲಿ ಒಂದು ಪದ್ಧತಿಯ ಕಾರ್ಯನಿರ್ವಹಣೆ ಯಶಸ್ವಿಯಾದರೆ ತಾರ್ಕಿಕವಾಗಿ ಮಾಮೂಲು ಪರಿಸ್ಥಿತಿಯಲ್ಲೂ ಅದು ಕಾರ್ಯ ಸಾಧ್ಯವಾಗುತ್ತದೆ. ಆದುದರಿಂದ ಇಡೀ ರಾಷ್ಟ್ರದ ಶೇಕಡ ೫೧ಕ್ಕೆ ಕಡಿಮೆ ಇಲ್ಲದಂತೆ ಮತಗಳಿಸುವ ಅಧ್ಯಕ್ಷರು ರಾಷ್ಟ್ರಹಿತದ ನ್ಯಾಸಾಧಿಕಾರಿಯಾಗಿರುತ್ತಾರೆ. ಪ್ರಧಾನಿಯಾದರೋ ಒಂದೇ ಒಂದು ಕ್ಷೇತ್ರವನ್ನು ಮತ್ತು ತನ್ನೊಂದು ಪಕ್ಷದ ಬಹುಸಂಖ್ಯಾತ ಸದಸ್ಯರನ್ನು ಪ್ರತಿನಿಧಿಸುತ್ತಾರೆ. ಶ್ರೀ ತಾಜಮಲ್ ಹುಸೇನ್ ಅವರು ಕೊಟ್ಟ ದೃಷ್ಟಾಂತದಲ್ಲಿ ಒಂದಿಷ್ಟು ತಪ್ಪು ತಿಳಿವಳಿಕೆ ಇದೆ. ಪ್ರಧಾನಿಯವರನ್ನು ವಿರೋಧಪಕ್ಷ ಸರ್ಕಾರಿ ಪಕ್ಷದ ಜೊತೆಗೂಡಿ ಚುನಾಯಿಸಬಹುದೆಂದು ಅವರು ಹೇಳಿದರು. ದೃಷ್ಟಾಂತಕ್ಕೆ ಒಂದು ಪಕ್ಷದಲ್ಲಿ ೧೦೦ ಸದಸ್ಯರಿದ್ದು ಮತ್ತೊಂದರಲ್ಲಿ ೫೦ ಇದ್ದರೆ ಮುಖಂಡನನ್ನು ಚುನಾಯಿಸುವ ಸಂದರ್ಭದಲ್ಲಿ ೬೦ ಮತಗಳು ಒಂದು ಪಕ್ಷದಿಂದಲೂ ೪೦ ಮತಗಳು ಮತ್ತೊಂದು ಪಕ್ಷದಿಂದಲೂ ದೊರೆತಾಗ ಆತನ ಪಕ್ಷದವರೇ

ಬಹುಮತ ನೀಡದಿದ್ದರೂ ಅವರು ಚುನಾಯಿಸಲ್ಪಡಬಹುದು. ಆ ಭೀತಿ ಅನುಭವದ ಅಭಾವದಿಂದ ಹುಟ್ಟಿದ್ದು. ರಾಜಕೀಯ ಪಕ್ಷಗಳಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳು ಹೊರಗೆ ಪ್ರಕಟವಾಗುವುದಿಲ್ಲ. ತನ್ನ ಪಕ್ಷವನ್ನೇ ತೊರೆದು ಪ್ರತಿಪಕ್ಷಕ್ಕೆ ಸೇರಿದ ವ್ಯಕ್ತಿಗೆ ತನ್ನ ಪಕ್ಷದಿಂದಲೆ ಒಂದು ಮತ ಸಹ ದೊರೆಯಲಾರದು. ಇಂದಿನ ಪ್ರಜಾಪ್ರಭುತ್ವದಲ್ಲಿ ಆ ರೀತಿಯ ಪ್ರಕರಣಗಳು ಸಂಭವಿಸುವುದು ಅಸಾಧ್ಯ. ಒಂದಿಲ್ಲೊಂದು ಮೂಲೆಯಲ್ಲಿ ಇಂತಹ ಅಪರೂಪದ ನಿದರ್ಶನಗಳು ಕಾಣಬಹುದೆ ಹೊರತು ವಿಶಾಲ ದೃಷ್ಟಿಕೋನದಲ್ಲಿ ಪರಿಭಾವಿಸಿದಾಗ ಈ ಬಗೆಯ ಅಸ್ಥಿರ ಪ್ರವೃತ್ತಿಗೆ ಎಡೆಯಿಲ್ಲ. ಸರ್ಕಾರಿ ಪಕ್ಷದಿಂದ ಹೊರಬಿದ್ದ ಒಬ್ಬ ಶತ್ರುಪಕ್ಷಪಾತಿಯನ್ನು ವಿರೋಧ ಪಕ್ಷ ಬೆಂಬಲಿಸುತ್ತದೆಯೆ? ಆ ಸಂದರ್ಭ ಹೇಗಾದರೂ ತಲೆದೋರಿತು? ಆತ ಪಕ್ಷದ ಸದಸ್ಯನಲ್ಲ ಅಂತಹ ಅನಿರೀಕ್ಷಿತ ಪರಿಸ್ಥಿತಿ ಉದ್ಭವಿಸಿರುವುದಿಲ್ಲ. ಆದರೆ ಸದನದ ಕೇವಲ ಅಲ್ಪ ಸಂಖ್ಯಾತರ ಪ್ರತಿನಿಧಿಯಾದ ವ್ಯಕ್ತಿ ಪ್ರಧಾನಿಯಾಗುವ ವಿಷಯ ಪರಿಶೀಲನಾರ್ಹ. ಪಕ್ಷದ ಕಾರ್ಯವೈಖರಿ ಹೇಗಿರುತ್ತೆಂದರೆ ನೀವು ಒಂದು ಪಕ್ಷಕ್ಕೆ ಸೇರಿದ್ದೂ ಮತಗಳಿಸಿದರೆ ಶ್ರೀ ತಾಜಮಲ್ ಹುಸೇನ್ ಅವರು ಕೊಟ್ಟ ನಿದರ್ಶನದಂತೆ ತಲೆದೋರುವ ಸನ್ನಿವೇಶದಲ್ಲಿ ಎಲ್ಲ ಮತಗಳನ್ನೂ ಗಳಿಸುವುದು ಖಚಿತ. ಅಂತಿಮವಾಗಿ ೬೦ ಮತಗಳನ್ನು ಪಡೆದಾತ ಪ್ರಧಾನಿಯಾಗುತ್ತಾನೆ; ಇದು ಸಂಭವನೀಯ. ಈಗ ನೀವು ಈ ವ್ಯಕ್ತಿಯ ಸಲಹೆಯನ್ನು ರಾಷ್ಟ್ರಪತಿಗಳು ಆಲಿಸಬೇಕೆಂದು ಬಯಸುತ್ತೀರಿ. ಅವರ ಸ್ವಂತ ವಿವೇಚನೆಗೆ ಇಲ್ಲಿ ಆಸ್ಪದ ಕೊಡದೆ ಸದನದ ಅಲ್ಪಸಂಖ್ಯಾತರ ಮತಗಳಿಸಿ ಪ್ರಧಾನಿಯಾದ ವ್ಯಕ್ತಿಯ ಮಾತಿಗೆ ರಾಷ್ಟ್ರಪತಿಗಳು ಓಗೊಡಬೇಕು. ಆತನಿಗೆ ದೊರೆತ ಮತಗಳು ಕೇವಲ ೬೦ ಎಂದರೆ ಕೇವಲ ಶೇಕಡ ೪೦ರಷ್ಟು.

ಆದುದರಿಂದ ರಾಷ್ಟ್ರಪತಿಗಳು ಸ್ವಂತ ವಿವೇಚನೆಯಿಂದ ತಮ್ಮ ಮಂತ್ರಿಮಂಡಲವನ್ನು ತಾವೇ ನಾಮ ನಿರ್ದೇಶನ ಮಾಡುವ ಪದ್ಧತಿ, ಹೆಚ್ಚು ಪ್ರಜಾಸತ್ತಾತ್ಮಕವಾದುದೆಂದು ನಾನು ಭಾವಿಸುತ್ತೇನೆ. ಬ್ರಿಟಿಷ್ ಮಾದರಿಯನ್ನು ಅನುಕರಿಸುವುದಕ್ಕಿಂತ ಈ ಪದ್ಧತಿ ಉತ್ತಮವೂ ವಿವೇಕಪೂರ್ಣ ತತ್ತ್ವಗಳನ್ನು ಆಧರಿಸಿದುದೂ ಆಗಿದೆ. ಬ್ರಿಟಿಷ್ ಮಾದರಿಯನ್ನು ಫ್ರಾನ್ಸ್‌ನಲ್ಲಿ ಅಳವಡಿಸಿದಾಗ ಅಲ್ಲಿಯ ಆಡಳಿತ ನಿರ್ವಹಣೆಗೆ ಅದು ಸರಿಹೊಂದಲಿಲ್ಲ. ಅಲ್ಲಿ ಸಣ್ಣಪುಟ್ಟ ಪಕ್ಷಗಳನ್ನೂ ಸಮೂಹಗಳನ್ನೂ ಬೆಂಬಲಿಸುವ ಪ್ರವೃತ್ತಿ ಇದೆ. ಬ್ರಿಟಿಷ್ ಮಾದರಿ ತಮಗೆ ಎಂದಿಗೂ ಹೊಂದಿಕೊಳ್ಳುವುದಿಲ್ಲವೆಂಬುದನ್ನು ಅವರು ಮನಗಂಡರು. ಸಂದರ್ಭಕ್ಕೆ ಹೊಂದುವ ಸರ್ಕಾರವನ್ನು ರಚಿಸುವಲ್ಲಿ ಅಮೆರಿಕ ತನ್ನ ಅಧ್ಯಕ್ಷರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುತ್ತದೆ. ಉದಾಹರಣೆಗೆ ಯುದ್ಧ ನಡೆದಾಗ ಅಧ್ಯಕ್ಷ ರೂಸ್‌ವೆಲ್ಟ್ ಪ್ರತಿಪಕ್ಷದ ಈರ್ವರು ಸದಸ್ಯರನ್ನು ತಮ್ಮ ಸಚಿವ ಸಂಪುಟಕ್ಕೆ ನಾಮ ನಿರ್ದೇಶನ ಮಾಡಿದರು. ಅವರಿಗೆ ಬಹುಮುಖ್ಯವಾದ ಹುದ್ದೆಗಳನ್ನು ನೀಡಲಾಯಿತು. ಹಾಗಾಗಿ ಒಂದು ಸಮ್ಮಿಶ್ರ ಸರ್ಕಾರದ ಪೂರ್ವಾಲೋಚನೆಯಂತೆ ಯಾವ ಲೋಪಗಳಿಗೂ ಇಂತಹ ಸರ್ಕಾರದಲ್ಲಿ ಆಸ್ಪದವಿರುವುದಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಚಿಂತನವೈರುಧ್ಯಗಳು ಇರುತ್ತವೆ. ಹತ್ತು ಹಲವು ದಿಕ್ಕುಗಳಲ್ಲಿ ಅದರ ಆಲೋಚನೆಗಳು ಹರಿಯುತ್ತವೆ. ನನ್ನ ವೈಯಕ್ತಿಕ ಅಭಿಪ್ರಾಯದಂತೆ ಅಮೆರಿಕದ ಪದ್ಧತಿ ಅದನ್ನು ಬಿಂಬಿಸಿದ ರೀತಿಯ ಕಾಲು ಭಾಗದಷ್ಟೂ ಸಹ ಹದಗೆಟ್ಟಿಲ್ಲ. ಸ್ಪೇನ್ ಬಿಕ್ಕಟ್ಟಿನ ಸಂದರ್ಭದಲ್ಲಿ ಲಾರ್ಡ್ ಟೆಂಪ್ಲ್‌ಟನ್ (ಮಾಜಿ ಸರ್ ಸ್ಯಾಮ್ಯುಯಲ್ ಹೋರ್) ಅವರನ್ನು ಸಂಪುಟದಿಂದ ಉಚ್ಚಾಟನೆ ಮಾಡಿದಾಗ ಬೊಬ್ಬೆ ಇಟ್ಟಿದ್ದು, ಇಲ್ಲಿ ಅನೇಕ ಸದಸ್ಯರು ನೆನಪಿಸಿಕೊಳ್ಳಬಹುದು.

ಅಮೆರಿಕದಲ್ಲಿ ದಿನಕ್ಕೊಬ್ಬ ರಾಜ್ಯ ಕಾರ್ಯದರ್ಶಿಯನ್ನು ಉಚ್ಚಾಟಿಸಿ ಮತ್ತೊಬ್ಬನನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಜನರಲ್ ಮಾರ್ಷಲ್ ಯಾವುದೇ ಕೂಗಾಟವಿಲ್ಲದೆ ನೇಮಕಗೊಂಡಿದ್ದಾರೆ ತಾತ್ಕಾಲಿಕವಾಗಿ ಕಾರ್ಯಾಂಗಕ್ಕೆ ಮುಖ್ಯಸ್ಥನನ್ನು ನೇಮಕ ಮಾಡುವ ಅಧ್ಯಕ್ಷರ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ. ಸುದೀರ್ಘ ಭಾಷಣದಿಂದ ಸದನವನ್ನು ಹಿಡಿದಿಟ್ಟುಕೊಳ್ಳಲು ನಾನು ಇಚ್ಛಿಸುವುದಿಲ್ಲ. ನನ್ನ ನಿಲುವನ್ನು ಸ್ಪಷ್ಟಪಡಿಸಲು ಬಯಸುತ್ತೇನಷ್ಟೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ನನ್ನ ಪಕ್ಷದ ಧೋರಣೆಯಲ್ಲ.

ಅಮೆರಿಕದ ಪದ್ಧತಿ ಅದರ ಟೀಕಾಕಾರರು ಬಿಂಬಿಸಿದಷ್ಟು ಕೆಟ್ಟದ್ದಲ್ಲವೆಂಡು ವಿವರಿಸಬೇಕೆಂದು ಆಲೋಚಿಸಿದೆ.

**ಮೆಹಬೂಬ್ ಆಲಿ ಬೇಗ್ ಸಾಹಿಬ್ ಬಹದೂರ್** (ಮದರಾಸ್ : ಮುಸ್ಲಿಮ್) : ಸನ್ಮಾನ್ಯ ಸಭಾಧ್ಯಕ್ಷರೆ, ೧೦ನೇ ಖಂಡ, ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ವಿಶ್ಲೇಷಿಸಿದ ರೀತಿಯಲ್ಲಿ ಬ್ರಿಟಿಷ್ ಮಾದರಿಯ ಕಾರ್ಯಾಂಗವನ್ನು ಪರಿಚಯಿಸುತ್ತದೆ. ಇದನ್ನೆ ಸಂಸದೀಯ ಎಂದು ಗುರುತಿಸುವುದು ಲೋಕರೂಢಿ. ಖಾಜಿ ಸೈಯದ್ ಕರೀಮುದ್ದೀನ್ ಸಾಹಿಬ್ ಅವರು ಸಮಿಶ್ರ ಕಾರ್ಯಾಂಗವನ್ನು ಅಳವಡಿಸುವುದರ ಮೂಲಕ ಈ ಖಂಡಕ್ಕೆ ತಿದ್ದುಪಡಿಯೊಂದನ್ನು ತರಲು ಉದ್ದೇಶಿಸಿದ್ದಾರೆ. ಇದು ಸ್ವಿಸ್ ಮಾದರಿಯ ಕಾರ್ಯಾಂಗ. ಶ್ರೀ ಕಾಜಿ ಸಾಹೇಬರು ಆಲೋಚಿಸಿರುವ ಕಾರ್ಯಾಂಗವು ಪ್ರಜಾಸತ್ತಾತ್ಮಕವಲ್ಲದ ಕಾರ್ಯಸಾಧ್ಯವಾಗದ ಮತ್ತು ರಾಷ್ಟ್ರದ ಪ್ರಸ್ತುತ ಸನ್ನಿವೇಶಗಳಿಗೆ ಒಗ್ಗದ ತಿದ್ದುಪಡಿಯಾಗುತ್ತದೆಯೆ ಹೇಗೆ ಎಂಬುದನ್ನು ಪರಾಮರ್ಶಿಸೋಣ.

ಈ ಮೂರು ಶೀರ್ಷಿಕೆಗಳ ಅಡಿಯಲ್ಲಿ ಸದನವು ವಿಷಯವನ್ನು ಪರ್ಯಾಲೋಚಿಸಬೇಕಾಗುತ್ತದೆ. ಮಾನ್ಯರೆ, ತಾವು ತಿಳಿದಿರುವಂತೆ ಬ್ರಿಟಿಷ್ ಸಂಸದೀಯ ಪದ್ಧತಿ ಶಾಸನಬದ್ಧವಲ್ಲ. ಅದೊಂದು ಐತಿಹಾಸಿಕ ಬೆಳವಣಿಗೆ. ಜನಸಾಮಾನ್ಯರು ಮತ್ತು ದೊರೆಯ ನಡುವಣ ಶತಶತಮಾನಗಳ ಸಂಘರ್ಷದ ಪರಿಣಾಮ ರಾಜ್ಯಾಡಳಿತವನ್ನು ಜನತಾ ಪ್ರತಿನಿಧಿಗಳು ನಿರ್ವಹಿಸಲು ಗರಿಷ್ಠ ಪ್ರಮಾಣದ ಅಧಿಕಾರವನ್ನು ಕಸಿದುಕೊಳ್ಳಲು ನಡೆಸಿದ ಹೋರಾಟ. ಸಂಸತ್ತಿನ ಸದಸ್ಯರು ಚುನಾಯಿತರೇನೋ ನಿಜ. ಸದಸ್ಯರ ಚುನಾವಣೆಯ ಅನಂತರ ಬಹುಸಂಖ್ಯಾತ ಪಕ್ಷದ ಮುಖಂಡನ ರಾಜ್ಯದ ಮುಖ್ಯಸ್ಥರು, ಅರ್ಥಾತ್ ದೊರೆ ಆಹ್ವಾನಿಸುತ್ತಾರೆ. ಸರ್ಕಾರವನ್ನು ರಚಿಸಲು ಕರೆ ಕೊಡುತ್ತಾರೆ. ಅವರು ತಮ್ಮ ಸಚಿವರನ್ನು ತಾವೇ ಆಯ್ಕೆ ಮಾಡುತ್ತಾರೆ. ಅಭ್ಯರ್ಥಿಗಳು ಚುನಾಯಿತರಾಗಿ, ಸಂಸತ್ ಸದಸ್ಯರಾಗಿ ಬರುವವರೆಗೆ ಪ್ರಜಾಪ್ರಭುತ್ವ ಮೆರೆಯುತ್ತದೆ. ಅಲ್ಲಿಂದ ಮುಂದೆ ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಕಾರಣ ಬಹುಸಂಖ್ಯಾತರ ಪಕ್ಷದ ಮುಖಂಡ ಯಾರನ್ನಾದರೂ ತನ್ನ ಇಚ್ಛಾನುಸಾರ ಆರಿಸಬಹುದು. ಸಚಿವರು, ಮತದಾರರು ಬೆಂಬಲಿಸಿದ ಪಕ್ಷಕ್ಕೇ ಸೇರಿದವರಾಗಿರುತ್ತಾರೆ. ಆದರೆ ಆ ಸಚಿವರು ನಿರ್ದಿಷ್ಟವಾಗಿ ಸಂಸತ್ ಸದಸ್ಯರಿಂದ ಆಯ್ಕೆಗೊಳ್ಳುವುದಿಲ್ಲ. ಅನಂತರ ಸರ್ಕಾರ ರಚನೆಯಾಗುತ್ತದೆ. ಮಾನ್ಯರೆ, ಅದು ಸಂಸತ್ತಿನ ವಿಶ್ವಾಸ ಗಳಿಸುವವರೆಗೆ ಆಡಳಿತದ ಚುಕ್ಕಾಣಿ ಹಿಡಿದಿರುತ್ತದೆ. ಆದರೆ ಒಂದು ಸನ್ನಿವೇಶದಲ್ಲಿ ಕಾರ್ಯಾಂಗದ ಕಾರ್ಯವೈಖರಿಯಿಂದ ಅತೃಪ್ತವಾದ ಸಂಸತ್ತಿನ ಒಂದು ವರ್ಗ ಕಾರ್ಯಾಂಗವನ್ನು ಉಚ್ಚಾಟಿಸಲು ಅಸಮರ್ಥವಾಗಿದೆ ಎಂದು ಭಾವಿಸೋಣ. ಆ ಸಣ್ಣವರ್ಗದಲ್ಲಿರುವ ಸದಸ್ಯರ ಬಗ್ಗೆ ಬಹುಸಂಖ್ಯಾತ ಮತದಾರರು ಭರವಸೆ ಹೊಂದಿರುವ ಸಾಧ್ಯತೆ ಇದೆ. ವಿಪರ್ಯಾಸವೆಂದರೆ ಅಸಲಿ ಸರ್ವತಂತ್ರ ಸ್ವತಂತ್ರ ಜನತೆ ಸಚಿವ ಸಂಪುಟವನ್ನು ಹೊರಹಾಕಲಿಕ್ಕಾಗದು. ಮಾನ್ಯರೆ, ಸಂಸದೀಯ ಕಾರ್ಯಾಂಗಕ್ಕೆ ನೈಜ ಪ್ರಜಾಸತ್ತಾತ್ಮಕ ಲಕ್ಷಣ ಇರುವುದಿಲ್ಲವೆಂಬುದು ಸುಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಸಂಸತ್ತು ಸಚಿವರನ್ನು ಆಯ್ಕೆ ಮಾಡುವುದಿಲ್ಲ. ಎರಡನೆಯದಾಗಿ ಮತದಾರರು ಅವರನ್ನು ಪದಚ್ಯುತಗೊಳಿಸಲಾರರು. ಆದುದರಿಂದ ಮಾನ್ಯರೆ, ಆ ಹಂತದಿಂದ ಇಂಗ್ಲೆಂಡ್‌ನಲ್ಲಿರುವಂತೆ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸುವುದು ಇಲ್ಲಿಯ ಸಂದರ್ಭಕ್ಕೆ ಹೊಂದುವುದಿಲ್ಲ. ಇಲ್ಲಿ ಅದು ಪ್ರಜಾಸತ್ತಾತ್ಮಕವಾಗುವುದಿಲ್ಲ. ಈಗ ಖಾಜಿ ಸಾಹೇಬರು ತಾಳಿದ ನಿಲುವನ್ನು ಪರಾಮರ್ಶಿಸೋಣ; ಚುನಾವಣೆಯ ಅನಂತರ ಸದಸ್ಯರು ತಮ್ಮ ಸಚಿವರನ್ನು ತಾವೇ ಆರಿಸುತ್ತಾರೆನ್ನೋಣ. ಹಾಗಾಗಿ ಇದು ಬ್ರಿಟಿಷ್ ಸಂಸದೀಯ ಪದ್ಧತಿಗಿಂತ ಹೆಚ್ಚು ಪ್ರಜಾಸತ್ತಾತ್ಮಕ. ಇದು ಎರಡು ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. ಒಂದು ಸಂಸತ್ ಸದಸ್ಯರು ಮತದಾರರಿಂದ ಚುನಾಯಿಸಲ್ಪಡುತ್ತಾರೆ. ಎರಡನೆಯದು ಸಂಸತ್ ಸದಸ್ಯರು ವಾಸ್ತವ ಜನತಾ ಪ್ರತಿನಿಧಿಗಳಾಗಿ ತಮ್ಮ ಸಚಿವರನ್ನು ತಾವೇ ಆರಿಸುತ್ತಾರೆ. ಈ ತಿದ್ದುಪಡಿ ನಮ್ಮ ರಾಷ್ಟ್ರದ ಸನ್ನಿವೇಶಗಳಿಗೆ ಕಾರ್ಯಸಾಧ್ಯವಾಗುತ್ತದೆಯೆ ನೋಡೋಣ. ನಾನು ಹಿಂದೊಮ್ಮೆ ಹೇಳಿದಂತೆ ಸಂಸತ್ ಸದಸ್ಯರ ಪ್ರಜಾಸತ್ತಾತ್ಮಕ

ಚುನಾವಣೆ ಮತ್ತು ಸಚಿವ ಸಂಪುಟದ ಚುನಾವಣೆ ಎರಡೂ ರಾಷ್ಟ್ರದ ಎಲ್ಲ ವರ್ಗಗಳನ್ನೂ ಪ್ರತಿಬಿಂಬಿಸಬೇಕು. ವಾಸ್ತವಿಕತೆಗೆ ಕುರುಡಾಗುವುದರಲ್ಲಿ ಪ್ರಯೋಜನವಿಲ್ಲ. ವರ್ಗಗಳ, ವಿಭಾಗಗಳ ದೃಷ್ಟಿಯಿಂದ ಸಮುದಾಯಗಳು ಮತ್ತು ವಿಶೇಷ ಆಸಕ್ತಿಯ ದೃಷ್ಟಿಯಿಂದ ಆಲೋಚಿಸಬಾರದು ಎಂಬುದೇನೋ ನಿಜ. ಆದರೆ ಪ್ರತಿನಿತ್ಯ ನಾವು ಕಾಣುತ್ತಿರುವಂತೆ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಪಕ್ಷಗಳು ಸದನದ ಒಳಗೂ ಹೊರಗೂ ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ಯಾವಾಗಲೂ ಮಾತನಾಡುತ್ತಲೆ ಇರುತ್ತವೆ–ಧಾರ್ಮಿಕ ಅಲ್ಪಸಂಖ್ಯಾತರು, ವಿಭಾಗೀಯ ಅಲ್ಪಸಂಖ್ಯಾತರು, ತುಳಿತಕ್ಕೆ ಒಳಗಾದ ಅಲ್ಪಸಂಖ್ಯಾತರು ಮತ್ತು ರಾಷ್ಟ್ರದ ವಿಭಿನ್ನ ಪ್ರದೇಶಗಳ ಅಲ್ಪಸಂಖ್ಯಾತರು. ಇದು ವಾಸ್ತವ. ಈ ವಾಸ್ತವಕ್ಕೆ ನಾವು ಕುರುಡಾಗುವುದು ಬೇಡ. ಪಕ್ಷದ ಮುಖಂಡನನ್ನು ರಾಜ್ಯದ ವರಿಷ್ಠರು ಆಹ್ವಾನಿಸಿದಾಗ ಅವರು ಸಹಜವಾಗಿಯೆ ಕೆಲ ಆಸಕ್ತಿಗಳನ್ನು, ಕೆಲಕೋಮುಗಳನ್ನು ಪ್ರತಿನಿಧಿಸುವ ವ್ಯಕ್ತಿಗಳನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುತ್ತಾರೆ. (ನಾವು ಅವರಿಂದ ಅದನ್ನು ನಿರೀಕ್ಷಿಸಬಹುದು) ಅವರು ಹಾಗೆಯೇ ಮಾಡುತ್ತಾರೆ. ಅದು ರೂಢಿಗತ ಕ್ರಮವಾಗಬಹುದು. ಇಲ್ಲವೆ ವಿವೇಚನಾಪೂರ್ಣವಾಗಬಹುದು. ಏನೇ ಆಗಲಿ ಅದು ಆ ರೀತಿ ನಡೆಯುತ್ತದೆ. ಆದರೆ ಆ ರೀತಿ ಅವರು ನಿರ್ಧರಿಸದಿರುವಾಗ ಮತ್ತು ಅವರನ್ನು ಬಲಾತ್ಕಾರಕ್ಕೆ ಒಳಪಡಿಸಲು ಸಾಧ್ಯವಿಲ್ಲದಿರುವಾಗ ಭಾರಿ ಅತೃಪ್ತಿ, ಅಪನಂಬಿಕೆ ಮುಂತಾದುವು ಹೊಗೆಯಾಡುತ್ತವೆ. ಆದುದರಿಂದ ಸಂವಿಧಾನದಲ್ಲೇ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸುವುದು ಸೂಕ್ತ. ಅದರಂತೆ ಸಚಿವರನ್ನು ಚುನಾಯಿಸಬೇಕು. ಸಂದರ್ಭಾನುಸಾರ ಅನುಪಾತೀ ಪ್ರಾತಿನಿಧ್ಯದ ತತ್ತ್ವವನ್ನು ಆಧರಿಸಿದ ಒಂಟಿ ವರ್ಗಾವಣೀಯ ಅಥವಾ ವರ್ಗಾವಣೀಯವಲ್ಲದ ಮತದ ವಿಧಾನದಿಂದ ಚುನಾಯಿಸುವ ಪದ್ಧತಿಯನ್ನು ಅಳವಡಿಸಬೇಕು. ಆಗ ಅದು ತೃಪ್ತಿಕರ. ಅದು ಪ್ರಜಾಪ್ರಭುತ್ವಾಧಾರಿತ ಚುನಾವಣೆಯಾಗುತ್ತದೆ. ಅದು ಎಲ್ಲ ವರ್ಗದ ಜನರನ್ನೂ ಪ್ರತಿನಿಧಿಸುತ್ತದೆ. ಜೊತೆಗೆ ಪ್ರತಿಗಾಮಿ ಶಕ್ತಿಗಳಿಂದ ಕೂಡಿದ ಸಚಿವ ಸಂಪುಟದ ರಚನೆಯಾಗುವುದು ಸಾಧ್ಯವಿಲ್ಲ. ಇಷ್ಟಾದರೂ ಅಧಿಕಾರದಲ್ಲಿರುವ ಪಕ್ಷ, ಬಹುಸಂಖ್ಯಾತ ಪ್ರತಿಗಾಮಿಗಳನ್ನು ಹೊಂದಿರಬಹುದು. ಅವರಲ್ಲಿ ಮತದಾರನಿಗೆ ವಿಶ್ವಾಸ ಇಲ್ಲದಿರಬಹುದು. ಏನೇ ಆಗಲಿ ಸಚಿವ ಸಂಪುಟ ಮುಂದುವರಿಯುತ್ತದೆ. ನಾಲ್ಕು/ಐದು ವರುಷಗಳ ಅವಧಿಯನ್ನು ಪೂರ್ತಿಗೊಳಿಸುವುದೆಂದು ನಿರೀಕ್ಷಿಸಬಹುದಾಗಿದೆ.

ಈ ತಿದ್ದುಪಡಿಯಲ್ಲಿ ನಮಗೆ ಪ್ರಜಾಪ್ರಭುತ್ವ ನೀತಿಯ ಆಧಾರದ ಮೇಲೆ ನಮ್ಮ ಸಚಿವ ಸಂಪುಟಕ್ಕೆ ಚುನಾಯಿಸುವ ಪ್ರಯೋಜನವಿದೆ. ಅವರನ್ನು ಚುನಾಯಿಸಿದ ಮೇಲೆ ಅಲ್ಲೆ ಮುಂದುವರಿಯುವಂತೆ ಹೇಳಬಹುದು. ಬ್ರಿಟಿಷ್ ಪದ್ಧತಿಯಂತೆ ಚುನಾಯಿಸಲ್ಪಡುವ ವ್ಯಕ್ತಿಗೆ ಉಚ್ಚಾಟನೆಯ ಭೀತಿ ಇರುತ್ತದೆ. ಆದುದರಿಂದ ಮಾನ್ಯರೆ, ನಾವು ಈ ಕಾರ್ಯಾಂಗವನ್ನು ನಿಗದಿತ ಅವಧಿಯವರೆಗೆ ಉಚ್ಚಾಟಿಸಲಾಗದಂತೆ ಸ್ಥಿರಗೊಳಿಸಿದರೆ ಚುನಾಯಿತ ವ್ಯಕ್ತಿಯ ಕಾರ್ಯಕ್ಷಮತೆ ಉತ್ತಮಗೊಳ್ಳುತ್ತದೆ. ಯೋಜನಾಭಿವೃದ್ಧಿಯಲ್ಲಿ ತೊಡಗಿ ಅದನ್ನು ಪೂರ್ಣಗೊಳಿಸುವ ಕ್ಷಮತೆ ತೋರಬಹುದು. ಆದುದರಿಂದ ಮಾನ್ಯರೆ, ಸ್ವಿಸ್ ಮಾದರಿಯಲ್ಲಿ ಕೆಲವು ಹಂತಗಳಲ್ಲಿ ಪ್ರಜಾಪ್ರಭುತ್ವವನ್ನು ಮೆರೆಯಬಹುದು. ಅದರಲ್ಲಿ ರಾಷ್ಟ್ರದ ಎಲ್ಲ ವರ್ಗಗಳಿಗೂ ಪ್ರಾತಿನಿಧ್ಯ ದೊರೆಯುತ್ತದೆ. ಅದರ ಕಾರ್ಯವೈಖರಿ ಉತ್ತಮಗೊಳ್ಳುತ್ತದೆ. ಯೋಜನೆಗಳನ್ನು ಸಮರ್ಥ ರೀತಿಯಲ್ಲಿ ಪೂರೈಸಬಹುದು. ರಾಷ್ಟ್ರದ ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಂತ ಸೂಕ್ತವಾದುದು ಮತ್ತು ಈ ಪದ್ಧತಿಯನ್ನು ಅಳವಡಿಸುವುದರಲ್ಲಿ ತಪ್ಪೇನೂ ಇಲ್ಲ. ಜೊತೆಗೆ ಈ ಪದ್ಧತಿಗಳನ್ನು ನೆನಪಿಲ್ಲಿಡೋಣ–ಸ್ವಿಸ್ ಮತ್ತು ಅಮೆರಿಕದ ಪದ್ಧತಿಗಳು ಇವು ಇತರ ರಾಷ್ಟ್ರಗಳ ಅನುಭವದಿಂದ ರೂಪುಗೊಂಡವು. ಆ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ. ಬ್ರಿಟಿಷ್ ಪದ್ಧತಿ ಪ್ರಜಾಸತ್ತಾತ್ಮಕವಲ್ಲವೆಂಬುದು ಅನುಭವಜನ್ಯ ಅಭಿಪ್ರಾಯ. ಇಷ್ಟಕ್ಕೂ ಅಲ್ಲಿಯ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಯಾರು ಅಧಿಕಾರದ ಸೂತ್ರಧಾರಿ? ವಾಸ್ತವವಾಗಿ ಪ್ರಧಾನಿ ಅಥವಾ ಅವರ ಕಾರ್ಯಾಂಗ. ಅಲ್ಲಿ ಪಕ್ಷದ ಶಿಸ್ತಿನ ಹೆಸರಿನಲ್ಲಿ ಪಕ್ಷ ಸಚಿವ ಸಂಪುಟ ಮತ್ತು ಪ್ರಧಾನಿ ಯಾವುದು ಒಳಿತೆಂದು ಬಗೆಯುತ್ತಾರೋ ಆ ಒಳಿತಿಗಾಗಿ ಮಿಕ್ಕೆಲ್ಲ

ಸದಸ್ಯರು ಅವರನ್ನು ಅನುಸರಿಸಬೇಕು. ಇಲ್ಲವಾದರೆ ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ಮಾನ್ಯರೆ, ನಾನು ಈ ಎಲ್ಲ ಕಾರಣಗಳಿಂದ ಖಾಜಿ ಸೈಯದ್ ಕರೀಮುದ್ದೀನ್ ಅವರು ಆಲೋಚಿಸಿದ ಸ್ವಿಸ್ ಪದ್ಧತಿ ಅಂಗೀಕಾರ ಯೋಗ್ಯವಾದ, ಬಹಳಷ್ಟು ಪ್ರಯೋಜನಗಳನ್ನು ಹೊಂದಿದ ಪದ್ಧತಿ ಎಂದು ಹೇಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಖಂಡ ಕುರಿತಂತೆ ಸಾಕಷ್ಟು ಚರ್ಚೆ ನಡೆಸಿದ್ದೇವೆ ಎಂದುಕೊಂಡಿದ್ದೇನೆ. ಈಗ ತಿದ್ದುಪಡಿಯನ್ನೂ ಖಂಡವನ್ನೂ ಮತಕ್ಕೆ ಹಾಕುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ** (ಬಾಂಬೆ : ಸಾಮಾನ್ಯ) : ಚರ್ಚೆ ಮುಕ್ತಾಯಗೊಳಿಸಬೇಕೆಂಬ ಪ್ರಸ್ತಾವವನ್ನು ನಾನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಚರ್ಚೆಯನ್ನು ಪರಿಸಮಾಪ್ತಿಗೊಳಿಸುವ ಪ್ರಸ್ತಾವವನ್ನು ಶ್ರೀ ಮುನ್ಷಿಯವರು ಮಂಡಿಸಿದ್ದಾರೆ. ಸದನವು ಪ್ರಸ್ತಾವವನ್ನು ಅಂಗೀಕರಿಸಿದೆ ಎಂದು ಭಾವಿಸುತ್ತೇನೆ.

ಮುಂದಿಟ್ಟಿರುವ ವಿಷಯ :

"೧೧ನೇ ಖಂಡಕ್ಕೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು:

'ಜಂಟಿ ವರ್ಗಾವಣೀಯ ಮತವಿಧಾನದಿಂದ ಅನುಪಾತೀ ಪ್ರಾತಿನಿಧ್ಯದ ನಿಯಮದಂತೆ ರಾಷ್ಟ್ರೀಯ ಸಭೆಯಿಂದ ಚುನಾಯಿಸಲ್ಪಟ್ಟ ಮಂತ್ರಿಮಂಡಲ ಇರಬೇಕು ಮತ್ತು ಮಂತ್ರಿಮಂಡಲ ರಾಷ್ಟ್ರೀಯ ಸಭೆಗೆ ಹೊಣೆಯಾಗಿರಬೇಕು'."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಖಾಜಿ ಸೈಯದ್ ಕರೀಮುದ್ದೀನ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

"೧೧ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ಒಕ್ಕೂಟದ ಕಾರ್ಯಾಂಗ ಸಂಸದೀಯೇತರವಾಗಿರಬೇಕು ಎಂದರೆ ಶಾಸನ ಸಭೆಯ ಅವಧಿಗೆ ಮುನ್ನ ಅದನ್ನು ಪದಚ್ಯುತಿಗೊಳಿಸಬಾರದು ಮತ್ತು ಸಂಪುಟದ ಅಥವಾ ಸಂಪುಟಗಳ ಸದಸ್ಯ ಯಾವುದೇ ಸಂದರ್ಭದಲ್ಲಾಗಲಿ ಭ್ರಷ್ಟಾಚಾರ ಅಥವಾ ರಾಷ್ಟ್ರದ್ರೋಹದ ಆಪಾದನೆಯ ಮೇಲೆ ನ್ಯಾಯಾಧಿಕರಣದ ಮುಂದೆ ಛೀಮಾರಿ ಹಾಕಿಸಿಕೊಂಡು ಪದಚ್ಯುತನಾಗಬಹುದು. ಪ್ರಧಾನಿಯವರು ಒಂಟಿ ವರ್ಗಾವಣೀಯ ಮತದ ವಿಧಾನದಿಂದ ಇಡೀ ಸದನದಿಂದ ಚುನಾಯಿತರಾಗಬೇಕು. ಸಂಪುಟದ ಇತರ ಸಚಿವರು ಒಂಟಿ ವರ್ಗಾವಣೀಯವಲ್ಲದ ಮತವಿಧಾನದಿಂದ ಚುನಾಯಿತರಾಗಬೇಕು'."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನೀಗ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

"೧೧ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ಪ್ರಧಾನಿಯವರು ರಾಷ್ಟ್ರಪತಿಗಳಿಂದ ನೇಮಕಗೊಳ್ಳಬೇಕು ಮತ್ತು ಪ್ರಧಾನಿಯವರ ಸಲಹೆಯ ಮೇರೆಗೆ ರಾಷ್ಟ್ರಪತಿಗಳಿಂದ ಇತರ ಸಚಿವರು ನೇಮಕಗೊಳ್ಳಬೇಕು. ಸಚಿವ ಮಂಡಲಿಯು ಸಂಘಟಿತವಾಗಿ ಲೋಕಸಭೆಗೆ ಹೊಣೆಯಾಗಿರಬೇಕು'."

ಪ್ರಸ್ತಾವಕರು ಇದನ್ನು ಅಂಗೀಕರಿಸಿದ್ದಾರೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಠಾಕೂರ್ ದಾಸ್ ಭಾರ್ಗವ ಅವರಿಂದ ಮತ್ತೊಂದು ತಿದ್ದುಪಡಿ ಇದೆ. ಅದು ಈ ತಿದ್ದುಪಡಿಯ ವ್ಯಾಪ್ತಿಗೇ ಒಳಪಡುವುದರಿಂದ ಅದನ್ನು ಸದನದ ಮತಕ್ಕೆ ಹಾಕುವ ಅಗತ್ಯವಿಲ್ಲ ಎನಿಸುತ್ತೆ.

ಈಗ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ ತಿದ್ದುಪಡಿಯಿಂದ ತಿದ್ದುಪಡಿಯಾದ ಮೂಲಖಂಡವನ್ನು ಮತಕ್ಕೆ ಹಾಕುತ್ತೇನೆ.

೧೦ನೇ ಖಂಡದಂತೆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

## ಖಂಡ – ೧೧

**ಮಾನ್ಯ ಸಭಾಧ್ಯಕ್ಷರು** : ೧೧ನೇ ಖಂಡ. ಸರ್ ಗೋಪಾಲಸ್ವಾಮಿ ಅಯ್ಯಂಗಾರ್

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :**

"೧೧ನೇ ಖಂಡವನ್ನು ನಾನು ಮಂಡಿಸಲು ಅನುಮತಿ ಕೋರುತ್ತೇನೆ.

'೧೧ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹತೆ ಪಡೆಯುವ ವ್ಯಕ್ತಿಯೊಬ್ಬರನ್ನು ರಾಷ್ಟ್ರಪತಿಗಳು ಒಕ್ಕೂಟದ ಅಡ್ವೋಕೇಟ್ ಜನರಲ್ ಆಗಿ ನೇಮಕಮಾಡಬೇಕು ಮತ್ತು ಅವರಿಗೆ ವಹಿಸಿಕೊಡುವ ಕಾನೂನು ವಿಷಯಗಳಲ್ಲಿ ಸಂಯುಕ್ತ ಸರ್ಕಾರಕ್ಕೆ ಸಲಹೆ ನೀಡಬೇಕು'."

**ಶ್ರೀ ಗೋಕುಲ್‌ಭಾಯಿ ಡಿ. ಭಟ್** : *[ಮಾನ್ಯರೆ ನಾನು ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಲಿರುವ ತಿದ್ದುಪಡಿಯ ಪರವಾಗಿ ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.]

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯ ಸಭಾಧ್ಯಕ್ಷರೆ ಕೆಳಕಂಡ ತಿದ್ದುಪಡಿಯನ್ನು ೧೧ ಖಂಡಕ್ಕೆ ಮಂಡಿಸಲು ಅನುಮತಿ ಬೇಡುತ್ತೇನೆ.

"(೧) ೧೧ನೇ ಖಂಡದಲ್ಲಿ 'ಒಪ್ಪಿಸಿದೆ' ಎಂಬ ಪದದ ಅನಂತರ 'ಅಥವಾ ವಹಿಸಿದ' ಎಂಬ ಪದವನ್ನು ಒಳ ಸೇರಿಸಬೇಕು.

'(೨) ೧೧ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

ರಾಷ್ಟ್ರಪತಿಗಳಿಂದ ಅಥವಾ ಅಧಿನಿಯಮದ ಅಡಿಯಲ್ಲಿ ಅಥವಾ ಯಾವುದೇ ಸಂಯುಕ್ತ ಕಾನೂನಿನಿಂದ ಅವರಿಗೆ ವಹಿಸಿದ ಅಧಿಕಾರವನ್ನು ಚಲಾಯಿಸಬೇಕು ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು ಮತ್ತು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಭಾರತದ ಒಕ್ಕೂಟದ ಎಲ್ಲ ನ್ಯಾಯಾಲಯಗಳಲ್ಲಿ ಚುನಾವಣೆಯ ಹಕ್ಕು ಅವರಿಗಿರುತ್ತದೆ. ರಾಷ್ಟ್ರಪತಿಗಳ ಆಡಳಿತಾವಧಿಯಲ್ಲಿ ಅಡ್ವೋಕೇಟ್ ಜನರಲ್ ಕಾರ್ಯನಿರ್ವಹಿಸುತ್ತಾರೆ ಮತ್ತು ರಾಷ್ಟ್ರಪತಿಗಳು ನಿರ್ಧರಿಸಿದ ವೇತನವನ್ನು ಪಡೆಯುತ್ತಾರೆ'."

ಇದೊಂದು ಔಪಚಾರಿಕ ತಿದ್ದುಪಡಿಯಷ್ಟೆ. ಏಕೆಂದರೆ ಇದರಲ್ಲಿ ಮೂರು ಕರ್ತವ್ಯಗಳಿವೆ. ರಾಷ್ಟ್ರಪತಿಗಳು ಅವರಿಗೆ ವಹಿಸಿಕೊಟ್ಟ ಕರ್ತವ್ಯಗಳು, ಅವರಿಗೆ ಅನ್ವಯಿಸಿದ ಇತರ ಕರ್ತವ್ಯಗಳು, ಬೇರೆ ಬೇರೆ ಅಧಿನಿಯಮಗಳ ಅಡಿಯಲ್ಲಿ ಶಾಸನಬದ್ಧ ಕರ್ತವ್ಯಗಳು. ಎಲ್ಲ ಉಪಬಂಧಗಳೂ ಪೂರ್ಣಗೊಳ್ಳಲೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಮಂಡಿಸಲಾಗಿದೆ. ಇದಕ್ಕೆ ವಿರೋಧವಿರಲಾರದೆಂದು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಖಂಡ ಮತ್ತು ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತ.

[ಯಾವ ಸದಸ್ಯರೂ ಮಾತನಾಡಲಿಲ್ಲ]

**ಮಾನ್ಯ ಸಭಾಧ್ಯಕ್ಷರು** : ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಏನೂ ಮಾತನಾಡಲು ಬಯಸದಿದ್ದರೆ. ನಾನು ಇವನ್ನು ಮತಕ್ಕೆ ಹಾಕುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ತಿದ್ದುಪಡಿಗಳನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಗಳನ್ನು ನಾನು ಮೊದಲು ಮತಕ್ಕೆ ಹಾಕುತ್ತೇನೆ.

"(೧) ೧೧ನೇ ಖಂಡದಲ್ಲಿ 'ಒಪ್ಪಿಸಿದ' ಎಂಬ ಪದದ ಅನಂತರ 'ಅಥವಾ ವಹಿಸಿದ' ಎಂಬ ಪದವನ್ನು ಒಳಸೇರಿಸಬೇಕು.

(೨) ೧೧ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ರಾಷ್ಟ್ರಪತಿಗಳಿಂದ ಅಥವಾ ಅಧಿನಿಯಮದ ಅಡಿಯಲ್ಲಿ ಅಥವಾ ಯಾವುದೇ ಸಂಯುಕ್ತ ಕಾನೂನಿನಿಂದ ಅವರಿಗೆ ವಹಿಸಿದ ಅಧಿಕಾರವನ್ನು ಚಲಾಯಿಸಬೇಕು ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು ಮತ್ತು ತಮ್ಮ ಕರ್ತವ್ಯ

ನಿರ್ವಹಣೆಯಲ್ಲಿ ಭಾರತದ ಒಕ್ಕೂಟದ ಎಲ್ಲ ನ್ಯಾಯಾಲಯಗಳಲ್ಲಿ ಸುನಾವಣೆಯ ಹಕ್ಕು ಅವರಿಗಿರುತ್ತದೆ. ರಾಷ್ಟ್ರಪತಿಗಳ ಆಡಳಿತಾವಧಿಯಲ್ಲಿ ಅಡ್ವೋಕೇಟ್ ಜನರಲ್ ಕಾರ್ಯನಿರ್ವಹಿಸುತ್ತಾರೆ ಮತ್ತು ರಾಷ್ಟ್ರಪತಿಗಳು ನಿರ್ಧರಿಸಿದ ವೇತನವನ್ನು ಪಡೆಯುತ್ತಾರೆ'."

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

**ಮ್ಮಾನ್ಯ ಸಭಾಧ್ಯಕ್ಷರು** : ಖಂಡವನ್ನು ತಿದ್ದುಪಡಿಯ ಅನಂತರ ಮತಕ್ಕೆ ಹಾಕಲಾಗಿದೆ.

೧೧ನೇ ಖಂಡದಂತೆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

## ಖಂಡ – ೧೨

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ೧೨ನೇ ಖಂಡವನ್ನು ಕೆಳಗೆ ಕಂಡಂತೆ ಮಂಡಿಸಲು ಅನುಮತಿ ಕೋರುತ್ತೇನೆ.

"೧೨ ಸಂಯುಕ್ತ ಸರ್ಕಾರದ ಕಾರ್ಯಾಂಗಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ ರಾಷ್ಟ್ರಪತಿಗಳ ಹೆಸರಲ್ಲೆ ನಡೆಯುತ್ತಿರುವುದಾಗಿ ವ್ಯಕ್ತವಾಗಬೇಕು.

ಇದಕ್ಕೆ ಬೇಕಿರುವ ವಿವರಣೆ ಅತ್ಯಲ್ಪ.

(ಶ್ರೀಯುತರುಗಳಾದ ಎಂ.ಅನಂತಶಯನಂ ಅಯ್ಯಂಗಾರ್ ಮತ್ತು ಖಾಜಿ ಸೈಯದ್ ಕರೀಮುದ್ದೀನ್ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಬೇರಾವ ತಿದ್ದುಪಡಿಯೂ ಇರುವುದಾಗಿ ನನಗೆ ತಿಳಿದುಬಂದಿಲ್ಲ. ಯಾರಾದರೂ ಸದಸ್ಯರು ಇದರ ಬಗ್ಗೆ ಯಾವುದೇ ತಿದ್ದುಪಡಿಗೆ ಸೂಚನೆ ನೀಡಿದ್ದು, ನನ್ನ ಗಮನಕ್ಕೆ ಬಂದಿಲ್ಲವಾದರೆ ಅಂಥವರು ಮಂಡಿಸಬಹುದು.

(ಯಾವ ಸದಸ್ಯರೂ ಮಾತನಾಡಲಿಲ್ಲ)

**ಮಾನ್ಯ ಸಭಾಧ್ಯಕ್ಷರು** : ಬೇರೆ ಯಾವುದೇ ತಿದ್ದುಪಡಿಯೂ ಇಲ್ಲವಾದ್ದರಿಂದ ನಾನು ಈ ಖಂಡವನ್ನು ಮತಕ್ಕೆ ಹಾಕುತ್ತೇನೆ.

೧೨ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೧೩

**ಮಾನ್ಯ ಸಭಾಧ್ಯಕ್ಷರು** : ಖಂಡ ೧೩

**ಶ್ರೀ ಆರ್.ಕೆ. ಸಿಧ್ವಾ** : (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ೧೨ ಎ ಎಂಬ ಹೊಸಖಂಡ ಇದೆ. ನೂತನ ಖಂಡಗಳ ಸೇರ್ಪಡೆ ವಿಷಯ ನನ್ನ ಹೆಸರಲ್ಲಿದೆ. ಅದು ಹೀಗಿದೆ:

"೧೨ನೇ ಖಂಡದ ಅನಂತರ ಕೆಳಕಂಡ ಹೊಸ ಖಂಡ ಸೇರಿಸಬೇಕು:

೧೨–ಎ ಒಕ್ಕೂಟ ಕೆಳಕಂಡವಕ್ಕೆ ಕಾನೂನು ಮಾಡಬೇಕು.

೧) ಭಾರಿ ಕೈಗಾರಿಕೆಗಳ ಆರ್ಥಿಕ ರಾಷ್ಟ್ರೀಕರಣದ ಸಮಾಜವಾದಿ ವ್ಯವಸ್ಥೆ ವಾಣಿಜ್ಯೋದ್ಯಮಗಳ ಸಹಕಾರಿ ಬುನಾದಿಯ ಮೇಲೆ ಆಡಳಿತ;

೨) ಖಾಸಗಿ ಒಡೆಯರ ಬಂಡವಾಳದ ಸಮಾನೀಕರಣ;

೩) ಶೋಷಣೆಯ ಪ್ರತಿರೋಧ;

೪) ನಿರುದ್ಯೋಗ ನಿರ್ಮೂಲನ ಮತ್ತು ಪ್ರತಿಯೊಬ್ಬ ನಾಗರಿಕನಿಗೂ ಉದ್ಯೋಗದ ಹಕ್ಕಿನ ಖಾತರಿ;

೫) ಎಲ್ಲ ವರ್ಗದ ಕೆಲಸಗಾರರಿಗೆ ಮನರಂಜನೆ, ವಾರ್ಷಿಕ ರಜೆಗಳು, ಪ್ರಸೂತಿ ವೇತನಾ ಸಹಿತ ರಜೆ, ಶಿಶು ಕಲ್ಯಾಣ, ವಿಶ್ರಾಂತಿ ಧಾಮಗಳು ಕ್ಲಬ್ಬುಗಳು ಮತ್ತು ಅನುಕೂಲಕರ ವಾಸಗೃಹ ಸೌಲಭ್ಯ.

೬) ವೃದ್ಧಾಪ್ಯ ನಿರ್ವಹಣಾ ಹಕ್ಕು, ಖಾಯಿಲೆ ಅಥವಾ ದುಡಿಮೆಯ ಸಾಮರ್ಥ್ಯಕ್ಕೆ ಹಾನಿ ಉಚಿತ ವೈದ್ಯಕೀಯ ನೆರವು..."

**ಮಾನ್ಯ ಸಭಾಧ್ಯಕ್ಷರು** : ಇವೆಲ್ಲವೂ ೩ನೇ ಭಾಗದ ಅಡಿಯಲ್ಲಿ ಬರತಕ್ಕವು ಎಂದುಕೊಳ್ಳುತ್ತೇನೆ. ಅದನ್ನು ನಾವು ಚರ್ಚೆಗೆ ತೆಗೆದುಕೊಂಡಾಗ ತಾವು ಮಂಡಿಸಬಹುದು.

ಮೂಲ ಹಕ್ಕುಗಳ ಬಗ್ಗೆ ಹೇಳುವುದಾದರೆ ಅವೆಲ್ಲವೂ ಸಂವಿಧಾನ ರಚನಾಸಭೆಯಲ್ಲಿ ಈಗಾಗಲೇ ಅಂಗೀಕೃತವಾಗಿವೆ ಮತ್ತೆ ಅವು ಅಂತಿಮ ಚರ್ಚೆಗೆ ಬರಲಿವೆ. ಇದು ಕೇವಲ ಸ್ಥೂಲ ಸಾಂವಿಧಾನಿಕ ನಿಯಮಗಳಿಗೆ ಸಂಬಂಧಿಸಿದವು. ಅವುಗಳನ್ನು ಅಂತಿಮ ಚರ್ಚೆಯಲ್ಲಿ ಪ್ರಸ್ತಾವಿಸಲಾಗುವುದು ಎನಿಸುತ್ತದೆ.

ಈಗ ಸರ್ ಗೋಪಾಲಸ್ವಾಮಿ ಅಯ್ಯಂಗಾರ್, ೧೩ನೇ ಖಂಡ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ೧೩ನೇ ಖಂಡವನ್ನು ಮಂಡಿಸುತ್ತೇನೆ.

"೧೩. ಒಕ್ಕೂಟದ ಶಾಸನ ಅಧಿಕಾರ, ಮಹಾಸಭೆಯ ಸಂಸತ್ತಿಗೆ ವಹಿಸಲ್ಪಡುತ್ತದೆ; ಸಂಸತ್ತು ರಾಷ್ಟ್ರಪತಿ ಮತ್ತು ಎರಡು ಸದನಗಳ ರಾಷ್ಟ್ರೀಯ ಸಭೆ, ರಾಜ್ಯಸಭೆ ಮತ್ತು ಲೋಕಸಭೆಗಳನ್ನು ಒಳಗೊಂಡಿರುತ್ತದೆ."

ಈ ಖಂಡದ ಬಗ್ಗೆ ಒಂದು ತಿದ್ದುಪಡಿಗೆ ನೋಟೀಸು ನೀಡಲಾಗಿದೆ. ಅದರಂತೆ ಒಳಗೊಂಡ ರಾಷ್ಟ್ರೀಯ ಸಭೆ ಎಂಬ ಪದಗಳನ್ನು ಬಿಡಬೇಕು. ಅದು ಅಂಗೀಕೃತವಾದರೆ ಖಂಡ ಈ ರೀತಿ ಇರುತ್ತದೆ.

"ಮಹಾಸಭೆಯ ಶಾಸನ ಅಧಿಕಾರ ಒಕ್ಕೂಟದ ಸಂಸತ್ತಿಗೆ ವಹಿಸಲ್ಪಡುತ್ತದೆ, ಸಂಸತ್ತು ರಾಷ್ಟ್ರಪತಿ, ಎರಡು ಸದನಗಳು, ರಾಜ್ಯ ಸಭೆ ಮತ್ತು ಲೋಕಸಭೆಗಳನ್ನು ಒಳಗೊಂಡಿರುತ್ತದೆ."

ಇದು, ಮುಂದೆ ಒಕ್ಕೂಟದ ಬಹಳಷ್ಟು ವಿಧಾಯಿ ಪದನಾಮಗಳ ಬಳಕೆಯನ್ನು ತಪ್ಪಿಸಲೋಸುಗವಷ್ಟೆ. ಒಕ್ಕೂಟದ ಸಂಸತ್ತು ರಾಷ್ಟ್ರಪತಿ ಮತ್ತು ಎರಡು ಸದನಗಳನ್ನು ಒಳಗೊಂಡಿರುತ್ತದೆ. ರಾಷ್ಟ್ರೀಯ ಸಭೆ ಎಂಬ ಪದವನ್ನು ಅಲ್ಲಿ ಬಳಸಿದುದರ ಉದ್ದೇಶ ರಾಷ್ಟ್ರಪತಿಯವರನ್ನೂ ಹೊರತುಪಡಿಸಿ ಕೇವಲ ಸದನಗಳನ್ನು ಉಲ್ಲೇಖಿಸುವುದು. ಸಂಸತ್ತು ಮತ್ತು ಎರಡು ಸದನಗಳ ನಡುವೆ ರಾಷ್ಟ್ರೀಯ ಸಭೆ ಎಂಬ ಪದ ಸಮುಚ್ಚಯ ಅನಗತ್ಯ ಎಂದು ತೋರುತ್ತದೆ. ಆದುದರಿಂದ ರಾಷ್ಟ್ರೀಯ ಸಭೆಗೆ ಸಂಬಂಧಿಸಿದ ಎಲ್ಲ ಉಲ್ಲೇಖಗಳನ್ನೂ ಬಿಡುವುದು ಮತ್ತು ನಾನು ಸೂಚಿಸಿದಂತೆ ಖಂಡವನ್ನು ರಚಿಸುವುದು ಸರಿ ಎಂದು ಅಭಿಪ್ರಾಯಪಡಲಾಗಿತ್ತು. ಶ್ರೀ ಕೆ. ಸಂತಾನಮ್ ಅವರು ಈ ತಿದ್ದುಪಡಿಗೆ ಸೂಚನೆ ನೀಡಿದ್ದಾರೆನಿಸುತ್ತದೆ. ನಾನು ಅದನ್ನು ಅಂಗೀಕರಿಸಲು ಸಿದ್ಧನಿದ್ದೇನೆ ಎಂದು ತಿಳಿಸಲು ಇಷ್ಟಪಡುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** : ಮಾನ್ಯರೆ, ನನ್ನ ಪತ್ರದಲ್ಲಿ ನಮೂದಿಸಿರುವಂತೆ ತಿದ್ದುಪಡಿ ಹೀಗಿದೆ:

"೧೩ನೇ ಖಂಡದಲ್ಲಿ 'ಒಕ್ಕೂಟದ ಸಂಸತ್ತು' ಎಂಬ ಪದಗಳ ಅನಂತರ 'ಕಾಂಗ್ರೆಸ್ ಎಂದು ತಿಳಿಯಲ್ಪಡುವ' ಎಂಬ ಪದಗಳನ್ನು ಒಳಗೆ ಸೇರಿಸಬೇಕು."

ಮಾನ್ಯರೆ, ನನ್ನ ಉದ್ದೇಶವಿಷ್ಟೆ. ನಾವು ಗಳಿಸಿರುವುದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನೇತೃತ್ವದ ಸ್ವಾತಂತ್ರ್ಯ; ಮತ್ತು ಅದರ ಹೆಸರನ್ನು ಭವಿಷ್ಯದ ಸಂವಿಧಾನದಲ್ಲಿ ಶಾಶ್ವತಗೊಳಿಸಬೇಕೆಂಬುದು ನನ್ನ ಅಭಿಲಾಷೆ. ಸಂವಿಧಾನದಲ್ಲಿ ಬಳಸಲಾದ ವಿವಿಧ ಹೆಸರುಗಳನ್ನು ಪರಿಶೀಲನೆಗೆ ಬಿಡಬೇಕೆಂದು ಹಲವಾರು ಗೌರವಾನ್ವಿತ ಸದಸ್ಯರ ಆಶಯ, ಎಂದು ನನಗೆ ತಿಳಿದುಬಂದಿದೆ. ಇಂತಹ ಸನ್ನಿವೇಶಗಳಲ್ಲಿ ನಾನು ಅದನ್ನು ಈಗ ಮಂಡಿಸುವುದಿಲ್ಲ. ಆದರೆ ಕಾಂಗ್ರೆಸ್ ಎಂಬ ಪದವನ್ನು ಸಂವಿಧಾನದಲ್ಲೊಂದು ಕಡೆ ಅಳವಡಿಸಬೇಕೆಂದು ಆಶಿಸುತ್ತೇನೆ. ನಮ್ಮ ದೇಶದ ಇತಿಹಾಸದಲ್ಲಿ ಕಳೆದ ೬೫ವರುಷಗಳಿಂದ ನಮ್ಮ ಹೋರಾಟಕ್ಕೆ ನೇತೃತ್ವ ವಹಿಸಿದ

ಪಕ್ಷದ ಹೆಸರನ್ನು ಶಾಶ್ವತಗೊಳಿಸುವುದು ಉಚಿತ.

**ಶ್ರೀ ಮಹಮದ್ ತಾಹಿರ್** (ಬಿಹಾರ್ : ಮುಸ್ಲಿಮ್) : *[ಮಾನ್ಯರೆ ನಾನು ಸೂಚಿಸಿರುವ ತಿದ್ದುಪಡಿಯಲ್ಲಿ ಭಾಷೆಯ ಬಳಕೆಯ ಬಗ್ಗೆ ಸಾಕಷ್ಟು ಆಲೋಚಿಸಿಲ್ಲ. ನಾವು ನಿಯಮಗಳನ್ನು ಚರ್ಚಿಸಬೇಕಿರುವುದರಿಂದ ನನ್ನ ತಿದ್ದುಪಡಿ ಹೀಗಿರುತ್ತದೆ.

"೧೩ನೇ ಖಂಡದಲ್ಲಿ 'ಎರಡು ಸದನಗಳು ಮತ್ತು ರಾಜ್ಯ ಸಭೆ ಮತ್ತು' ಎಂಬ ಪದಗಳಿಗೆ ಬದಲಾಗಿ 'ಎಂದರೆ' ಎಂಬ ಪದವನ್ನು ಪ್ರತಿಯೋಜಿಸಬೇಕು."

ಈ ತಿದ್ದುಪಡಿಯನ್ನು ಸೂಚಿಸಲು ಇರುವ ನನ್ನ ಉದ್ದೇಶವೆಂದರೆ ಮೂಲ ನಿರ್ಣಯದಲ್ಲಿ ಎರಡು ಸಭೆಗಳನ್ನು ನಮೂದಿಸಲಾಗಿದೆ. ಎರಡು ಸದನಗಳಿರಬೇಕೆಂದು ತಿಳಿಸಲಾಗಿದೆ. ನಾನು ಒಂದೇ ಸದನವಿರಬೇಕೆಂದು ಇಚ್ಛಿಸುತ್ತೇನೆ. ಮಾನ್ಯರೆ, ನಮ್ಮ ಮುಂದೆ ಈಗ ಇರುವುದು ಒಂದು ನೂತನ ಭಾರತದ ಚಿತ್ರ, ಭಾರತದ ಮುಕುಟ. ಸ್ವತಂತ್ರ ಭಾರತಕ್ಕಾಗಿ ನಾವು ಹೊಸ ಸಂವಿಧಾನವೊಂದನ್ನು ರೂಪಿಸುವಾಗ ಅದರ ಬಗ್ಗೆ ಸದನದ ಮುಂದೆ ನನ್ನ ಅಭಿಪ್ರಾಯವನ್ನು ಮಂಡಿಸುವ ಮುನ್ನ ಆ ಗೀತೆಯನ್ನು ಪುನರುಚ್ಚರಿಸಲು ಬಯಸುತ್ತೇನೆ.

ಸಾರೇ ಜಹ್ಹಾ ಸೇ ಅಚ್ಛಾ ಹಿಂದೂಸ್ತಾನ್ ಹಮಾರಾ
ಹಮ್ ಬುಲ್ ಬುಲೇ ಹೈ ಉಸ್‌ಕೀ ವೊ ಗುಲ್‌ಸ್ತಾನ್ ಹಮಾರಾ

ಅನಂತರ ತಿದ್ದುಪಡಿಯ ಬಗ್ಗೆ ಬಹಳಷ್ಟು ಮಾತನಾಡುವೆ. ನಾವು ಭಾರತಕ್ಕೊಂದು ಸಂವಿಧಾನ ರಚಿಸುವಾಗ ಅದು ತಮಗಾಗಿ ರಚಿಸಿದ ತಮ್ಮದೇ ಆದ ಸಂವಿಧಾನವೆಂದು ದೇಶದ ಎಲ್ಲ ಜನರೂ ಭಾವಿಸುವಂತೆ ಮಾದರಿಯಾಗಬೇಕು. ಅದು ನಮ್ಮ ಕರ್ತವ್ಯ. ಸಂವಿಧಾನವನ್ನು ನೋಡುವಾಗ ಇಂಗ್ಲಿಷ್ ಆಡಳಿತಗಾರ ಭಾರತವನ್ನು ತೊರೆದು ಹೋದರೂ ಅವನ ಪ್ರೇತ ಇನ್ನೂ ಕಾಡುತ್ತಿದೆ ಎಂದು ಶ್ರೀ ಸಾಮಾನ್ಯ ಹೇಳುವಂತಿರಬಾರದು. ಆದರೆ ಈ ಸಂವಿಧಾನ ಆತನ ಪ್ರೇತವಿನ್ನೂ ನಮ್ಮನ್ನು ಕಾಡುತ್ತಿರುವುದನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತಿದೆ. ನನಗನಿಸುತ್ತೆ, ಈ ಸಂವಿಧಾನವನ್ನು ಮತ್ತೂ ಈ ಖಂಡವನ್ನು ಅವಲೋಕಿಸಿದರೆ ಇಂಗ್ಲಿಷ್ ಆಡಳಿತಗಾರ ಭಾರತ ಬಿಟ್ಟು ತೊಲಗುತ್ತಿದ್ದಾನೇನೋ ನಿಜ ಆದರೆ ಅವರ ಪ್ರೇತ ಇಲ್ಲಿ ನಡೆದಾಡುತ್ತಿದೆ. ಸ್ವಾತಂತ್ರ್ಯ ಗಳಿಸಿ ಹೊಸ ಹುಟ್ಟು ಪಡೆದ ರಾಷ್ಟ್ರವೊಂದರ ಸಂವಿಧಾನವನ್ನು ರಚಿಸುವ ಮುನ್ನ ನೆನಪಲ್ಲಿಡಬೇಕಾದ ಬಹಳ ಮುಖ್ಯ ವಿಷಯವೆಂದರೆ ಇದುವರೆಗೆ ಚಾಲ್ತಿಯಲ್ಲಿದ್ದ ಹಳೆಯ ಪದ್ಧತಿಗಳನ್ನು ಹಳೆಯ ಸಂವಿಧಾನಗಳನ್ನೂ ಬದಲಾಯಿಸಬೇಕು. ಆ ರಾಷ್ಟ್ರದ ಸಮಗ್ರ ಮನೋಭಾವವನ್ನು ಪರಿವರ್ತಿಸುವ ನಿಟ್ಟಿನಲ್ಲಿ ಬದಲಾಗಬೇಕು. ಮಾನ್ಯರೆ ಭಾರತದಲ್ಲಿ ಕಳೆದ ಹಲವಾರು ವರ್ಷಗಳಲ್ಲಿ ತಮ್ಮ ಆಡಳಿತಾವಧಿಯಲ್ಲಿ ಬ್ರಿಟಿಷರು ನಮ್ಮ ಮನೋಭೂಮಿಕೆಯನ್ನು ಪರಿವರ್ತಿಸಿ ಗುಲಾಮಗಿರಿಯನ್ನು ನೆಲೆಗೊಳಿಸಿದ ಪರಿ ತಾವು ಬಲ್ಲಿರಿ. ಆದುದರಿಂದ ನಾವು ಹೊಸ ಸಂವಿಧಾನವನ್ನು ರಚಿಸುವಾಗ, ಗುಲಾಮಗಿರಿಯಿಂದ ಸ್ವಾತಂತ್ರ್ಯದ ಕಡೆ ನಮ್ಮ ಮನಃಸ್ಥಿತಿ ಬದಲಾಗುವಂತೆ ರೂಪಿಸುವುದು ನಮ್ಮ ಕರ್ತವ್ಯ. ಬ್ರಿಟಿಷ್ ಗುಲಾಮಗಿರಿಯನ್ನು ನೆನಪಿಸುವ ಹಳೆಯ ಮನೋಭಾವದ ಮೂಲೋತ್ಪಾಟನವಾಗಬೇಕು. ಎಲ್ಲ ರಾಷ್ಟ್ರಗಳಲ್ಲೂ ಬಗೆಬಗೆಯ ಶಕ್ತಿಗಳು ಕಾರ್ಯೋನ್ಮುಖವಾಗಿವೆಯೆಂಬುದನ್ನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಕೆಲವು ರಾಷ್ಟ್ರಗಳಲ್ಲಿ ಸಮಾಜವಾದಿ ನೀತಿ ಸಫಲವಾಗಿದೆ. ಕೆಲವೆಡೆ ಕಮ್ಯುನಿಸಂ ಯಶಸ್ವಿಯಾಗಿದೆ. ಇನ್ನೂ ಕೆಲವೆಡೆ ಫ್ಯಾಸಿಸಂ ಕಂಡುಬರುತ್ತದೆ. ಮತ್ತೆ ಕೆಲವೆಡೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ನೀತಿಗಳು ಕಾರ್ಯರೂಪಕ್ಕೆ ಬಂದಿವೆ. ದುರದೃಷ್ಟವಶಾತ್ ಬ್ರಿಟಿಷರು ತಮ್ಮ ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಯಿಂದ ಭಾರತವನ್ನು ಇಂದಿನ ಸಂಕಷ್ಟದ ಸಂಕೋಲೆಯಲ್ಲಿ ಸಿಲುಕಿಸಿದ್ದಾರೆ. ನಾನು ತಿಳಿಸಲು ಇಚ್ಛಿಸುವುದೆಂದರೆ ೧೯೧೯ರಿಂದ ಇದುವರೆಗಿನ ಅಲ್ಪಾವಧಿಯ ಭಾರತೀಯ ಇತಿಹಾಸವನ್ನು ಸಂವಿಧಾನ ರಚನೆಗೆ ಮುನ್ನ ಅವಲೋಕಿಸುವುದು ಉಚಿತ. ಮಾನ್ಯರೆ ೧೯೧೯ರಿಂದ ೧೯೩೫ರವರೆಗೆ ಹಲವಾರು ಸಂವಿಧಾನಗಳು ರಚಿಸಲ್ಪಟ್ಟವು. ಆದರೆ ಅವೆಲ್ಲವೂ

ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೂಸುಗಳೆ. ೧೯೧೯ರಲ್ಲಿ ಸ್ಥಳೀಯ ಸ್ವಯಮಾಡಳಿತ ಸರ್ಕಾರ ಭಾರತದಲ್ಲಿ ಚಾಲ್ತಿಗೆ ಬಂದಿತು. ಮಂಡಲಿಗಳ ರಚನೆಯಾಯಿತು. ಕೇಂದ್ರಕ್ಕಾಗಿಯೂ ಒಂದು ಮಂಡಲಿ ರಚಿಸಲ್ಪಟ್ಟಿತು. ಅದು ಹೆಸರಿಗೆ ಮಾತ್ರ ಸ್ವಯಮಾಡಳಿತ ಸರ್ಕಾರ. ಆದರೆ ಮಾನ್ಯರೆ ಅದನ್ನು ಕುರಿತು ತಾವು ತುಸು ಆಲೋಚಿಸಿದರೆ ಅದರ ಬೆನ್ನಹಿಂದೆ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಧೋರಣೆ ನೆರಳಾಡುತ್ತಿದ್ದುವು. ಅವು ಸಂಪೂರ್ಣ ಮೆರೆದಿದ್ದವು. ಆದುದರಿಂದ ಸ್ಥಳೀಯ ಮಂಡಲಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ. ಕಾರಣವೇನೆಂದರೆ ಅವುಗಳ ಕಾರ್ಯವೈಖರಿಯಲ್ಲಿ ಸಾಮ್ರಾಜ್ಯಶಾಹಿಯ ಲೇಪವಿತ್ತು. ಶ್ರೀಸಾಮಾನ್ಯರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಸ್ಥಳೀಯ ಮಂಡಲಿಗಳಿಗೆ ಕಳುಹಿಸುತ್ತಿದ್ದರು. ಆದರೆ ಅಲ್ಲಿ ನಾಮನಿರ್ದೇಶಿತ ಸದಸ್ಯರ ಹಾಜರಿಯಿಂದ ಅವರ ಅಸ್ತಿತ್ವ ದುರ್ಬಲಗೊಂಡಿತ್ತು. ಈ ಪದ್ಧತಿ ಈಗಲೂ ಮುಂದುವರಿಯುತ್ತಿದೆ. ಮಂಡಲಿಗಳ ಪರಿಸ್ಥಿತಿಯೂ ಹೀಗೇ ಇತ್ತು ಚುನಾಯಿತ ಸದಸ್ಯರ ಪ್ರಭಾವ, ನಾಮ ನಿರ್ದೇಶಿತ ಸದಸ್ಯರಿಂದ ದುರ್ಬಲಗೊಂಡಿತು. ರಾಷ್ಟ್ರದ ಸ್ಥಿತಿಗತಿಗಳು ಉತ್ತಮಗೊಳ್ಳಲು ಚುನಾಯಿತ ಸದಸ್ಯರು ಯಾವುದೇ ಕಾರ್ಯಕ್ರಮವನ್ನು ಮಂಡಿಸಿದರೂ ನಾಮ ನಿರ್ದೇಶಿತ ಸದಸ್ಯರು ಅದನ್ನು ವಿರೋಧಿಸುತ್ತಿದ್ದರು. ೧೯೧೯ರ ಅಧಿನಿಯಮದ ಅಡಿಯಲ್ಲಿ ವ್ಯವಹಾರಗಳ ಸ್ಥಿತಿ ಹಾಗಿತ್ತು.

ದೇವರ ಕೃಪೆ, ಭಾರತದಲ್ಲಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಆಡಳಿತ ನಡೆಯುತ್ತಿರುವಾಗ ಮಹಾತ್ಮ ಗಾಂಧಿಯವರ ಮುಂದಾಳತ್ವದ ಪಕ್ಷವೊಂದು ಬಡಭಾರತೀಯರ ಭಾವನೆಗಳಿಗೆ ದನಿಗೊಡಲು ಮುಂದೆ ಬಂದಿತು. ಆ ದನಿ ಮುಗಿಲುಮುಟ್ಟಿ ಇಂದು ಭಾರತ ಸ್ವಾತಂತ್ರ್ಯದ ಹೊಸ್ತಿಲ ಮೇಲೆ ಪದಾರ್ಪಣ ಮಾಡಿದೆ. ಆದುದರಿಂದ ನಾವು ಭಾರತಕ್ಕೆಂದೇ ಒಂದು ಸಂವಿಧಾನವನ್ನು ರಚಿಸುವುದು ಉಚಿತ. ಈಗ ಭಾರತದಲ್ಲಿ ನಿಮ್ಮ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಯ ಘಾಟು ಹೊಡೆಯುತ್ತಿದೆ ಅಥವಾ ಅದನ್ನು ಬೆಳೆಯಗೊಡುತ್ತಿದೆಯೇ? ತುಸು ಹೋರಾಟ ಮತ್ತು ವಾದವಿವಾದದ ಫಲವಾಗಿ ೧೯೩೫ರ ಅಧಿನಿಯಮ ಅಧಿನಿಯಮಿತಗೊಂಡಿತು. ಭಾರತದಲ್ಲಿ ಮಹತ್ತರ ರಾಜಕೀಯ ಪ್ರಜ್ಞೆ ಬೇರು ಬಿಡುತ್ತಿರುವುದನ್ನು ಕಂಡು ಹಾಗೂ ಭಾರತ ಅದರ ಬೇಡಿಕೆಗಳನ್ನು ಅಹೋರಾತ್ರಿ ಒತ್ತಾಯಿಸುತ್ತಿದ್ದುದನ್ನು ಕಂಡು ಬ್ರಿಟಿಷ್ ಸರ್ಕಾರ ೧೯೩೫ರ ಅಧಿನಿಯಮವನ್ನು ಬದಲಾಯಿಸಿತು. ಪ್ರಾಂತ್ಯಗಳಲ್ಲಿ ವಿಧಾನ ಸಭೆಗಳ ಸ್ಥಾಪನೆಯಾಯಿತು. ಅಲ್ಲಿ ಸರ್ಕಾರಿ ಆಡಳಿತ ವ್ಯವಹಾರಗಳನ್ನು ಕೇವಲ ಚುನಾಯಿತ ಪ್ರತಿನಿಧಿಗಳು ನಿರ್ವಹಿಸುತ್ತಿದ್ದರು. ಆದರೆ ಅವುಗಳೊಡನೆ ಮೇಲ್ಮನೆಗಳು, ಮತ್ತು ರಾಜ್ಯಮಂಡಲಿ ಲಗತ್ತಿಸಿರುವಾಗ ಆ ಪ್ರಾಂತೀಯ ಸಭೆಗಳಿಂದಾಗುವ ಪ್ರಯೋಜನವಾದರೂ ಏನು? ಅದು ಸಾಮ್ರಾಜ್ಯಶಾಹಿ ಬುದ್ಧಿಯ ಸೃಷ್ಟಿ. ಹೀಗಾಗಿ ಪ್ರಾಂತೀಯ ಸಭೆಗಳ ಪ್ರಜಾಪ್ರಭುತ್ವ ವಾತಾವರಣ ಫಲಗೊಡಲಿಲ್ಲ. ಏಕೆಂದರೆ ಭಾರತದಲ್ಲಿ ಸಾಮ್ರಾಜ್ಯಶಾಹಿ ದೃಷ್ಟಿಕೋನವನ್ನು ಜೀವಂತ ಇಟ್ಟರೆ ಬೇರೆ ಯಾವುದೇ ಉತ್ತಮ ತಂತ್ರವನ್ನು ರೂಪಿಸಲಾಗದೆಂಬುದನ್ನು ಬ್ರಿಟಿಷ್ ದೊರೆ ಮನಗಂಡಿದ್ದ. ಆದುದರಿಂದ ನಾಮನಿರ್ದೇಶನ, ಮೇಲ್ಮನೆ ಮತ್ತು ಇತರ ಸಮಾನ ಸಾಧನಗಳು ಇವೆಲ್ಲ ಸಾಮ್ರಾಜ್ಯಶಾಹಿಯ ಕಲ್ಪನೆ ಎಂಬುದನ್ನು ನಾನು ತಿಳಿಸಲು ಬಯಸುತ್ತೇನೆ. ಆದುದರಿಂದ ಸ್ವತಂತ್ರ ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿ ನಾವು ಈ ಅಂಶಗಳನ್ನು ನೆನಪಿನಲ್ಲಿಡಬೇಕು. ಈಗ ನಾವು ರಚಿಸುವ ಸಂವಿಧಾನ ಹೇಗಿರಬೇಕೆಂದರೆ ಅದು ಜನರಿಂದ ಅಂಗೀಕರಿಸಲ್ಪಡುವುದೆಂಬ ಖಾತರಿ ನಮಗಿರಬೇಕು. ಅವರು ಮನಃಪೂರ್ವಕವಾಗಿ ಅದಕ್ಕೆ ಬದ್ಧರಾಗಿರುತ್ತಾರೆ. ಈ ಖಂಡದ ಮಂಡನೆಕಾರರಿಗೆ ನಾನು ಕೆಲವೊಂದು ಸರಳ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಎರಡು ಸದನಗಳಿಲ್ಲದೆ ಭಾರತದ ಅಥವಾ ಬೇರಾವುದೇ ರಾಷ್ಟ್ರದ ಏಳಿಗೆಗೆ ಬಾಧೆಯುಂಟೆ? ಅಥವಾ ಯಾವುದೇ ಒಳ್ಳೆಯ ಕಾನೂನುಗಳನ್ನು ಅಧಿನಿಯಮಿತಗೊಳಿಸಲಾಗದೆಂದೆ? ಭಾರತದಲ್ಲಿ ಈ ಸಭೆಗಿಂತ ಉತ್ತಮವಾದ ಮತ್ತು ಹೆಚ್ಚು ಜವಾಬ್ದಾರಿಯುತವಾದ ಸಭೆ ಆಯೋಜಿಸಲ್ಪಟ್ಟಿತ್ತೆ ಎಂದು ಕೇಳಬಹುದೆ? ಇದಕ್ಕಿಂತ ಉತ್ತಮವಾದ ಮತ್ತು ಹೆಚ್ಚು ಜವಾಬ್ದಾರಿಯುತವಾದ ಸಭೆ ಈ ಹಿಂದೆ

ಸವಾವೇಶಗೊಂಡಿರಲಿಲ್ಲ ಎಂದು ಹೇಳಬಹುದು, ಒಂದು ಸದನ ಎಲ್ಲ ಕಾರ್ಯಗಳನ್ನೂ ಸುಗಮಗೊಳಿಸುತ್ತಿಲ್ಲವೆ? ಹಾಗೂ ಸಂವಿಧಾನವನ್ನು ರಚಿಸುತ್ತಿಲ್ಲವೆ? ಇನ್ನು ಕೆಲವು ವಾರಗಳ ಅನಂತರ ಈ ಸಭೆಯೇ ಸಂಯುಕ್ತ ಸಂಸತ್ತಾಗಿ ಕಾರ್ಯನಿರ್ವಹಿಸಲಿದೆ. ಅಲ್ಲಿ ಕಾನೂನುಗಳು ಅಧಿನಿಯಮಿತಗೊಳ್ಳಲಿವೆ. ಎರಡು ಸದನಗಳ ನಿಯಮ ಅಂಗೀಕೃತವಾದರೆ ಆಗ ಪ್ರಾಯಃ ಎರಡು ಸದನಗಳನ್ನು ಒಳಗೊಳ್ಳುವ ಉದ್ದೇಶಕ್ಕಾಗಿ ಸಂವಿಧಾನ ಸಭೆ ವಿಸರ್ಜನೆಯಾಗಬೇಕು. ಎರಡು ಸದನಗಳ ಸಭೆಯನ್ನು ಪುನಾರೂಪಿಸಬೇಕಾಗುತ್ತದೆ. ಗೌರವಾನ್ವಿತ ಸದಸ್ಯರು ಸಂವಿಧಾನ ಸಭೆಯನ್ನು ಎರಡು ಸದನಗಳನ್ನಾಗಿ ವಿಭಜಿಸಲು ಸಾಧ್ಯವಿಲ್ಲದಾಗ ಮುಂದೆ ಸಮಿಶ್ರ ಸಂಸತ್ತಿನಲ್ಲೂ ಎರಡು ಸದನಗಳನ್ನು ಹೊಂದಲಾಗದು. ಅದರ ಅರ್ಥ ಸ್ವತಃ ಅವರಿಗೇ ಶಾಸನ ಸಭೆಯಲ್ಲಿ ಎರಡು ಸದನಗಳಿರಬೇಕೆಂಬ ನಿಯಮದಲ್ಲಿ ನಂಬಿಕೆ ಇಲ್ಲವೆಂದಾಗುತ್ತದೆ. ಆದರೆ ಅವರ ಮೇಲಣ ಯಾವುದೋ ಒತ್ತಡದಿಂದ ಈ ಪ್ರಸ್ತಾವವನ್ನು ಮುಂದಿಡುತ್ತಿದ್ದಾರೆ. ಅವರು ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರಭಾವಕ್ಕೆ ಮಣಿದಿರಬೇಕು. ರಾಜ್ಯ ಮಂಡಳಿಗೆ ನಾಮ ನಿರ್ದೇಶನಗಳು ಹಾಗೂ ಮೇಲ್ಮನೆ ಇವು ಸಾಮ್ರಾಜ್ಯಶಾಹಿ ಧೋರಣೆಯಿಂದ ಹುಟ್ಟಿದವು ಎಂಬುದನ್ನು ನಾನು ಅವರಿಗೆ ತಿಳಿಸಲು ಬಯಸುತ್ತೇನೆ. ಭಾರತದ ಬಡಜನತೆ ಮತ್ತದೇ ಹಳೆಯ ವಿಧಾನಕ್ಕೆ ಸಿಕ್ಕು ನಲುಗಬೇಕೆಂದೇ ಅದರ ಅರ್ಥ? ಆ ರೀತಿಯ ವಿಭಜನೆಗೆ ಹೆಚ್ಚು ವೆಚ್ಚ ತಗುಲಿದರೂ ಆಡಳಿತದ ಕೆಲಸದಲ್ಲಿ ದಕ್ಷತೆಯೇನೂ ಕಾಣದು. ಬ್ರಿಟಿಷರು ಭಾರತ ಬಿಟ್ಟು ತೊಲಗಿದರೂ ಅವರದೆ ನೀತಿಯನ್ನು ನಮ್ಮ ಸರ್ಕಾರವೂ ಅನುಸರಿಸುತ್ತಿದೆ ಎಂದು ಬೆಟ್ಟುಮಾಡಿ ತೋರುವ ಎದೆಗಾರಿಕೆ ಅವರಿಗಿರಬಾರದು. ಮೇಲ್ಮನೆ ನಾಮನಿರ್ದೇಶನ ರಾಜ್ಯಮಂಡಲಿಗಳು ಮುಂತಾದ ವಿಧಾನಗಳಿಂದ ಅವರ ಕಾರ್ಯವೈಖರಿಯೇ ಮುಂದುವರಿಯುತ್ತದೆ. ಈ ಮಾತುಗಳನ್ನು ಹೇಳಿ ನಾನು ವಿರಮಿಸುತ್ತೇನೆ. ನನ್ನ ಮಾತುಗಳಿಂದ ಯಾರಿಗಾದರೂ ನೋವಾಗಿದ್ದರೆ ನಾನು ಅವರ ಕ್ಷಮೆ ಕೋರುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** ಶ್ರೀ ಬಿ.ಎಲ್. ಮಿಟ್ಟರ್.

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ) : ನಾನೊಂದು ಕ್ರಿಯಾಲೋಪವೆತ್ತಲು ಬಯಸುತ್ತೇನೆ. ೩೨ನೇ ನಿಯಮದ ೧ನೇ ಖಂಡದ ಅಡಿಯಲ್ಲಿ ಪ್ರಸ್ತಾವಕ್ಕೆ ಪ್ರಸ್ತುತವಾಗುವಂತೆ ತಿದ್ದುಪಡಿಯನ್ನು ಮಂಡಿಸಬೇಕು. ಈಗಿನ ಪ್ರಸ್ತಾವದಲ್ಲಿ ಕೆಳಮನೆ ಎಂಬ ಪದ ಇಲ್ಲ. ತಿದ್ದುಪಡಿಯು ಕೆಳಮನೆಗೆ ವ್ಯಾಖ್ಯೆ ನೀಡಲು ಉದ್ದೇಶಿಸಿದೆ. ಆದುದರಿಂದ ಈ ತಿದ್ದುಪಡಿ ಅಸಮಂಜಸ.

**ಸರ್ ವಿ.ಟಿ. ಕೃಷ್ಣಮಾಚಾರಿ** (ಜೈಪುರ್ ರಾಜ್ಯ) : ತಿದ್ದುಪಡಿಯ ಮಂಡನೆಯಾಗದೆಂದು ನಾನು ಹೇಳಲು ಹೊರಟಿದ್ದೆ.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ, ಕ್ರಿಯಾಲೋಪದ ಪ್ರಶ್ನೆ ಏಳುವುದಿಲ್ಲ.

(ಶ್ರೀ ಮೋಹನ್ ಲಾಲ್ ಸಕ್ಸೇನಾ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಶ್ರೀ ಕೆ. ಸಂತಾನಮ್** (ಮದ್ರಾಸು : ಸಾಮಾನ್ಯ) : ಮಾನ್ಯರೆ ನಾನು ಮಂಡಿಸುತ್ತೇನೆ:

"೧೩ನೇ ಖಂಡದಲ್ಲಿ ಒಳಗೊಂಡಿರುವ ರಾಷ್ಟ್ರೀಯ ಸಭೆ ಎಂಬ ಪದಗಳನ್ನು ಬಿಡಬೇಕು"

ಈ ಪದಗಳನ್ನು ಏಕೆ ಬಿಡಬೇಕೆಂದು ಈಗಾಗಲೇ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ವಿವರಿಸಿದ್ದಾರೆ. ಎಲ್ಲ ಉತ್ತಮ ಪದಗಳನ್ನೂ ಬಳಸಬೇಕೆಂಬ ಒಕ್ಕೂಟದ ಅಧಿಕಾರ ಸಮಿತಿಯ ಅಭಿಲಾಷೆಯ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿ ಇದೆ. ರಾಷ್ಟ್ರೀಯ ಸಭೆ ಎಂಬುದು ನಿಜಕ್ಕೂ ಅತ್ಯಾಕರ್ಷಕ ಪದ ಸಮುಚ್ಚಯ. ಆದರೆ ನಾವು ಸಂಸತ್ತು ಎಂಬ ಪದವನ್ನೂ ಇಟ್ಟುಕೊಳ್ಳಬೇಕು. ಈ ಎರಡೂ ಪದಸಮುಚ್ಚಯಗಳನ್ನು ಬಳಸಲು ಅವರು ಒಂದು ಚತುರ ಸೂತ್ರವೊಂದನ್ನು ರೂಪಿಸಿದ್ದಾರೆ. ರಾಷ್ಟ್ರೀಯ ಸಭೆ ಎಂದರೆ ಎರಡೂ ಸದನಗಳ ಸಂಕಲನ. ಸಂಸತ್ತು ಎಂದರೆ ಎರಡು ಸದನಗಳ ಜೊತೆಗೆ

ರಾಷ್ಟ್ರಪತಿಗಳು. ಅದೆಷ್ಟೇ ಚತುರ ಸೂತ್ರವಾದರೂ ಕಾರ್ಯಸಾಧ್ಯವಾಗದ ಅನನುಕೂಲಕರ ಸೂತ್ರ ಹಾಗೂ ಅದನ್ನು ಹಿಂದೂಸ್ತಾನಿ ಭಾಷೆಗೆ ತರ್ಜುಮೆ ಮಾಡುವಾಗ ಮತ್ತೂ ಕೆಟ್ಟದ್ದಾಗಿ ಪರಿಣಮಿಸುತ್ತದೆ. ಸಂಸತ್ತು ಎಂಬ ಪದಕ್ಕೂ ಸಹ, ಪಾರಿಭಾಷಿಕ ಶಬ್ದ ಹುಡುಕುವುದು ಅಷ್ಟೆ ದುಸ್ತರ. ಜೊತೆಗೆ ರಾಷ್ಟ್ರೀಯ ಸಭೆ ಎಂಬ ಪದಕ್ಕೆ ಪಾರಿಭಾಷಿಕ ಪದ ಹುಡುಕಬೇಕು. ಇದೊಂದು ನಿಷ್ಪ್ರಯೋಜಕ ಕಸರತ್ತು. ಆದುದರಿಂದ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇನ್ನಾವುದೂ ತಿದ್ದುಪಡಿ ಇಲ್ಲ ಈಗ ಖಂಡ ಮತ್ತು ತಿದ್ದುಪಡಿಗಳು ಚರ್ಚೆಗೆ ಮುಕ್ತ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ ಈ ಪ್ರಸ್ತಾವದಲ್ಲಿ ಎರಡು ಸದನಗಳ ಅಂಗೀಕಾರಕ್ಕೆ ನಮ್ಮಿಂದ ಮತ ಕೋರಲಾಗಿದೆ. ಕೆಳಮನೆ ಮತ್ತು ಮೇಲ್ಮನೆ. ಕಳೆದ ಹಲವಾರು ವರುಷಗಳಿಂದ ಮೇಲ್ಮನೆ ಪ್ರಗತಿ ಚಕ್ರಕ್ಕೊಂದು ಗೊದಮದಂತೆ (ತೊಡರು) ಅಡ್ಡಿಯುಂಟುಮಾಡುತ್ತಿರುವುದು ನಮ್ಮ ಅನುಭವಕ್ಕೆ ಬಂದಿದೆ. ಮತ್ತೆ ಹೊಸ ಸಂವಿಧಾನದಲ್ಲಿ ಅದನ್ನೆ ಮುಂದುವರಿಸುವುದು ಬುದ್ಧಿವಂತಿಕೆ ಎಂದೆನಿಸುವುದಿಲ್ಲ. ಜಗತ್ತಿನ ಎಲ್ಲೆಡೆ ಮೇಲ್ಮನೆಯ ಬಗ್ಗೆ ಇದೇ ಅನುಭವ. ಯಾವುದೇ ರಾಷ್ಟ್ರದಲ್ಲೂ ಮೇಲ್ಮನೆ ಪ್ರಗತಿಗೆ ಸಾಧಕವಾಗಿಲ್ಲ. ತ್ವರಿತ ಪ್ರಗತಿಗೆ ಅದು ಯಾವಾಗಲೂ ಬಾಧಕವಾಗಿದೆ. ಆದುದರಿಂದ ಈಗ ನಾವು ಜಾಗೃತರಾಗದಿದ್ದರೆ, ನಮಗೆ ಅಗತ್ಯವಿರುವ ತ್ವರಿತ ಪ್ರಗತಿಯನ್ನು ನಾವು ಸಾಧಿಸಲಾರೆವು. ಪ್ರಾಯಃ ಭಾರತ, ಜಗತ್ತಿನಲ್ಲೆ ಅತಿ ದೊಡ್ಡ ರಾಷ್ಟ್ರ. ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ನಮ್ಮ ಯೋಗ್ಯ ಸ್ಥಾನವನ್ನು ನಾವು ಪಡೆಯಬೇಕಿದ್ದರೆ, ರಷ್ಯಾ ಮತ್ತು ಅಮೆರಿಕ ದೇಶಗಳಿಗೆ ಸರಿಸಮನಾಗಿ ಬೆಳೆಯಬೇಕು. ಮಾಮೂಲಿನಂತೆ ಐವತ್ತು ವರುಷಗಳಲ್ಲಿ ನಾವು ಸಾಧಿಸಬೇಕಾಗುವ ಪ್ರಗತಿಯನ್ನು ಮುಂದಿನ ಐದು ಹತ್ತು ವರುಷಗಳಲ್ಲಿ ಸಾಧಿಸಬೇಕು. ಅಗತ್ಯ ವೇಗದಲ್ಲಿ ನಮ್ಮ ಹೊಸ ಕಾರ್ಯಕ್ರಮದ ಸಾಕ್ಷಾತ್ಕಾರಕ್ಕೆ ಎರಡು ಸದನಗಳು ಸಾಧಕವಾಗುವುವು ಎಂದು ನನಗನಿಸುವುದಿಲ್ಲ. ಆದುದರಿಂದ ಪ್ರಸ್ತಾವಕರು ದಯಮಾಡಿ ಪ್ರಸ್ತಾವವನ್ನು ಪುನರವಲೋಕಿಸಿ ನಮ್ಮ ಹೊಸ ಸಂವಿಧಾನದಲ್ಲಿ ಎರಡು ಸದನಗಳಿರದಂತೆ ನೋಡಿಕೊಳ್ಳುವುದು ಸೂಕ್ತವೆಂದು ಭಾವಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಈ ಖಂಡವನ್ನು ಯಥಾ ರೀತಿ ಬೆಂಬಲಿಸಲು ಅನುಮತಿ ಕೋರುತ್ತೇನೆ. ಹಾಗಾಗಿ ಎರಡನೆಯ ಸದನವನ್ನು ಬಿಡಬೇಕೆಂಬ ಪ್ರಸ್ತಾವವನ್ನು ವಿರೋಧಿಸುತ್ತೇನೆ. ನಾವು ಪರಮೋಚ್ಚ ಸರ್ವತಂತ್ರ ಸ್ವತಂತ್ರ ಅಧಿಕಾರವನ್ನು ಪಡೆಯಲಿದ್ದೇವೆ. ಅತಿ ಪ್ರಮುಖವಾದ ವಿದೇಶಿ ಮತ್ತು ಆಂತರಿಕ ವಿಷಯಗಳನ್ನು ನಾವು ನಿರ್ವಹಿಸಬೇಕಿದೆ. ಈ ಸನ್ನಿವೇಶಗಳಲ್ಲಿ ಎರಡು ಸದನಗಳನ್ನು ಹೊಂದುವುದು, ವಿವೇಕಯುತ ಕ್ರಮ. ಅಂತಹ ಸದನ, ಅದರ ಸತ್ತ್ವದಿಂದ ಶಕ್ತಿಯಿಂದ, ಗಣನೀಯವೆನಿಸುತ್ತದೆ. ಹಣಕಾಸು ವಿಷಯದಲ್ಲಿ ಆ ಸದನಕ್ಕೆ ಪ್ರತ್ಯೇಕ ಮಾನ್ಯತೆ ಇತ್ತು. ಆದರೆ ಎರಡನೆಯ ಸದನ ಆ ತೀವ್ರತೆಯನ್ನು ಕುಗ್ಗಿಸಿ, ಪಶ್ಚಾತ್ ಆಲೋಚನೆಗೆ ದಾರಿ ಮಾಡಿಕೊಡುತ್ತದೆ. ಇಂತಹ ಸನ್ನಿವೇಶಗಳಲ್ಲಿ ಕೆಲವು ವಿದೇಶಿ ವ್ಯವಹಾರಗಳು ನಮ್ಮ ಮಿದುಳೊಳಗೆ ಗುಂಯ್ ಗುಟ್ಟುತ್ತಿರುವಾಗ ಎರಡನೇ ಸದನವನ್ನು ಹೊಂದುವುದು ಅನನುಕೂಲಕರವೆಂದು ಆಲೋಚಿಸುವುದು ತಪ್ಪು. ಮಾನ್ಯರೆ ನನ್ನ ನಿವೇದನೆ ಇಷ್ಟೆ. ಎರಡನೇ ಸದನ ಪ್ರಯೋಜನಕಾರಿ ಮಾತ್ರವಲ್ಲ. ಸಂಪೂರ್ಣವಾಗಿ ಆವಶ್ಯಕವೂ ಹೌದು.

ಮತ್ತೆ ಒಕ್ಕೂಟದಲ್ಲಿ ರಾಜ್ಯಗಳ ಪ್ರವೇಶವನ್ನೂ ನಾವು ಪರಿಭಾವಿಸಬೇಕಿದೆ. ಇದನ್ನು ನಾವು ನೆನಪಿನಲ್ಲಿಟ್ಟುಕೊಂಡರೆ ಸಾಕು ಎರಡನೇ ಸದನ ಸಂಪೂರ್ಣ ಆವಶ್ಯಕ ಎಂದೆನಿಸಿತು. ಕಾರ್ಯಕ್ರಮಗಳ ವ್ಯವಸ್ಥೆಯಲ್ಲಿ ಎರಡನೇ ಸದನವಿಲ್ಲದೆ ರಾಜ್ಯಗಳ ಪ್ರತಿನಿಧಿಗಳಿಗೆ ಸೂಕ್ತ ಸ್ಥಾನ ಕಲ್ಪಿಸುವುದು ಕಷ್ಟಸಾಧ್ಯ.

ಈ ಕೆಲವು ಮಾತುಗಳಿಂದ ರಾಜ್ಯಸಭೆ ಎಂದರೆ ಎರಡನೇ ಸದನವನ್ನು ಬಿಡುವ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಪ್ರಾಯಃ ಬೇರಾರೂ ಮಾತನಾಡಲು ಬಯಸುವುದಿಲ್ಲ. ಹಾಗಿದ್ದರೆ ಪ್ರಸ್ತಾವಕರು ಇಷ್ಟಪಟ್ಟರೆ ಉತ್ತರಿಸಬಹುದು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಈ ಖಂಡಕ್ಕೆ ವಿಸ್ತೃತ ಸಮರ್ಥನೆ ಅಗತ್ಯವೆಂದು ನನಗನಿಸುವುದಿಲ್ಲ. ಒಕ್ಕೂಟ ಶಾಸನಸಭೆಯಲ್ಲಿ ಎರಡು ಸದನಗಳಿರಬೇಕೆಂದು ಈ ಖಂಡ ತಿಳಿಸುತ್ತದೆ. ಜಗತ್ತಿನಾದ್ಯಂತ ಪ್ರಾಮುಖ್ಯ ಪಡೆದಿರುವ ಒಕ್ಕೂಟಗಳು ಎಲ್ಲೆಲ್ಲಿವೆಯೋ ಅಲ್ಲಿ ಎರಡನೇ ಸದನದ ಅಗತ್ಯ ಅನುಭವ ವೇದ್ಯ. ಇಷ್ಟಕ್ಕೂ ಅದು ಪ್ರಯೋಜನಕಾರಿ ಪ್ರಕಾರ್ಯವನ್ನು ನೆರವೇರಿಸುತ್ತದೆಯೇ ಎಂಬ ಪ್ರಶ್ನೆ ನಮ್ಮ ಪರಿಶೀಲನೆಯಲ್ಲಿದೆ. ನಾವು ಎರಡನೇ ಸದನದಿಂದ ನಿರೀಕ್ಷಿಸುವುದು ಹೆಚ್ಚೆಂದರೆ ಪ್ರಮುಖ ವಿಷಯಗಳ ಬಗ್ಗೆ ಸಭ್ಯತಾಪೂರ್ಣ ಚರ್ಚೆಯ ಆಯೋಜನೆ. ಭಾವೋದ್ರೇಕದಿಂದ ಹೊರಹೊಮ್ಮಿದ ಶಾಸನಗಳ ಜಾರಿಯನ್ನು ತಾತ್ಕಾಲಿಕವಾಗಿ ವಿಳಂಬಗೊಳಿಸುವುದು; ಭಾವೋನ್ಮಾದ ತಹಬಂದಿಗೆ ಬಂದಾಗ, ವಾತಾವರಣ ತಿಳಿಗೊಂಡ ಅನಂತರ ಶಾಸನಸಭೆಯ ಮುಂದಿರುವ ಕ್ರಮಗಳನ್ನು ಪರಿಶೀಲಿಸಬಹುದು. ಮುಖ್ಯ ವಿಷಯಗಳ ಬಗ್ಗೆ ಅದರಲ್ಲೂ ಹಣಕಾಸು ವಿಷಯದಲ್ಲಿ ಲೋಕಸಭೆಗೂ ರಾಜ್ಯಸಭೆಗೂ ನಡುವೆ ತಾಕಲಾಟ ಬಂದಾಗ ಲೋಕಸಭೆಯ ಅಭಿಪ್ರಾಯ ಮೇಲುಗೈ ಸಾಧಿಸುವಂತೆ ಎಚ್ಚರಿಕೆ ವಹಿಸಲಾಗುವುದು. ಇದಕ್ಕೆ ಸಂವಿಧಾನದಲ್ಲಿ ಅವಕಾಶವಿರುತ್ತದೆ. ಆದುದರಿಂದ ಎರಡನೇ ಸದನದ ಅಸ್ತಿತ್ವದಿಂದ ನಾವು ನಿಜಕ್ಕೂ ಸಾಧಿಸುವುದೇನೆಂದರೆ ದುಡುಕಿ ಆಲೋಚಿಸುವ ಕ್ರಮ ಜಾರಿಗೊಳ್ಳುವಲ್ಲಿ ವಿಳಂಬ ತರುವ ಒಂದು ಸಾಧನವಾಗಿ ಇದು ಕಾರ್ಯನಿರ್ವಹಿಸುವುದಷ್ಟೆ. ರಾಜಕೀಯದಲ್ಲಿ ಇರದೆಯೂ, ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅರಿವು ಹಂಚಿಕೊಳ್ಳಬಹುದಾದ ಮತ್ತು ಲೋಕಸಭೆಯಲ್ಲಿ ಇಲ್ಲದಿರಬಹುದಾದ ಅನುಭವವನ್ನು ಪಡೆಯಲು ಆಸಕ್ತರಾದವರಿಗೆ ಒಂದು ಅವಕಾಶ ಒದಗಿಸಬಹುದು. ಎರಡನೇ ಸದನದ ಬಗ್ಗೆ ಪ್ರಸ್ತಾವಿಸಿರುವುದು ಇದಿಷ್ಟೆ. ಒಟ್ಟಾರೆ ನನಗನಿಸುವಂತೆ ಇಂತಹ ಸದನದತ್ತ ಪರಿಶೀಲನೆಯ ತಕ್ಕಡಿ ತೂಗುತ್ತದೆ ಮತ್ತು ಅದು ಶಾಸನಕ್ಕಾಗಲಿ ಆಡಳಿತಕ್ಕಾಗಲಿ ತಡೆಯೊಡ್ಡಲಾರದು.

ಸದನದ ನಿರ್ಧಾರಕ್ಕೆ ಬಿಡುವುದಲ್ಲದೆ, ಇದಕ್ಕೆ ಹೆಚ್ಚಿನ ಶಿಫಾರಸೇನೂ ನನ್ನಿಂದ ಅಗತ್ಯವಿಲ್ಲ. ಖಂಡಕ್ಕೊಂದು ಕಿರು ತಿದ್ದುಪಡಿ ಸೂಚಿಸಲಾಗಿದೆಯಷ್ಟೆ.

**ಮಾನ್ಯ ಸಭಾಧ್ಯಕ್ಷರು :** ಮೊದಲಿಗೆ ಶ್ರೀ ಮೊಹಮ್ಮದ್ ತಾಹಿರ್ ಅವರ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

"೧೩ನೇ ಖಂಡದಲ್ಲಿ ಒಳಗೊಂಡ ಎರಡು ಸದನಗಳು 'ರಾಜ್ಯಸಭೆ ಮತ್ತು' ಎಂಬ ಪದಗಳಿಗೆ ಬದಲಾಗಿ 'ಎಂದರೆ' ಎಂಬ ಪದವನ್ನು ಪ್ರತಿಯೋಜಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಅನಂತರ ನಾನು ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

"೧೩ನೇ ಖಂಡದಲ್ಲಿ 'ಒಳಗೊಂಡಂತೆ ರಾಷ್ಟ್ರೀಯ ಸಭೆ' ಎಂಬ ಪದಗಳನ್ನು ಬಿಡಬೇಕು.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನೀಗ ತಿದ್ದುಪಡಿಯಾದ ಇಡೀ ಖಂಡವನ್ನು ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾದ ೧೩ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೧೪

**ಮಾನ್ಯ ಸಭಾಧ್ಯಕ್ಷರು :** ಈಗ ನಾವು ೧೪ನೇ ಖಂಡಕ್ಕೆ ಹೋಗೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ ನಿಮ್ಮ ಅನುಮತಿ ಹಾಗೂ ಸದನದ ಅನುಮತಿ ಪಡೆದು, ಕೇವಲ ೧೪ನೇ ಖಂಡವನ್ನು ಔಪಚಾರಿಕವಾಗಿ ಮಂಡಿಸುತ್ತೇನೆ. ಇದರ ಮತ್ತು ಇದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಅನಂತರದ ದಿನಕ್ಕಾಗಿ ತಡೆಹಿಡಿಯುವಂತೆ ತಮ್ಮನ್ನು ಪ್ರಾರ್ಥಿಸುತ್ತೇನೆ. ಈ ಖಂಡವು ಶಾಸನಸಭೆಯ ಎರಡು ಸದನಗಳ ಸಂಯೋಜನೆಯನ್ನು ಕುರಿತದ್ದು. ಹಲವಾರು ತಿದ್ದುಪಡಿಗಳು ಬಂದಿವೆ. ಅವು ಪ್ರಾಂತ್ಯಗಳು ಮತ್ತು ಭಾರತೀಯ ರಾಜ್ಯಗಳನ್ನು ಕುರಿತ ಕೆಲವು ಪ್ರಮುಖ ಅಂಶಗಳಿಗೆ ಸಂಬಂಧಿಸಿವೆ. ಇವುಗಳ ಯೋಗ್ಯತೆ ಕುರಿತಂತೆ ಮೊಗಸಾಲೆಯಲ್ಲಿ ಚರ್ಚೆಗಳು ನಡೆಯುತ್ತಿವೆ. ಆ ಚರ್ಚೆಗಳ ಫಲವಾಗಿ ಸದನದ ಮುಂದೆ ಎಲ್ಲರಿಗೂ ಸಮ್ಮತವಾಗುವಂತೆ ಕೆಲವೊಂದನ್ನು ಮಂಡಿಸುವುದು ಸಾಧ್ಯವೆನಿಸುತ್ತದೆ. ಮಾನ್ಯರೆ, ನಾನು ಕೋರುವುದಿಷ್ಟೆ ತಾವು ನನ್ನ ಸಲಹೆಯಂತೆ ಈ ಪ್ರಕ್ರಿಯೆಯನ್ನು ಅನುಮೋದಿಸುತ್ತೀರೆಂದು ಭಾವಿಸುತ್ತೇನೆ. ಹಾಗೆ ಒಪ್ಪುವುದಾದರೆ ನಾನು ಬರೆ ಖಂಡವನ್ನು ಮಾತ್ರ ಓದುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸಲಹೆಯನ್ನು ಅಂಗೀಕರಿಸುವುದರಲ್ಲಿ ಸದನಕ್ಕೇನೂ ಆಕ್ಷೇಪವಿರಲಾರದೆಂದು ಭಾವಿಸುತ್ತೇನೆ. ಈ ಖಂಡದ ಚರ್ಚೆಯನ್ನು ಸದ್ಯಕ್ಕೆ ತಡೆದಿಟ್ಟು ಖಂಡವನ್ನು ಮಾತ್ರ ಔಪಚಾರಿಕವಾಗಿ ಪ್ರಸ್ತಾವಿಸಲಾಗುವುದು.

**ಗೌರವಾನ್ವಿತ ಸದಸ್ಯರು :** ಸರಿ

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ ನಾನು ೧೪ನೇ ಖಂಡವನ್ನು ಪ್ರಸ್ತಾವಿಸಲು ಅನುಮತಿ ಕೋರುತ್ತೇನೆ.

೧೪ (೧) (ಎ) ರಾಜ್ಯಸಭೆಯು ಕೆಳಕಂಡವನ್ನು ಒಳಗೊಂಡಿರುತ್ತದೆ.

(೧) ರಾಷ್ಟ್ರಪತಿಗಳು ವಿಶ್ವವಿದ್ಯಾನಿಲಯಗಳು ಹಾಗೂ ವಿಜ್ಞಾನ ಸಂಸ್ಥೆಗಳೊಡನೆ ಸಮಾಲೋಚಿಸಿ ಹತ್ತಕ್ಕೆ ಮೀರದಂತೆ ನಾಮ ನಿರ್ದೇಶನ ಮಾಡಿದ ಸದಸ್ಯರು.

(೨) ಇಡೀ ದಶಲಕ್ಷ ಜನಸಂಖ್ಯೆಗೆ ಒಬ್ಬರಂತೆ ೫ ದಶಲಕ್ಷದವರೆಗೂ ಪ್ರತಿನಿಧಿಗಳನ್ನೊಳಗೊಂಡ ಘಟಕಗಳ ಜೊತೆಗೆ ಪ್ರತಿ ೨ ಲಕ್ಷ ಹೆಚ್ಚುವರಿ ಜನಸಂಖ್ಯೆಗೆ ಒಬ್ಬರಂತೆ ಚುನಾಯಿತ ಪ್ರತಿನಿಧಿಗಳು, ಒಟ್ಟು ಗರಿಷ್ಠ ೨೦ಕ್ಕೆ ಪರಿಮಿತ.

ವಿವರಣೆ : ಒಂದು ಘಟಕ ಎಂದರೆ ಒಂದು ಪ್ರಾಂತ್ಯ ಅಥವಾ ರಾಜ್ಯ. ಅದು ತನ್ನದೆ ಹಕ್ಕು ಚಲಾಯಿಸಿ ಒಕ್ಕೂಟ ಸಂಸತ್ತಿಗೆ ಪ್ರತಿನಿಧಿಗಳನ್ನು ಚುನಾಯಿಸುತ್ತದೆ. ಮಂಡಲಿಗೆ ಪ್ರತಿನಿಧಿಗಳನ್ನು ಚುನಾಯಿಸುವ ಉದ್ದೇಶದಿಂದ ಭಾರತೀಯ ರಾಜ್ಯಗಳಲ್ಲಿ ಒಟ್ಟಿಗೆ ಕೂಡಿ ಒಂದು ಘಟಕ ಎಂದರೆ ಆ ರೀತಿ ರಚಿಸಲ್ಪಟ್ಟ ಸಮೂಹ.

(ಬಿ) ರಾಜ್ಯಸಭೆಯ ಪ್ರತಿನಿಧಿಗಳು ಶಾಸನಸಭೆಯ ಕೆಳಸದನದಲ್ಲಿ ಆ ಘಟಕದ ಸದಸ್ಯರಿಂದ ಚುನಾಯಿಸಲ್ಪಡುತ್ತಾರೆ.

(ಸಿ) ಲೋಕಸಭೆಯ ರಾಜ್ಯಕ್ಷೇತ್ರಗಳಲ್ಲಿ ೧ ದಶಲಕ್ಷ ಜನಸಂಖ್ಯೆಗೆ ಒಬ್ಬನಿಗೆ ಕಡಿಮೆ ಇಲ್ಲದಂತೆ ಮತ್ತು ೭,೫೦,೦೦೦ ಜನಸಂಖ್ಯೆಗೆ ಒಬ್ಬರಿಗೆ ಮೀರದಂತಹ ಪ್ರಮಾಣದಲ್ಲಿ ಜನತಾ ಸದನದಲ್ಲಿ ಪ್ರತಿನಿಧಿಗಳಿರುತ್ತಾರೆ.

(ಡಿ) ಇಡೀ ರಾಜ್ಯ ಕ್ಷೇತ್ರಗಳಲ್ಲಿ ಹಿಂದಿನ ಜನಗಣತಿಯಂತೆ ಯಾವುದೇ ಸಂದರ್ಭದಲ್ಲೂ ಪ್ರತಿ ಚುನಾವಣಾ ಕ್ಷೇತ್ರದಲ್ಲಿ ಚುನಾಯಿಸಲ್ಪಡುವ ಪ್ರತಿನಿಧಿಗಳಿಗೂ ಅಲ್ಲಿಯ ಜನಸಂಖ್ಯೆಗೂ ಇರುವ ನಿಷ್ಪತ್ತಿ ಕಾರ್ಯಸಾಧ್ಯವಾಗುವ ಮಟ್ಟಿಗೆ ಒಂದೇ ಆಗಿರುತ್ತದೆ.

(೨) ಅನುಸೂಚಿಯಲ್ಲಿರುವ ಉಪಬಂಧಗಳಿಗೆ ಅನುಗುಣವಾಗಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವುದು.

ಪರಂತು ಲೋಕಸಭೆಗೆ ಚುನಾವಣೆಗಳು ವಯಸ್ಕರ ಮತಾಧಿಕಾರದ ಆಧಾರದ ಮೇಲೆ ನಡೆಯುತ್ತದೆ.

(೩) ದಶವಾರ್ಷಿಕ ಜನಗಣತಿ ಪೂರ್ಣಗೊಂಡ ಅನಂತರ ಸಮ್ಮಿಶ್ರ ಸಂಸತ್ತು ಅಧಿನಿಯಮದ ಮೂಲಕ ನಿರ್ಧರಿಸಿದಂತೆ ಆಯಾ ಅಧಿಕಾರಿಗಳು ಆಯಾ ಕಾಲಕ್ಕೆ ತಕ್ಕ ರೀತಿಯಲ್ಲಿ ಹಲವು ಪ್ರಾಂತ್ಯಗಳ ಮತ್ತು ಭಾರತೀಯ ರಾಜ್ಯಗಳ ಅಥವಾ ಅವುಗಳ ಸಮೂಹಗಳಿಂದ ಎರಡು ಸದನಗಳಿಗೆ ದೊರೆಯುವ ಪ್ರಾತಿನಿಧ್ಯವನ್ನು ಪುನಃ ಸರಿಪಡಿಸುವರು.

(೪) ರಾಜ್ಯಸಭೆ ಸ್ಥಾಯಿ ಮಂಡಲಿಯಾಗಿರುತ್ತದೆ. ಅದನ್ನು ವಿಸರ್ಜಿಸಲಾಗದು. ಆದರೆ ಅನುಸೂಚಿಯಲ್ಲಿರುವಂತೆ ಪ್ರತಿ ಎರಡನೇ ವರುಷ ಸದಸ್ಯರ ಮೂರನೇ ಒಂದು ಭಾಗ ನಿವೃತ್ತರಾಗುತ್ತಾರೆ.

(೫) ಲೋಕಸಭೆಯು ನೇಮಕಗೊಂಡ ದಿನಾಂಕದಿಂದ ನಿಗದಿತ ಅವಧಿಗೆ ಮುನ್ನ ವಿಸರ್ಜಿಸಲ್ಪಟ್ಟ ಹೊರತು ನಾಲ್ಕು ವರುಷಗಳ ಕಾಲ ಮುಂದುವರಿಯುತ್ತದೆ; ಅದಕ್ಕಿಂತ ಮೀರಿ ಇರಲಾರದು. ಈ ಅವಧಿ ಮುಗಿಯುತ್ತಿದ್ದಂತೆ ಸದನದ ವಿಸರ್ಜನೆ ವಿಧ್ಯುಕ್ತವಾಗಿ ನಡೆಯುವುದು.

ಪರಂತು ಈ ಅವಧಿಯನ್ನು ತುರ್ತು ಪರಿಸ್ಥಿತಿಯಲ್ಲಿ ರಾಷ್ಟ್ರಪತಿಗಳು ಒಂದು ವರುಷಕ್ಕಿಂತ ಮೀರದಂತೆ ಒಮ್ಮೆ ವಿಸ್ತರಿಸಬಹುದು ಹಾಗೂ ಯಾವುದೇ ಸಂದರ್ಭದಲ್ಲೂ ತುರ್ತು ಪರಿಸ್ಥಿತಿ ಮುಗಿದ ಅನಂತರ ೬ ತಿಂಗಳಿಗಿಂತ ಮೀರದಂತೆ ವಿಸ್ತರಿಸಲ್ಪಡಲಾಗದು."

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಸಂಬಂಧಿಸಿದ ಚರ್ಚೆಯನ್ನು ನಂತರ ತೆಗೆದುಕೊಳ್ಳೋಣ. ಈಗ ೧೫ನೇ ಖಂಡಕ್ಕೆ ಹೋಗೋಣ.

## ಖಂಡ – ೧೫

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ :

"ಸಂಸತ್ತಿನ ಸಮಾಪ್ತಿ, ವಿಸರ್ಜನೆ, ಉಭಯ ಸದನಗಳ ನಡುವಣ ಸಂಬಂಧಗಳ ನಿಯಂತ್ರಣ, ಮತದಾನ ವಿಧಾನ, ಸದಸ್ಯರ ಹಕ್ಕುಗಳು, ಸದಸ್ಯತ್ವವನ್ನು ಅನರ್ಹಗೊಳಿಸುವುದು, ಹಣಕಾಸು ವ್ಯವಹಾರಗಳನ್ನು ಒಳಗೊಂಡಂತೆ ಸಂಸದೀಯ ಪ್ರಕ್ರಿಯೆ ಎಲ್ಲಕ್ಕೂ ಯಥೋಚಿತ ಉಪಬಂಧಗಳಿರಬೇಕು. ಮುಖ್ಯವಾಗಿ ಹಣಕಾಸು ವಿಧೇಯಕಗಳು ಕೆಳಸದನದಿಂದ ಉಗಮವಾಗಬೇಕು. ಹಣಕಾಸು ವಿಧೇಯಕಗಳನ್ನು ಕುರಿತ ತಿದ್ದುಪಡಿಗಳನ್ನು ಸೂಚಿಸುವ ಅಧಿಕಾರ ಮೇಲ್ಮನೆಗಿರಬೇಕು. ಅದನ್ನು ಅಂಗೀಕರಿಸಬಹುದೆ, ಬೇಡವೆ ಎಂಬುದನ್ನು ಅಂಗೀಕರಿಸಿದ ತಿದ್ದುಪಡಿಗಳನ್ನೊಳಗೊಂಡ ವಿಧೇಯಕವನ್ನು ಅಥವಾ ತಿದ್ದುಪಡಿಗಳನ್ನು ಅಂಗೀಕರಿಸದ ಸಂದರ್ಭದಲ್ಲಿ ಮೂಲ ವಿಧೇಯಕವನ್ನೂ ರಾಷ್ಟ್ರಪತಿಗಳ ಅನುಮೋದನೆಗೆ ಸಲ್ಲಿಸಬೇಕು. ಅವರು ಅನುಮೋದಿಸಿದ ಅನಂತರ ಅದು ಕಾನೂನು ರೂಪ ಪಡೆಯುತ್ತದೆ. ಒಂದು ವಿಧೇಯಕ ಹಣಕಾಸು ವಿಧೇಯಕವೆ ಅಲ್ಲವೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾದಾಗ ಲೋಕಸಭೆಯ ಸಭಾಧ್ಯಕ್ಷರ ನಿರ್ಧಾರ ಅಂತಿಮ. ಹಣಕಾಸು ವಿಧೇಯಕವನ್ನು ಹೊರತುಪಡಿಸಿ ಉಭಯ ಸದನಗಳಿಗೆ ಶಾಸನಗಳ ಸಮಾನಾಧಿಕಾರವಿರಬೇಕು ಮತ್ತು ಬಿಕ್ಕಟ್ಟು ಏರ್ಪಟ್ಟಾಗ ಎರಡೂ ಸದನಗಳ ಜಂಟಿ ಸಭೆಯಲ್ಲಿ ಬಗೆಹರಿಸಿಕೊಳ್ಳಬಹುದು. ಆರು ತಿಂಗಳ ಒಳಗೆ ವಿಧೇಯಕಗಳನ್ನು ಪುನಃ ಪರಿಶೀಲನೆಗೆಂದು ರಾಷ್ಟ್ರಪತಿಗಳು ಹಿಂತಿರುಗಿಸಬಹುದು."

ಮಾನ್ಯರೆ, ಎಲ್ಲ ಸಂವಿಧಾನಗಳಲ್ಲೂ ಈ ವಿಷಯಗಳಿಗೆ ಉಪಬಂಧವನ್ನು ಅಳವಡಿಸಲಾಗಿದೆ. ನಮ್ಮ ಸಂವಿಧಾನದಲ್ಲೂ ಯಥಾಕ್ರಮದಲ್ಲಿ ಅವುಗಳನ್ನು ಅಳವಡಿಸಲಾಗುವುದು. ಈ ಖಂಡವು ಸಂವಿಧಾನ ರಚನಕಾರರಿಗೆ ಉಪಬಂಧಗಳನ್ನು ಅಳವಡಿಸುವ ಅಧಿಕಾರವನ್ನಷ್ಟೇ ಕೊಡುತ್ತದೆ.

(೨ನೇ ಪಟ್ಟಿಯಲ್ಲಿರುವ ೩೦೦ ಮತ್ತು ೩೦೧ನೇ ತಿದ್ದುಪಡಿಗಳು ಹಾಗೂ ೧ನೇ ಪೂರಕ ಪಟ್ಟಿಯಲ್ಲಿರುವ ೧೭ನೇ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು ಮಂಡಿಸುತ್ತೇನೆ.

"೧೫ನೇ ಖಂಡದಲ್ಲಿ ಕೊನೆಯ ವಾಕ್ಯಕ್ಕೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು:

'ಹಣಕಾಸು ವಿಧೇಯಕವಲ್ಲದ ಇತರ ವಿಧೇಯಕಗಳನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದಾಗ ಅವರು ಅವುಗಳನ್ನು ಪುನಃ ಪರಿಶೀಲನೆಗಾಗಿ ಒಕ್ಕೂಟ ಶಾಸನಸಭೆಗೆ ಹಿಂತಿರುಗಿಸಬಹುದು. ಆದರೆ ಶಾಸನ ಸಭೆಯು ಅಂಗೀಕರಿಸಿದ ವಿಧೇಯಕಗಳನ್ನು ಆರು ವಾರಗಳ ಅನಂತರ ಹಿಂತಿರುಗಿಸಲಾಗದು'."

ಇದರ ಉದ್ದೇಶ ಎರಡು ಬದಲಾವಣೆಗಳನ್ನು ತರುವುದು. ಈಗ ಖಂಡ ಇರುವ ರೀತ್ಯಾ ವಿಧೇಯಕಗಳನ್ನು ಆರು ತಿಂಗಳ ಒಳಗೆ ಹಿಂತಿರುಗಿಸಬೇಕು. ಖಂಡದಲ್ಲಿ ನಮೂದಿಸಿರುವಂತೆ ಆರು ತಿಂಗಳೊಳಗೆ ಪುನಃ ಪರಿಶೀಲನೆ ಎಂಬ ಪದಗಳು ಒಂದು ಸಂದಿಗ್ಧತೆಗೆ ಸಿಲುಕಿಸುತ್ತವೆ. ವಿಧೇಯಕವನ್ನು ಆರು ತಿಂಗಳ ಒಳಗೆ ಹಿಂತಿರುಗಿಸಬೇಕೋ ಅಥವಾ ರಾಷ್ಟ್ರೀಯ ಸಭೆ ಸಮಾವೇಶಗೊಂಡ ಆರು ತಿಂಗಳ ಒಳಗೆ ಪರಿಶೀಲಿಸಬೇಕೋ ಎಂಬ ಸಂದಿಗ್ಧತೆ. ಇದಲ್ಲದೆ ಆರು ತಿಂಗಳು ಸುದೀರ್ಘಕಾಲ ಎಂದು ನನ್ನ ಅನೇಕ ಗೆಳೆಯರ ಅಭಿಮತ. ಆದುದರಿಂದ ರಾಷ್ಟ್ರಪತಿಗಳು ಆರುವಾರಗಳ ಒಳಗೆ ವಿಧೇಯಕವನ್ನು ಹಿಂತಿರುಗಿಸಬೇಕೆಂಬ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ. ಅನಂತರ ಹೊಸ ಖಂಡದ ರೀತ್ಯಾ ಎಲ್ಲ ವಿಧೇಯಕಗಳು ಹಿಂತಿರುಗಿಸಲ್ಪಡುವ ಸಂಭಾವ್ಯತೆಯಿಂದ ಹಣಕಾಸು ವಿಧೇಯಕಗಳಿಗೆ ಅನನುಕೂಲವಾಗುತ್ತದೆ. ಹಣಕಾಸು ವಿಧೇಯಕಗಳನ್ನು ಹಿಂತಿರುಗಿಸಲು ರಾಷ್ಟ್ರಪತಿಗಳಿಗೆ ಅಧಿಕಾರವಿರಕೂಡದು. ಏಕೆಂದರೆ ಅವು ತುರ್ತಿನ ವಿಷಯಗಳು. ಸದನದ ಅಂಗೀಕಾರವೇ ಅಂತಿಮ ಎಂದು ತಿಳಿಯಬೇಕು.

ಮೇಲ್ಮನೆ ಕೂಡ ಹಣಕಾಸು ವಿಧೇಯಕಗಳನ್ನು ಬದಲಿಸುವ ಕ್ಷಮತೆ ಹೊಂದಿಲ್ಲವೆಂದು ಭಾವಿಸಲಾಗಿದೆ. ಹಾಗಾಗಿ ಮೇಲ್ಮನೆಯಿಂದ ಪುನಃ ಪರಿಶೀಲನಾಧಿಕಾರವನ್ನು ಪಡೆದುಕೊಂಡ ಮೇಲೆ ಆ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುವುದರಲ್ಲಿ ಅರ್ಥವಿಲ್ಲ. ಮಾನ್ಯರೆ, ನಾನು ಮಂಡಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಬೇರಾವುದೇ ತಿದ್ದುಪಡಿ ಇಲ್ಲ ಹಾಗಾಗಿ ಮೂಲಖಂಡ ಮತ್ತು ತಿದ್ದುಪಡಿ ಈಗ ಚರ್ಚೆಗೆ ಮುಕ್ತ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದರಾಸ್ : ಸಾಮಾನ್ಯ) : ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಹಣಕಾಸು ವಿಧೇಯಕಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಗಳಿಗೆ ಅವುಗಳನ್ನು ಪುನಃ ಪರಿಶೀಲನೆಗಾಗಿ ಹಿಂತಿರುಗಿಸುವ ಸ್ವಾತಂತ್ರ್ಯದ ಅವಧಿಯನ್ನು ಕಡಿಮೆಗೊಳಿಸಿದರೆ ನನಗೆ ಸಂತೋಷ. ನನ್ನ ತಿಳಿವಳಿಕೆಗೆ ಬಂದಿರುವಂತೆ ಕೆಲವೊಮ್ಮೆ ಕೇಂದ್ರೀಯ ಶಾಸನಸಭೆ ವಿಧೇಯಕಗಳನ್ನು ಅಂಗೀಕರಿಸಿದಾಗ ನಮ್ಮ ಉದ್ದೇಶಗಳಿಗೆ ವ್ಯತಿರಿಕ್ತವಾದ ಕೆಲವು ಉಪಬಂಧಗಳು ನುಸುಳಿದ್ದಕ್ಕೆ ನಾವು ವಿಷಾದಪಡಬೇಕಿತ್ತು. ಹಣಕಾಸು ವಿಷಯಗಳಲ್ಲೂ ಸಹ ಆಯವ್ಯಯದಲ್ಲಿ ನಾವು ಒಂದು ಮೊಬಲಗಿನ ಮಂಜೂರಾತಿಗೆ ಅನುಮೋದಿಸದೆ ವಿರುದ್ಧವಾಗಿ ಮತಚಲಾಯಿಸಿದಾಗ ಅದು ಮೇಲ್ಮನೆಗೆ ಹೋಯಿತು. ಅನಂತರ ಗವರ್ನರ್ ಜನರಲ್ ಮಧ್ಯಪ್ರವೇಶದಿಂದ ಅದು ವಾಪಸು ಬರಬೇಕಾಯಿತು. ಹಣಕಾಸು ವಿಧೇಯಕಗಳಲ್ಲೂ ಪ್ರಮಾದಗಳು ಜರುಗುತ್ತವೆ. ನಾವು ಅವುಗಳನ್ನು ಸರಿಪಡಿಸಲು ಇಚ್ಛಿಸುತ್ತೇವೆ. ತಿದ್ದುಪಡಿಯ ಶಾಸನದ ಹೊರತಾಗಿ ಈಗಿರುವಂತೆ ಶಾಸನಸಭೆಗೆ ತನ್ನದೆ ಹಣಕಾಸು ವಿಧೇಯಕವನ್ನು ಪುನಃ ಪರಿಶೀಲಿಸಲು ಅನುವಾಗುವ ಯಾವುದೇ ಉಪಬಂಧವಿಲ್ಲ. ಹಣಕಾಸು ವಿಧೇಯಕದ ವಿಷಯದಲ್ಲೂ ಅಂತಹುದೊಂದು ಉಪಬಂಧವನ್ನು ಏಕೆ ಮಾಡಬಾರದೋ ನನಗೆ ತಿಳಿಯುತ್ತಿಲ್ಲ. ಹೌದು ತುರ್ತು ಪರಿಸ್ಥಿತಿಯಲ್ಲಿ ವಿಧೇಯಕಕ್ಕೆ ತಡೆಯೊಡ್ಡುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡಬಾರದೇನೋ ನಿಜ. ಯಾವುದೇ ತಾಂತ್ರಿಕ ದೋಷವಿದ್ದರೂ ಸರಿಪಡಿಸಲು ಹತ್ತು ದಿನಗಳಿಗೆ ಮೀರದಂತೆ ಹಿಂತಿರುಗಿಸುವ ಅಧಿಕಾರ ನೀಡುವ ಬಗ್ಗೆ, ಅನಂತರ ವಿವರಗಳನ್ನು ತುಂಬುವ ಸಂವಿಧಾನ ರಚಿಸುವವರು ಪರಿಶೀಲಿಸಬೇಕೆಂದು ನಾನು ಬಯಸುತ್ತೇನೆ. ಇಲ್ಲವಾದರೆ ಇತರ ಯಾವುದೇ ಪ್ರಮುಖ ವಿಷಯಕ್ಕೂ ರಾಷ್ಟ್ರಪತಿಗಳಿಗೆ ವಿಧೇಯಕವನ್ನು ಹಿಂತಿರುಗಿಸಲು ಸ್ವಾತಂತ್ರ್ಯ ನೀಡುವ ಅಗತ್ಯವಿಲ್ಲ. ಅಂತಹ ವಿಷಯಗಳನ್ನು ಸಂಪೂರ್ಣವಾಗಿ ಕೆಳಮನೆಯ ನಿರ್ಧಾರಕ್ಕೆ ಬಿಡಬೇಕು. ಅಂತಹ ಸಂದರ್ಭಗಳಲ್ಲಿ ವಿಷಯದ ನಿರ್ಧಾರಕ್ಕೆ ರಾಷ್ಟ್ರಪತಿಗಳು ಕೆಳಮನೆ ಅಥವಾ ಮೇಲ್ಮನೆಗೆ ಪರ್ಯಾಯವಾಗಿ ತಾವೇ ನಿರ್ಧರಿಸುವಂತಿಲ್ಲ.

ವಿಧೇಯಕಗಳನ್ನು ಹಿಂತಿರುಗಿಸುವ ಬಗ್ಗೆ ನಾನಾಗಲೆ ಹೇಳಿದಂತೆ ಒಂದು ಸದನದಲ್ಲಿ ದುಡುಕಿ

ಮಾಡಿದುದನ್ನು ಇನ್ನೊಂದು ಸದನ ತಿದ್ದಿರುವ ಅನೇಕ ಪ್ರಕರಣಗಳಿವೆ. ಇನ್ನೂ ಕೆಲವು ಪ್ರಕರಣಗಳಲ್ಲಿ ಎರಡೂ ಸದನಗಳು ವಿವೇಚಿಸಿ ಅಂಗೀಕರಿಸಿದ ಅನಂತರವೂ ವಿಧೇಯಕವನ್ನು ಪುನಃ ಪರಿಶೀಲನೆಗೆ ಕಳುಹಿಸಬೇಕಾದ ಅನಿವಾರ್ಯತೆ ಇರುತ್ತದೆ. ಭಾರತ ಸರ್ಕಾರದ ಅಧಿನಿಯಮದ ಪ್ರಸ್ತುತ ಉಪಬಂಧದಂತೆ ಗೌರ್ನರ್ ಜನರಲ್ ಅವರು ಮಹಾಪ್ರಭುಗಳ ಪುನಃ ಪರಿಶೀಲನೆಗಾಗಿ ಕೆಲವು ವಿಧೇಯಕಗಳನ್ನು ಮೀಸಲಿಟ್ಟುಕೊಳ್ಳುವ ಅವಕಾಶವಿದೆ. ಆ ಮಸೂದೆಗಳನ್ನು ಹಿಂತಿರುಗಿಸುವಾಗ ಅವುಗಳನ್ನು ಪರಿಷ್ಕರಿಸುವ ಬಗ್ಗೆ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ.

೧೫ನೇ ಖಂಡದಲ್ಲಿ ಸೇರಿಸಬೇಕಾಗಿರುವ ಕೆಲವಿಷಯದ ಬಗ್ಗೆ ಇನ್ನಷ್ಟು ಸಲಹೆಗಳನ್ನು ನೀಡಬಯಸುತ್ತೇನೆ. ಇತರ ಖಂಡಗಳಿಗೆ ತೆಗೆದುಕೊಂಡ ಎಚ್ಚರಿಕೆ ಮತ್ತು ಕಾಲಾವಕಾಶವನ್ನು ಈ ಖಂಡದ ಕರಡು ತಯಾರಿಕೆಯಲ್ಲಿ ತೆಗೆದುಕೊಂಡಿಲ್ಲ. ಅನೇಕ ಇತರ ಬಾಬುಗಳು ಇಲ್ಲಿ ಕಾಣೆಯಾಗಿವೆ. ಉದಾಹರಣೆಗೆ ಆಯವ್ಯಯ ಪತ್ರಕ್ಕೆ ಯಾವ ಉಪಬಂಧವನ್ನೂ ಅಳವಡಿಸಿಲ್ಲ. ಈಗಿರುವ ಅಧಿನಿಯಮ್ಮದಂತೆ ಮೊದಲು ಆಯವ್ಯಯ ಪತ್ರವನ್ನು ವಿಧಾನಸಭೆಗೆ ಸಲ್ಲಿಸಲಾಗುತ್ತದೆ. ಅನಂತರ ವಿಧಾನ ಪರಿಷತ್ತಿಗೆ ಸಲ್ಲಿಸಲಾಗುತ್ತದೆ. ಮುಂಗಡ ಪತ್ರವನ್ನು ಪರಿಷ್ಕರಿಸಲು ಬದಲಾಯಿಸಲು ಅಥವಾ ಕಡಿತಗೊಳಿಸಲು ಸಭೆಗೆ ಸ್ವಾತಂತ್ರ್ಯವಿರುತ್ತದೆ. ಆದರೆ ವಿಧಾನಸಭೆ ಬೇಡಿಕೆಗೆ ಮತ ಹಾಕದಿದ್ದರೆ ವಿಧಾನ ಪರಿಷತ್ತು ಅದನ್ನು ಸಚೇತನಗೊಳಿಸಲಾಗದು. ಇದು ವಿಧಾನ ಪರಿಷತ್ತಿಗೆ ಅಧಿಕಾರ ವಹಿಸುವ ಅಥವಾ ವಿಧಾನಸಭೆಗೆ ಇರುವ ಅಧಿಕಾರವನ್ನು ಕಸಿದುಕೊಳ್ಳುವ ವಿಷಯ. ಅದು ಕೇವಲ ರೂಪ ಮಾತ್ರವಲ್ಲ. ವಿಷಾದನೀಯವೆಂದರೆ ಅದನ್ನು ಬಾಬುಗಳ ಪಟ್ಟಿಯಲ್ಲಿ ಸೇರಿಸಿಲ್ಲ. ಅದಕ್ಕೆ ಉಪಬಂಧಗಳನ್ನು ರಚಿಸಬೇಕು. ಇತರ ಪರಿಶೀಲನಾರ್ಹ ವಿಷಯಗಳೊಡನೆ ಅದನ್ನೂ ಪರ್ಯಾಯಲೋಚಿಸಬೇಕು.

ಮಂತ್ರಿಗಳಿಗೆ ಕರೆ ಕೊಡುವುದು ಅಥವಾ ವಜಾ ಮಾಡುವುದಕ್ಕೆ ಸಂಬಂಧಿಸಿದಂತೆಯೂ ಸೂಕ್ತವಾದ ಉಪಬಂಧಗಳನ್ನು ಸೇರಿಸಬೇಕು. ಈಗ ಅದಕ್ಕಾಗಿ ಉಪಬಂಧವಿಲ್ಲ. ತಿದ್ದುಪಡಿಯ ಮೂಲಕ ಪ್ರಧಾನಿಯವರಿಗೆ ಕರೆಕೊಡುವ ಅವಕಾಶವನ್ನು ಕಲ್ಪಿಸಿದ್ದೇವೆ. ಅನಂತರ ಅವರು ಇತರ ಸಚಿವರನ್ನು ಆಯ್ಕೆ ಮಾಡಿದ ಮೇಲೆ ಅಂತಿಮವಾಗಿ ರಾಷ್ಟ್ರಪತಿಗಳು ಅದನ್ನು ಅನುಮೋದಿಸಬೇಕು. ಆದರೆ ವಜಾಕ್ಕೆ ಸಂಬಂಧಿಸಿದಂತೆ ಯಾವುದೇ ಉಪಬಂಧವಿಲ್ಲ. ಸಚಿವರು ಸದನದ ವಿಶ್ವಾಸವನ್ನು ಕಳೆದುಕೊಂಡರೆ ರಾಷ್ಟ್ರಪತಿಗಳು ಅವರನ್ನು ನಿರ್ಗಮಿಸುವಂತೆ ಆದೇಶಿಸಬಹುದು. ಅಂತಹ ಯಾವುದಾದರೊಂದು ಉಪಬಂಧದ ಅಗತ್ಯವಿದೆ.

೧೫ನೇ ಖಂಡದಲ್ಲಿ ಸೇರಿಸಬೇಕಾದ ಉಪಬಂಧಗಳಿಗೆ ಸಂಬಂಧಿಸಿದ ಒಂದೆರಡು ವಿಷಯಗಳಿವೆ. ಉದಾಹರಣೆಗೆ ಭಾರತ ಸರ್ಕಾರದ ೧೦೩ ಇತ್ಯಾದಿ ಪ್ರಕರಣಗಳನ್ನು ನೋಡಿ; ಇವುಗಳಲ್ಲಿ ಎರಡು ಅಥವಾ ಮೂರು ಘಟಕಗಳಿಗೆ ಏಕರೀತಿಯಾದ ಉಪಬಂಧಗಳಿವೆ. ಒಕ್ಕೂಟದೊಡನೆ ಸಮ್ಮಿಶ್ರಗೊಳ್ಳುವ ರಾಜ್ಯಗಳು ಮತ್ತು ಪ್ರಾಂತ್ಯಗಳಿವೆ. ಎರಡು ರಾಜ್ಯಗಳಿಗೆ ಅಥವಾ ಪ್ರಾಂತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ವಿಷಯಗಳಿವೆ. ಈ ವಿಷಯಗಳು ಸಂಪೂರ್ಣವಾಗಿ ಪ್ರಾಂತೀಯ ವಿಷಯಗಳಾಗಿರಬಹುದು. ಆದರೂ ಅನುಕೂಲಕ್ಕಾಗಿ ಅವೆರಡೂ ಘಟಕಗಳು, ಶಾಸನವನ್ನು ಜಾರಿಮಾಡುವಂತೆ ಕೇಂದ್ರವನ್ನು ಅಗತ್ಯಪಡಿಸಬಹುದು. ಅವುಗಳ ಸಮ್ಮತದಿಂದ ಪ್ರತ್ಯಾಯೋಜಿತ ಅಧಿಕಾರದಿಂದ ಕೇಂದ್ರ ಶಾಸನಸಭೆ ಶಾಸನವನ್ನು ಅಂಗೀಕರಿಸಬಹುದು. ಅದಕ್ಕೆ ಇಲ್ಲಿ ಅವಕಾಶವಿಲ್ಲ.

ನಾವು ಈ ಮೂರು ಪಟ್ಟಿಗಳನ್ನು ಅಂಗೀಕರಿಸಿದರೆ ಇವುಗಳಲ್ಲೊಂದು ಪ್ರಾಂತೀಯ ಅಧಿಕಾರ ವ್ಯಾಪ್ತಿಯೊಳಗಣ ಪ್ರತ್ಯೇಕ ವಿಷಯಗಳನ್ನೊಳಗೊಂಡಿರುತ್ತದೆ. ವಿಶೇಷ ಉಪಬಂಧಗಳನ್ನು ರಚಿಸಬೇಕು. ಅದರಿಂದಾಗಿ ಪ್ರಾಂತೀಯ ಪಟ್ಟಿಯಲ್ಲಿ ಪ್ರತ್ಯೇಕವಾಗಿರುವ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಎರಡು ಅಥವಾ ಮೂರು ಘಟಕಗಳು ಸರ್ವಸಾಮಾನ್ಯ ಶಾಸನದಲ್ಲಿ ಆಸಕ್ತಿ ಹೊಂದಿದ್ದರೆ ಅವುಗಳ ಅಗತ್ಯವನ್ನು

ಪೂರೈಸಲು ಪ್ರಾಧಿಕಾರವೊಂದಿರಬೇಕು. ಅದೇ, ಸಂಬಂಧಿಸಿದ ಘಟಕಗಳಿಗೆ, ಸಾಮಾನ್ಯ ಶಾಸನವನ್ನು ಜಾರಿಗೊಳಿಸುವ ಕೇಂದ್ರ ಶಾಸನಸಭೆ. ಸಂವಿಧಾನದಲ್ಲಿ ಅಂತಹ ಕೆಲ ಉಪಬಂಧಗಳನ್ನು ಅಳವಡಿಸಿರಬೇಕು. ಅವುಗಳನ್ನು ೧೫ನೇ ಖಂಡದಲ್ಲಿ ಸೇರಿಸಿರಬೇಕು. ಸಂವಿಧಾನ ಕರಡು ರಚಿಸುವವರು ಇದನ್ನು ನೆನಪಿನಲ್ಲಿಡಬೇಕು.

**ಓರ್ವ ಗೌರವಾನ್ವಿತ ಸದಸ್ಯರು** : ಮಾನ್ಯರೆ, ನಾನಿಲ್ಲಿ ಒಂದು ಲೋಪವನ್ನು ಸೂಚಿಸಲು ಬಯಸುತ್ತೇನೆ. ೧೫ನೇ ಖಂಡವನ್ನು ಪರಿಶೀಲಿಸುವಾಗ ಉತ್ತರ ಭಾಗದಲ್ಲಿ ರಾಷ್ಟ್ರೀಯ ಸಭೆ ಎಂಬ ಪದಗಳು ಕಂಡುಬಂದುವು. ಅದರಂತೆ ರಾಷ್ಟ್ರಪತಿಗಳು, ಸಭೆ ಅಂಗೀಕರಿಸಿದ ವಿಧೇಯಕಗಳನ್ನು ಹಿಂತಿರುಗಿಸುವ ಅಧಿಕಾರ ಹೊಂದಿರಬೇಕು. ಈಗಷ್ಟೆ ೧೫ನೇ ಖಂಡಕ್ಕೆ ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಪರಿಶೀಲಿಸುತ್ತಿರುವಾಗ ರಾಷ್ಟ್ರೀಯ ಸಭೆ ಎಂಬ ಪದಗಳನ್ನು ಬಿಟ್ಟು ಸಮ್ಮಿಶ್ರ ಸಂಸತ್ತು ಎಂಬ ಪದಗಳನ್ನು ಒಳಸೇರಿಸಲಾಗಿದೆ. ಪಾರ್ಲಿಮೆಂಟಿನ ಉಭಯ ಸದನಗಳು ಎಂಬ ಪದಗಳು ಅಲ್ಲಿರಬೇಕೆಂದೆನಿಸುತ್ತೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ ನಾನು ಕೆ. ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

ಕಳೆದ ಭಾಷಣಕಾರರು ಮಾಡಿದ ಟೀಕೆಯನ್ನು ಕುರಿತಂತೆ ನಾನು ಸೂಚಿಸಬಹುದಾದರೆ ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಈಗಾಗಲೇ ಅವರು ರಾಷ್ಟ್ರೀಯ ಸಭೆ ಎಂಬ ಪದಕ್ಕೆ ಬದಲಾಗಿ ಸಮ್ಮಿಶ್ರ ಶಾಸನ ಸಭೆ ಎಂಬ ಪದಗಳನ್ನು ಪ್ರತಿಯೋಜಿಸಿದ್ದಾರೆ. ಆದುದರಿಂದ ಕಳೆದ ಭಾಷಣಕಾರರು ಎತ್ತಿದ ಆಕ್ಷೇಪಣೆ ಸಲ್ಲದು.

ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಹಲವಾರು ವಿಷಯಗಳನ್ನು ಪ್ರಸ್ತಾವಿಸಿದರು. ಅವುಗಳಲ್ಲಿ ಕೊನೆಯದು ಎರಡು ಘಟಕಗಳಿಗೆ ಸಾಮಾನ್ಯವಾದ ವಿಷಯಗಳ ಬಗ್ಗೆ ಶಾಸನವೊಂದರ ರಚನೆಗೆ ಕೋರಿದರೆ ಅಂತಹ ಪ್ರಕರಣಗಳಲ್ಲಿ ಒಕ್ಕೂಟ ಶಾಸನದಲ್ಲಿ ಅವಕಾಶವಿರಬೇಕು. ಮಹಾಸಭೆಯ ಇತರ ಘಟಕಗಳು ಬಯಸಿದಲ್ಲಿ ತಮಗಾಗಿ ಆ ಶಾಸನವನ್ನು ಅನ್ವಯಿಸುವುದಕ್ಕೆ ಅವಕಾಶವೊದಗಿಸಬೇಕು. ಮಾನ್ಯರೆ, ಅದೊಂದು ಮುಖ್ಯವಾದ ಅಂಶ. ನಾನು ಅವರಿಗೊಂದು ಆಶ್ವಾಸನೆ ಕೊಡುತ್ತೇನೆ. ಏನೆಂದರೆ ಸಂವಿಧಾನದ ಪಠ್ಯದ ಕರಡು ರಚನೆಯಾಗುವಾಗ ಅಂತಹ ವಿಷಯಗಳಿಗೆ ಉಪಬಂಧಗಳನ್ನು ಅಳವಡಿಸಲಾಗುವುದು. ಒಕ್ಕೂಟದ ನಿಯಮಗಳ ರಚನೆಯಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸಲ್ಪಡದ ಇತರ ವಿಷಯಗಳೊಡನೆ ಇವುಗಳನ್ನೂ ಸೇರಿಸಲಾಗುವುದು.

ನಾನು ತಿಳಿಸುವುದೇನೆಂದರೆ ಅಂತಹ ವಿಷಯಗಳಿಗೆ ಸಂಬಂಧಿಸಿದ ಉಪಬಂಧಗಳು ೧೫ನೇ ಖಂಡಕ್ಕೆ ಒದಗಿಸಿದ ಮಾಮೂಲಿ ಬಾಬುಗಳ ಅಡಿಯಲ್ಲಿ ಸೇರುವುದಿಲ್ಲ. ಆದರೆ ಪಠ್ಯದ ಕರಡು ರಚನೆಯ ಸಂದರ್ಭದಲ್ಲಿ ಅವರು ಸೂಚಿಸಿದ ಅಂಶಗಳ ಕಡೆ ಗಮನಕೊಡುವ ಭರವಸೆ ನೀಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನೀಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"೧೫ನೇ ಖಂಡದಲ್ಲಿ ಕೊನೆಯ ವಾಕ್ಯಕ್ಕೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು:

'ಹಣಕಾಸು ವಿಧೇಯಕವಲ್ಲದೆ ಇತರ ವಿಧೇಯಕಗಳನ್ನು ಅನುಮೋದನೆಗಾಗಿ ರಾಷ್ಟ್ರಪತಿಗಳಿಗೆ ಸಲ್ಲಿಸಿದಾಗ ಅವರು ಅವುಗಳನ್ನು ಪುನಃ ಪರಿಶೀಲನೆಗಾಗಿ ಒಕ್ಕೂಟ ಶಾಸನ ಸಭೆಗೆ ಹಿಂತಿರುಗಿಸಬಹುದು. ಆದರೆ ಸಭೆ ಅಂಗೀಕರಿಸಿದ ಅನಂತರ ಆರುವಾರಗಳಿಗಿಂತ ಮೀರಿದಂತೆ ಅವುಗಳನ್ನು ತಡವಾಗಿ ಹಿಂತಿರುಗಿಸಲಾಗದು'."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ತಿದ್ದುಪಡಿಯಾದ ಖಂಡವನ್ನು ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾದ ೧೫ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೧೬

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮುಂದಿನ ಖಂಡ ೧೬ ಅದು ಭಾಷೆಗೆ ಸಂಬಂಧಿಸಿದುದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಆ ಖಂಡವನ್ನು ಈಗ ಪ್ರಸ್ತಾವಿಸಿದಂತೆ ಗೌರವಾನ್ವಿತ ಪ್ರಸ್ತಾವಕರನ್ನು ಕೋರಬಹುದೆ? ಅದನ್ನು ಮುಂದೂಡಬಹುದು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಅದಕ್ಕೆ ನನಗೇನೂ ಅಭ್ಯಂತರವಿಲ್ಲ. ಆದರೆ ಈ ಅಧಿವೇಶನದಲ್ಲಿ ಪ್ರಸ್ತುತ ವಿಷಯ ಚರ್ಚೆಗೆ ಬರಲಾರದೆಂದು ತಿಳಿಸಲುಬಯಸುತ್ತೇನೆ. ನಾನು ಖಂಡವನ್ನು ಪ್ರಸ್ತಾವಿಸಬಾರದೆಂಬುದು ಸದನದ ಇಚ್ಛೆಯಾದರೆ ನಾನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ೧೬ನೇ ಖಂಡವನ್ನು ಈ ಹಂತದಲ್ಲಿ ಪ್ರಸ್ತಾವಿಸುವುದು ಬೇಡವೆಂದು ಸಲಹೆ ಮಾಡಲಾಗಿದೆ. ನಾನಿದನ್ನು ಸದನದ ಮತಕ್ಕೆ ಹಾಕುತ್ತೇನೆ. ಮುಂದಿಟ್ಟಿರುವ ವಿಷಯ :

"೧೬ನೇ ಖಂಡದ ಪರಿಶೀಲನೆಯನ್ನು ಮುಂದೂಡಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಮೂರನೇ ಅಧ್ಯಾಯ

## ಖಂಡ – ೧೭

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಸಂಸತ್ತಿನ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು (ಸುಗ್ರೀವಾಜ್ಞೆ) ಉದ್ಘೋಷಿಸಲು ರಾಷ್ಟ್ರಪತಿಗಳಿಗೆ ಇರುವ ಅಧಿಕಾರಕ್ಕೆ ೧೭ನೇ ಖಂಡ ಸಂಬಂಧಿಸಿದೆ.

"೧೭ (೧) ಒಕ್ಕೂಟ ಸಂಸತ್ತು ಯಾವಾಗಲಾದರೂ ಅಧಿವೇಶನ ಕರೆಯದಿದ್ದಾಗ ಕ್ಷಿಪ್ರ ಕ್ರಮ ಕೈಗೊಳ್ಳುವುದು ಅಗತ್ಯವಿದೆ ಎಂದು ರಾಷ್ಟ್ರಪತಿಗಳಿಗೆ ಮನವರಿಕೆಯಾಗುವ ಸನ್ನಿವೇಶಗಳಿವೆ ಎಂದಾಗ ಅಂತಹ ಅಗತ್ಯ ಅಧ್ಯಾದೇಶವನ್ನು ಅವರು ಉದ್ಘೋಷಿಸಬಹುದು.

(೨) ಈ ಖಂಡದ ಅಡಿಯಲ್ಲಿ ಉದ್ಘೋಷಿಸಲ್ಪಟ್ಟ ಅಧ್ಯಾದೇಶ ರಾಷ್ಟ್ರಪತಿಗಳು ಅನುಮೋದಿಸಿದ ಒಕ್ಕೂಟ ಸಂಸತ್ತಿನ ಅಧಿನಿಯಮಕ್ಕಿರುವ ಬಲ ಹಾಗೂ ಪರಿಣಾಮವಿರುತ್ತದೆ. ಆದರೆ ಪ್ರತಿಯೊಂದು ಅಧ್ಯಾದೇಶವೂ–

(ಎ) ಒಕ್ಕೂಟ ಸಂಸತ್ತಿನ ಮುಂದೆ ಮಂಡಿಸಲ್ಪಡಬೇಕು, ಮತ್ತು ಈ ನಿರ್ಣಯಗಳಲ್ಲಿ ಎರಡನೆಯದು ಅಂಗೀಕೃತವಾಗುವ ಪರಿಣಾಮವಾಗಿ ಒಕ್ಕೂಟ ಸಂಸತ್ತಿನ ಉಭಯ ಸದನಗಳು ಅಧ್ಯಾದೇಶವನ್ನು ಅನುಮೋದಿಸಿದ ಅನಂತರ ಸಂಸತ್ತಿನ ಮರು ಸಮಾವೇಶದ ತರುವಾಯ ಆರು ವಾರಗಳು ಕಳೆಯುತ್ತಿದ್ದಂತೆ ಅದರ ಕಾರ್ಯಾಚರಣೆ ನಿಲ್ಲಬೇಕು.

ಬಿ) ರಾಷ್ಟ್ರಪತಿಗಳು ಅಧ್ಯಾದೇಶವನ್ನು ಎಂದಾದರೂ ಹಿಂಪಡೆಯಬಹುದು.

(೩) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ಒಂದು ವೇಳೆ ಈ ಪ್ರಕರಣದ ಅಡಿಯಲ್ಲಿ ಉಪಬಂಧದ ಅಳವಡಿಕೆಯಿಂದ ಒಕ್ಕೂಟ ಸಂಸತ್ತು ಸಂವಿಧಾನದ ಅಡಿಯಲ್ಲಿ ಅಧಿನಿಯಮಿತಗೊಳಿಸಲು ಸಮರ್ಥವಾಗದಿದ್ದರೆ ಅಧ್ಯಾದೇಶ ಅನೂರ್ಜಿತವಾಗುತ್ತದೆ."

ಈ ಖಂಡವು ಅಧ್ಯಕ್ಷರಿಗೆ ಅಧ್ಯಾದೇಶ ಹೊರಡಿಸಲು ಅವಕಾಶ ಕಲ್ಪಿಸುತ್ತದೆ. ಈ ನಿಯಮಿತ ವಿವರಗಳೊಡನೆ ಅಧ್ಯಕ್ಷರಿಗೆ ಅಧ್ಯಾದೇಶ ಹೊರಡಿಸಲು ಅಧಿಕಾರವಹಿಸುವಲ್ಲಿ ಯಾವುದೇ ಆಕ್ಷೇಪಣೆ ಇರಲಿಕ್ಕೆ ಸಾಧ್ಯವಿಲ್ಲ. ಮುಂದಿನ ಅಧಿವೇಶನದವರೆಗೆ ಕಾಯಲಿಕ್ಕಾಗದ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನಸಭೆಯ

ಅಧಿವೇಶನ ನಡೆಯದಿದ್ದಾಗ ಮಾತ್ರ ಅಧ್ಯಾದೇಶವನ್ನು ಮಾಡಬಹುದು. ಅಧ್ಯಾದೇಶವನ್ನು ಮಾಡುತ್ತಿದ್ದಂತೆ ಕೂಡಲೆ ಸಂಸತ್ತಿನ ಮುಂದೆ ಮಂಡಿಸಬೇಕು. ಸಂಸತ್ತು ಮರು ಅಧಿವೇಶನ ಕರೆದ ಆರುವಾರಗಳ ಅನಂತರ ಅದರ ಕಾರ್ಯಾಚರಣೆ ಸ್ಥಗಿತಗೊಳ್ಳಬೇಕು. ಮಧ್ಯಾಂತರ ಅವಧಿಯಲ್ಲಿ ಅಧ್ಯಾದೇಶದ ಅನುಷ್ಠಾನವನ್ನು ಮುಂದುವರಿಸುವ ಅಗತ್ಯವಿಲ್ಲವೆಂದೆನಿಸಿದಾಗ ಅಧ್ಯಾದೇಶವನ್ನು ಹಿಂಪಡೆಯಲು ಕೂಡ ರಾಷ್ಟ್ರಪತಿಗಳಿಗೆ ಅಧಿಕಾರ ನೀಡಲಾಗಿದೆ, ಸಂಸತ್ತಿನ ಅಧಿವೇಶನಕ್ಕೆ ಕಾಯದೆ ತತ್‌ಕ್ಷಣದಲ್ಲಿ ತೆಗೆದುಕೊಳ್ಳಬೇಕಾದ ಆಡಳಿತ ಕ್ರಮಕ್ಕೆ ಇಷ್ಟು ವಿವರಗಳುಳ್ಳ ಅಧಿಕಾರ ಅಗತ್ಯವೆಂದು ಕಂಡುಬಂದಿದೆ. ಮಾನ್ಯರೆ ನಾನು ಮಂಡಿಸುತ್ತಿದ್ದೇನೆ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಪ್ರಸ್ತಾವಿಸುವ ಮುನ್ನ ನನಗೊಂದು ವಿಷಯ ತಿಳಿಯಬೇಕಿದೆ. ನಾನು ಐರ್ಲೆಂಡ್ ಮಾದರಿಯ ತಿದ್ದುಪಡಿಯೊಂದರ ಬಗ್ಗೆ ಸೂಚನೆಯನ್ನು ಕಳುಹಿಸಿದ್ದೆ. ಅದರಲ್ಲಿ ಐದು ಖಂಡಗಳನ್ನು ತಿಳಿಸಿದ್ದೆ. ಅದರಲ್ಲೊಂದು ಭರತವರ್ಷದಲ್ಲಿ ಪಶುಹತ್ಯೆ ನಿಷೇಧಿಸುವ ಕಾನೂನು. ನಮಗೆ ಸರಬರಾಜಾದ ಪಟ್ಟಿಯಲ್ಲಿ ಆ ತಿದ್ದುಪಡಿ ಕಾಣೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಶಿಬನ್‌ಲಾಲ್ ಅವರು ಕೊಟ್ಟಿರುವ ನೋಟೀಸು ಈಗಾಗಲೇ ತಾವು ಅಂಗೀಕರಿಸಿರುವ ಸಂವಿಧಾನದ ಭಾಗವಾಗಿದೆ; ಎಂದರೆ ಮೂಲಭೂತ ಹಕ್ಕುಗಳು ಕೊನೆಯ ಹಂತದಲ್ಲಿ ಅವು ಮತ್ತೆ ಚರ್ಚೆಗೆ ಅಂತಿಮ ರೂಪಪಡೆದು ಬರಲಿವೆ. ಆದುದರಿಂದ ಈ ಹಂತದಲ್ಲಿ ಪ್ರಸ್ತಾವಕ್ಕೆ ಬರುವುದಿಲ್ಲ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಧನ್ಯವಾದಗಳು. ಮಾನ್ಯರೆ ಇಡೀ ಅಧ್ಯಾಯವನ್ನು ಕೈಬಿಡಬೇಕೆಂಬುದು ನನ್ನ ಇಚ್ಛೆ. ಈ ಅಧ್ಯಾಯವು ರಾಷ್ಟ್ರಪತಿಗಳ ಅಧ್ಯಾದೇಶ ಉದ್ಘೋಷಣೆಯ ಅಧಿಕಾರಕ್ಕೆ ಸಂಬಂಧಿಸಿದುದು. ನನಗನಿಸುತ್ತೆ ಕಳೆದ ಹಲವಾರು ವರುಷಗಳಿಂದ ವಿದೇಶಿ ಆಡಳಿತಕ್ಕೆ ಮತ್ತು ಅಧ್ಯಾದೇಶಗಳ ಆಳ್ವಿಕೆಗೆ ಒಳಪಟ್ಟು ಇವೆಲ್ಲ ನಮಗೆ ಒಗ್ಗಿ ಹೋಗಿವೆ. ಸ್ವತಂತ್ರ ಭಾರತದಲ್ಲಿ ಈ ಅಧ್ಯಾದೇಶದ ಉದ್ಘೋಷಣಾಧಿಕಾರವನ್ನು ಮನದಳುಕು ಇಲ್ಲದೆ ನೀಡುತ್ತಿದ್ದೇವೆ.

**ಶ್ರೀ ಸಿ. ಸುಬ್ರಹ್ಮಣ್ಯಮ್** (ಮದ್ರಾಸು : ಸಾಮಾನ್ಯ) : ಗೌರವಾನ್ವಿತ ಸದಸ್ಯರು ಇದನ್ನು ತಿದ್ದುಪಡಿಯ ರೂಪದಲ್ಲಿ ಪ್ರಸ್ತಾವಿಸುತ್ತಿದ್ದಾರೆಯೇ?

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ನಾನು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ತಿದ್ದುಪಡಿಯನ್ನು ಓದುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇದು ತಿದ್ದುಪಡಿಯಲ್ಲ. ಮೂಲಪ್ರಸ್ತಾವದ ನಕಾರಾತ್ಮಕ ರೂಪ. ಮಿಕ್ಕೆಲ್ಲ ತಿದ್ದುಪಡಿಗಳನ್ನು ಮಂಡಿಸಿದ್ದಾದ ಮೇಲೆ ತಾವು ಮಾತನಾಡಬಹುದು. ನಾನಂದುಕೊಂಡಂತೆ ಇದು ತಿದ್ದುಪಡಿಯಲ್ಲ.

(ಶ್ರೀ ನಲವಾಡೆ ತಮ್ಮ ೩೨೪ ಮತ್ತು ೩೨೫ನೇ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ನನಗೆ ತಿಳಿದು ಬಂದಿರುವಂತೆ ರಾಷ್ಟ್ರಪತಿಗಳಿಗೆ ಪ್ರತ್ಯೇಕವಾಗಿ ತುರ್ತು ಅಧಿಕಾರವನ್ನು ಒದಗಿಸಲಾಗುತ್ತೆ. ಈ ಹಂತದಲ್ಲಿ ಸಂ.೩೨೬ನೇ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಶ್ರೀ ಎಚ್.ವಿ. ಪಾಟಸ್ಕರ್** : ಮಾನ್ಯರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿ ಕೆಳಕಂಡಂತಿದೆ:

"೧೭೭ನೇ ಖಂಡದ ೧ನೇ ಉಪಖಂಡದ ಕೊನೆಯಲ್ಲಿ ಕೆಳಕಂಡಂತೆ ನಿಬಂಧನೆಯನ್ನು ಪ್ರತಿಯೋಜಿಸಬೇಕು:

'ಪರಂತು ಸಮ್ಮಿಶ್ರ ಸಂಸತ್ತಿನ ಒಂದು ಅಧಿವೇಶನ ಅಂತಹ ಅಧ್ಯಾದೇಶದ ಉದ್ಘೋಷಣೆಯ ನಂತರ ಆರು ತಿಂಗಳ ಒಳಗೆ ನಡೆಯಬೇಕು'."

೧೭೭ನೇ ಖಂಡಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗಳಿಗೆ ಅಧ್ಯಾದೇಶಗಳನ್ನು ಹೊರಡಿಸುವ ಕೆಲ ತುರ್ತು ಅಧಿಕಾರಗಳನ್ನು ವಹಿಸಿಕೊಡಲಾಗಿದೆ. ಮತ್ತು ೨ನೇ ಉಪಖಂಡದಲ್ಲಿ ಉಪಬಂಧಿಸಿರುವಂತೆ ಈ ಪ್ರಕರಣದಡಿಯಲ್ಲಿ ಉದ್ಘೋಷಿಸಿರುವ ಅಧ್ಯಾದೇಶಕ್ಕೆ ಸಮ್ಮಿಶ್ರ ಸಂಸತ್ತಿನ ಅಧಿನಿಯಮದಷ್ಟೆ ಬಲ ಮತ್ತು ಪರಿಣಾಮವಿರುತ್ತದೆ. ೨(ಎ) ಉಪಖಂಡದಂತೆ ಅಂತಹ ಪ್ರತಿಯೊಂದು ಅಧ್ಯಾದೇಶವನ್ನು ಸಮ್ಮಿಶ್ರ ಸಂಸತ್ತಿನ

ಮುಂದೆ ಮಂಡಿಸಬೇಕು ಹಾಗೂ ಸಮ್ಮಿಶ್ರ ಸದನದ ಮರು ಅಧಿವೇಶನ ಪ್ರಾರಂಭವಾದಂದಿನಿಂದ ಆರು ವಾರಗಳ ಅನಂತರ ಅಧ್ಯಾದೇಶ ಚಾಲ್ತಿಯಲ್ಲಿರದು. ಗೌರವಾನ್ವಿತ ಪ್ರಸ್ತಾವಕರು ವಿವರಿಸಿದಂತೆ ಈ ಕ್ರಮ ಆದಷ್ಟು ಬೇಗನೆ ಜಾರಿಗೆ ಬರಬೇಕು. ಈ ಉದ್ದೇಶಕ್ಕಾಗಿಯೇ ಅಧ್ಯಾದೇಶ ಉದ್ಘೋಷಣೆಯಾದ ಆರು ತಿಂಗಳ ಒಳಗೆ ಸಮ್ಮಿಶ್ರ ಸಂಸತ್ತಿನ ಅಧಿವೇಶನ ಕರೆಯಬೇಕು ಎಂಬ ನಾನು ಪ್ರಸ್ತಾವಿಸಿದೆ. ಅಧ್ಯಾದೇಶಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಸಹ್ಯಕರ. ಕನಿಷ್ಠ ಪಕ್ಷ ಸಾರ್ವಜನಿಕ ಶಂಕೆ ನಿವಾರಣೆಗಾದರೂ ಇದರ ಉದ್ಘೋಷಣೆಯ ಅನಂತರ ಆರು ತಿಂಗಳ ಒಳಗೆ ಅಧಿವೇಶನ ಕರೆಯಲು ಸೂಕ್ತವಾದ ಉಪಬಂಧವಿರಬೇಕು. ಆದುದರಿಂದ ಎಲ್ಲರ ಸೌಲಭ್ಯಕ್ಕಾಗಿ ಅಂತಿಮ ಕರಡಿನ ರಚನೆಯಾದಾಗ ಒಂದು ಖಚಿತವಾದ ಉಪಬಂಧದ ಸೇರ್ಪಡೆಗೆ ಅವಕಾಶವಿರಬೇಕೆಂದು ನಾನು ಸಲಹೆ ನೀಡಬಯಸುತ್ತೇನೆ. ಅದು ನೆರವೇರುವ ಭರವಸೆ ಹೊತ್ತು ನಾನು ಈ ತಿದ್ದುಪಡಿಯನ್ನು ಮಂಡಿಸಲು ಈ ಹಂತದಲ್ಲಿ ಉದ್ದೇಶಿಸಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಕಾಮತ್

**ಶ್ರೀ ಎಚ್.ವಿ. ಕಾಮತ್ :** ೩೨೬ನೇ ತಿದ್ದುಪಡಿಯ ವಿಷಯದಲ್ಲಿ ನಾನು ನೀಡಿದ ಹೇಳಿಕೆಯ ದೃಷ್ಟಿಯಿಂದ ೩೨೮ನೇ ಸಂಖ್ಯೆಯ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

(ಶ್ರೀ ಜದುಬನ್ಸ್ ಸಹಾಯ್ ಮತ್ತು ಶ್ರೀ ಬಿಸ್ವನಾಥ್ ದಾಸ್ ಅವರು ತಮ್ಮ ಸಂ.೩೨೯ ಮತ್ತು ೩೩೦ನೇ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಶ್ರೀ ಎಚ್.ವಿ. ಕಾಮತ್ :** ಶ್ರೀ ಪಾಟಸ್ಕರ್ ಅವರ ಹೇಳಿಕೆಯ ದೃಷ್ಟಿಯಿಂದ ಈ ತಿದ್ದುಪಡಿ ಪ್ರಸ್ತಾವಕ್ಕೆ ಬರುವುದಿಲ್ಲ (ತಿದ್ದುಪಡಿ ಸಂ. ೩೩೧)

(ಶ್ರೀ ಸಿಧ್ವಾ ಅವರು ತಮ್ಮ ತಿದ್ದುಪಡಿ ಸಂಖ್ಯೆ ೩೩೨ಅನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು :** ಈ ಖಂಡಕ್ಕೆ ಇತರ ತಿದ್ದುಪಡಿಗಳ ಬಗ್ಗೆ ನನಗೆ ಸೂಚನೆ ಬಂದಿಲ್ಲ. ಆದುದರಿಂದ ಈ ಖಂಡವು ಈಗ ಚರ್ಚೆಗೆ ಮುಕ್ತವಾಗಿದೆ.

**ಪ್ರೊ. ಶಿಬನ್‌ಲಾಲ್ ಸಕ್ಸೇನ :** ಮಾನ್ಯ ಸಭಾಧ್ಯಕ್ಷರೆ, ಈ ಖಂಡವು ಇಡೀ ರಾಷ್ಟ್ರೀಯ ಸಭೆಯ ಮೇಲೆ ಅಧ್ಯಾರೋಹಿ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುತ್ತದೆ. ನಾವು ನಿಡುಗಾಲ ಅಧ್ಯಾದೇಶದ ಆಡಳಿತಕ್ಕೆ ಸುಪರಿಚಿತರಾಗಿದ್ದೇವೆ, ಈಗ ನಾವು ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುತ್ತಿದ್ದೇವೆ. ಈ ಅಧಿಕಾರವನ್ನು ನಾವು ಮತ್ತೆ ನೀಡಬಾರದು. ಮಾನ್ಯರೆ, ಮಹಾಯುದ್ಧದ ಸಂದರ್ಭದಲ್ಲೂ ಅಮೆರಿಕ ಸಂಯುಕ್ತ ರಾಷ್ಟ್ರಗಳ ಅಧ್ಯಕ್ಷರಿಗಾಗಲಿ ಇಂಗ್ಲೆಂಡಿನ ಪ್ರಧಾನಿಗಾಗಲಿ ಈ ಅಧಿಕಾರವಿರಲಿಲ್ಲ. ನಾವು ನಮ್ಮ ಸ್ವತಂತ್ರ ಸಂವಿಧಾನದ ರಚನೆಗೆ ತೊಡಗಿದಾಗ ನಮ್ಮ ಅಮೋಘವಾದ ಗತ ಶತಮಾನಗಳಲ್ಲಿ ಅನುಸರಿಸಿ ಪ್ರಜಾಪ್ರಭುತ್ವ ಸೂತ್ರಗಳನ್ನೇ ಜಾರಿಗೆ ತರಬೇಕು ಮತ್ತೆ ಇಂತಹ ಅಧಿಕಾರ ಖಂಡಿತ ದುರುಪಯೋಗವಾಗುತ್ತದೆ. ಈ ಅಧಿಕಾರ ಪ್ರಾಪ್ತವಾದಾಗ ಅದನ್ನು ಕೆಲವೊಮ್ಮೆ ಸಣ್ಣ ವಿಷಯಗಳಿಗೆಲ್ಲ ಜಾರಿಗೊಳಿಸುವ ಸಾಧ್ಯತೆ ಇದೆ ವಾಸ್ತವವಾಗಿ ಮಂತ್ರಿಮಂಡಲಗಳು ಅಸ್ತಿತ್ವಕ್ಕೆ ಬಂದ ಈ ಒಂದು ವರುಷದಲ್ಲಿ ಅನೇಕ ಅಧ್ಯಾದೇಶಗಳು ಜಾರಿಗೊಂಡುವು. ಆದುದರಿಂದ ನನಗನಿಸುವಂತೆ ಈ ತೆರನಾದ ಅಧಿಕಾರವನ್ನು ಕೊಡುವುದಾದರೆ ಪ್ರಜಾಪ್ರಭುತ್ವ ತತ್ತ್ವವೇ ನಿರಸನಗೊಳ್ಳುತ್ತದೆ. ಗತದಿನಗಳ ಗುಲಾಮಗಿರಿಯ ಪಾರಂಪರಿಕ ಸ್ವತ್ತಾದ ನಿರಂಕುಶ ಪ್ರಭುತ್ವವನ್ನು ನಾವೀಗ ಕಟ್ಟುತ್ತಿರುವ ಸ್ವತಂತ್ರ ಭಾರತದವರೆಗೂ ಮುಂದುವರಿಸುವುದು ಬೇಡೆನಿಸುತ್ತದೆ. ಈ ಅಧಿಕಾರವನ್ನು ಸಂವಿಧಾನದ ಮೂಲಕ ಕೊಡುವುದು ಸಲ್ಲದು. ಇಷ್ಟಕ್ಕೂ ಗಂಭೀರ ಸ್ವರೂಪದ ತುರ್ತು ಪರಿಸ್ಥಿತಿ ಇದ್ದರೆ ನಮ್ಮ ರಾಷ್ಟ್ರೀಯ ಸಂಸತ್ತು ಅದನ್ನು ನಿಭಾಯಿಸಲು ಸದಾಸಿದ್ಧ. ಬ್ರಿಟನ್ ಮತ್ತು ಅಮೆರಿಕದಲ್ಲಿ ಮಹಾಯುದ್ಧದ ಸಂದರ್ಭದಲ್ಲೂ ಅವರ ಅಳಿವು ಉಳಿವಿನ ಪ್ರಶ್ನೆ ಎದ್ದಾಗಲೂ ಅಂತಹ ಅಧಿಕಾರವಿಲ್ಲದೆ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ತಡೆಯಿಲ್ಲದೆ ನಡೆಸಿಕೊಂಡು ಹೋಗುತ್ತಿದ್ದರು. ವಾಸ್ತವವಾಗಿ ಮಹಾಸಮರದ ಕರಾಳ ದಿನಗಳಲ್ಲೂ

ಮಿ. ಚರ್ಚಿಲ್ ಅವರು ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಇದು ಜನರ ನೈತಿಕ ಮಟ್ಟವನ್ನು ಆತ್ಮವಿಶ್ವಾಸವನ್ನು ಉತ್ತುಂಗಕ್ಕೇರಿಸಿತು. ಅವರ ಮನಃಪೂರ್ವಕ ಸಹಕಾರವನ್ನು ಅನನ್ಯ ರೀತಿಯಲ್ಲಿ ಗಳಿಸಿದರು. ಅಧ್ಯಾದೇಶದ ಆಳ್ವಿಕೆಯನ್ನು ಜನತೆ ಯಾವತ್ತೂ ದ್ವೇಷಿಸುತ್ತದೆ. ನಮ್ಮ ಪ್ರಧಾನಿಗಳು ಮತ್ತು ಮಹಾನ್ ನೇತಾರರು ಈ ಖಂಡವನ್ನು ಹೊಂದಲಿಕ್ಕೆ ಅಷ್ಟೊಂದು ಹಂಬಲಿಸುತ್ತಾರೆಂದು ನನಗನ್ನಿಸದು. ಈ ಒಂದು ಕ್ರಮ ಇಡೀ ಸಂವಿಧಾನದ ಆಶಯವನ್ನು ವಿಫಲಗೊಳಿಸುತ್ತದೆ ಎಂಬುದು ನನ್ನ ದೃಢವಾದ ನಂಬಿಕೆ. ವಯಸ್ಕ ಮತದಾನದಿಂದ ಚುನಾಯಿತನಾಗದ ಒಬ್ಬ ಮನುಷ್ಯನಿಗೆ ಅಂತಹ ಅಧ್ಯಾರೋಹಿ ಅಧಿಕಾರವನ್ನು ಕೊಡುವುದು ಸೂಕ್ತವಲ್ಲ. ಇದು ಇಡೀ ಸಂವಿಧಾನದ ಪ್ರಜಾಪ್ರಭುತ್ವ ಸ್ವರೂಪಕ್ಕೆ ಹಾನಿ ತರುತ್ತದೆ. ಆದುದರಿಂದ ನಮ್ಮ ನೂತನ ಸಂವಿಧಾನದಲ್ಲಿ ಈ ಖಂಡಕ್ಕೆ ಆ ಬಗೆಯ ಯಾವ ಉಪಬಂಧವನ್ನೂ ಸೇರಿಸಬಾರದೆಂದು ಸೂಚಿಸುತ್ತಿದ್ದೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ನನ್ನ ಹಿಂದಿನ ಭಾಷಣಕಾರರು, ಸುವ್ಯಕ್ತವಾಗಿ ಈ ಖಂಡವನ್ನು ಭಾರತ ಸರ್ಕಾರದ ಅಧಿನಿಯಮದ ಅಡಿಯಲ್ಲಿ ವಿಶ್ಲೇಷಿಸಿದ್ದಾರೆ. ಮುಂದೆ ಬರುವ ಖಂಡವೇ ಇದೆಂದು ತಪ್ಪಾಗಿ ತಿಳಿದು ಮಾತನಾಡಿದ್ದಾರೆ. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ಎರಡು ಉಪಬಂಧಗಳಿವೆ. ಅವು ಗವರ್ನರ್ ಜನರಲ್ ಅವರಿಗೆ ಅಧ್ಯಾದೇಶವನ್ನು ಉದ್ಘೋಷಿಸುವ ಅಧಿಕಾರ ಕೊಡುತ್ತವೆ. ಮೊದಲಿಗೆ ಎರಡು ಅಧಿವೇಶನಗಳ ನಡುವಣ ವಿರಾಮದಲ್ಲಿ ಸಚಿವರ ಸಲಹೆಯ ಮೇರೆ ಅವರು ಉದ್ಘೋಷಿಸುತ್ತಾರೆ ಮತ್ತು ಅದರ ಜವಾಬ್ದಾರಿಯನ್ನು ಸಚಿವರು ಹೊರುತ್ತಾರೆ. ಅವರು ತಮ್ಮ ಪ್ರತ್ಯೇಕ ವಿವೇಚನಾನುಸಾರ ಉದ್ಘೋಷಿಸಬಹುದು. ಇದರ ಅರ್ಥವೇನೆಂದರೆ ಅವರು ಕೆಲವೊಮ್ಮೆ ಸಚಿವರ ನಿರ್ಣಯವನ್ನು ಉಲ್ಲಂಘಿಸಿ ಅಧ್ಯಾರೋಹಿ ಆದೇಶವನ್ನು ಜಾರಿಗೊಳಿಸಬಹುದು. ಅಂತಹ ಸಂದರ್ಭದಲ್ಲಿ ಅವರು ಸಚಿವರೊಡನೆ ಸಮಾಲೋಚಿಸಬೇಕಾಗುತ್ತದೆ. ಇನ್ನೊಂದು ಸಂದರ್ಭವೆಂದರೆ ಗಂಭೀರ ಸ್ವರೂಪದ ತುರ್ತುಪರಿಸ್ಥಿತಿ. ಕಾನೂನು ಮತ್ತು ಶಿಸ್ತುಪಾಲನೆಯ ವಿಶೇಷ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಿರುವುದರಿಂದ ಅಧ್ಯಾದೇಶವನ್ನು ಉದ್ಘೋಷಿಸುವುದು ಅವರಿಂದ ಸಾಧ್ಯ. ಅಂತಹ ಅಧ್ಯಾದೇಶದ ಅಸ್ತಿತ್ವ ಇರುವುದು ಕೇವಲ ಆರು ತಿಂಗಳು ಮಾತ್ರ. ಮಹಾಪ್ರಭುಗಳ ಪೂರ್ವಾನುಮತಿಯಿಲ್ಲದೆ ಅದನ್ನು ನವೀಕರಿಸಲು ಸಾಧ್ಯವಿಲ್ಲ. ನನ್ನ ಗೌರವಾನ್ವಿತ ಗೆಳೆಯರು ಆ ಹಿಂದಣ ಉಪಬಂಧವೇ ಇದು ಎಂದು ಅನಂತರದ ಉಪಬಂಧದ ಬಗ್ಗೆ ಸುವ್ಯಕ್ತವಾಗಿ ತಪ್ಪು ಗ್ರಹಿಕೆ ಹೊಂದಿದ್ದಾರೆ. ಹಿಂದಿನ ಉಪಬಂಧ ಹೀಗಿದೆ: ಸಭೆಯ ಅಧಿವೇಶನ ನಡೆಯದಿದ್ದಾಗ ಒಂದು ಅಧಿನಿಯಮದ ರಚನೆಗಾಗಿ ಸಭೆಯ ಅಧಿವೇಶನವನ್ನು ಕರೆಯಲು ಸಾಧ್ಯವಾಗದಿದ್ದಾಗ ಅಧಿನಿಯಮದ ಸ್ಥಾನದಲ್ಲಿ ಒಂದು ಅಧ್ಯಾದೇಶವನ್ನು ಉದ್ಘೋಷಿಸಲಾಗುತ್ತದೆ. ನನ್ನ ಗೌರವಾನ್ವಿತ ಸದಸ್ಯರ ಭಾವನೆಯಂತೆ ರಾಷ್ಟ್ರಪತಿಗಳು ಈ ಅಧ್ಯಾದೇಶವನ್ನು ತಮ್ಮ ವಿವೇಚನಾನುಸಾರ ಉದ್ಘೋಷಿಸುತ್ತಾರೆನ್ನುವಂತಿದೆ. ರಾಷ್ಟ್ರಪತಿಗಳು ಅಧ್ಯಾದೇಶವನ್ನು ತಮ್ಮ ವಿವೇಚನಾನುಸಾರ ಉದ್ಘೋಷಿಸಬಹುದು ಎಂಬುದನ್ನು ಇಲ್ಲಿ ಉಲ್ಲೇಖಿಸಿಲ್ಲ. ಅದರರ್ಥ ರಾಷ್ಟ್ರಪತಿಗಳು ಮಂತ್ರಿಗಳ ಸಲಹೆಯಂತೆ ಅಧ್ಯಾದೇಶವನ್ನು ಉದ್ಘೋಷಿಸುತ್ತಾರೆ ಎಂದರೆ ಈ ಅಧ್ಯಾದೇಶದ ಹೊಣೆಯನ್ನು ಸಚಿವರು ಹೊರುತ್ತಾರೆ ಎಂದರ್ಥ. ರಾಷ್ಟ್ರಪತಿಗಳು ಅವರ ನಿರ್ಣಯವನ್ನು ಅನುಮೋದಿಸುವ ಕೇವಲ ಒಂದು ರಬ್ಬರ್ ಸ್ಟ್ಯಾಂಪಿನಂತೆ. ಮಂತ್ರಿಗಳ ಇಚ್ಛೆಗೆ ಅವರು ಸಹಿ ಹಾಕುತ್ತಾರಷ್ಟೆ. ಮಂತ್ರಿಯಾದವರು ಶಾಸನಸಭೆಗೆ ಹೊಣೆಗಾರರಾಗಿರುತ್ತಾರೆ. ರಾಷ್ಟ್ರಪತಿಗಳು ವಯಸ್ಕ ಮತದಾನ ವಿಧಾನದಿಂದ ಚುನಾಯಿಸಲ್ಪಡದಿರುವ ಪ್ರಶ್ನೆ ಇಲ್ಲಿ ತಲೆಹಾಕುವುದಿಲ್ಲ. ಏಕೆಂದರೆ ಇದರ ಹೊಣೆ ಹೊತ್ತು ಸಚಿವರನ್ನು ಹುದ್ದೆಯಿಂದ ಕೆಳಗಿಳಿಸಬಹುದು. ಈ ಆಕ್ಷೇಪಣೆಗಳು ಅಸಮರ್ಥನೀಯವೇಕೆಂದರೆ ರಾಷ್ಟ್ರಪತಿಗಳಿಗೆ ನಾವು ನಿರಂಕುಶ ಪ್ರಭುತ್ವದ ಅಧಿಕಾರವನ್ನು ನೀಡುತ್ತಿಲ್ಲ ಮತ್ತು ರಾಷ್ಟ್ರಪತಿಗಳು ಸ್ವಇಚ್ಛೆಯಿಂದ ಅಧ್ಯಾದೇಶಗಳನ್ನು ಉದ್ಘೋಷಿಸುವ ಅಧಿಕಾರ ಹೊಂದಿಲ್ಲ. ಗುರಿ

ಮತ್ತು ಕಾರಣಗಳ ಅಡಿಯಲ್ಲಿ ಪ್ರಾಂತೀಯ ಸಂವಿಧಾನದಲ್ಲೆ ಲಗತ್ತಿಸಲಾಗಿರುವ ಒಂದು ಸಣ್ಣ ಟಿಪ್ಪಣಿಯಲ್ಲಿ ಸುಂಕಕ್ಕೆ ಸಂಬಂಧಿಸಿದಂತೆ ಲಾರ್ಡ್ ರೀಡಿಂಗ್ ಅವರು ಉದ್ಘೋಷಿಸಿದ ಅಧ್ಯಾದೇಶವನ್ನು ಉದ್ಧರಿಸಲಾಗಿದೆ. ಅದು ಆಗ ಅತ್ಯಾವಶ್ಯಕವಾಗಿತ್ತು. ಅಂತಹ ಅನೇಕ ಸಂದರ್ಭಗಳು ಬಂದಾವು. ಸರ್ಕಾರಕ್ಕೆ ಆ ಬಗೆಯ ಅಧಿಕಾರವನ್ನು ಕೊಡುವುದರಿಂದ ನಾವು ವಿಮುಖರಾಗಲು ಸಾಧ್ಯವಿಲ್ಲ. ಇಲ್ಲಿ ಹೇಳಿರುವಂತೆ ೬ ತಿಂಗಳ ಒಳಗೆ ಸಭೆಯ ಅಧಿವೇಶನವನ್ನು ಕರೆಯುವುದಾದರೆ ಆಕ್ಷೇಪಣೆಯೇನೂ ಇರಲಿಕ್ಕೆ ಸಾಧ್ಯವಿಲ್ಲ. ಸಭೆಯ ಅಧಿವೇಶನ ಮುಗಿಯುತ್ತಿದ್ದಂತೆ ಸಚಿವರು ವಿಶೇಷ ಅಧಿಕಾರವನ್ನು ಚಲಾಯಿಸುವ ಸಂಭವವಿಲ್ಲ. ಏಕೆಂದರೆ ಅಂತಹ ಒಂದು ನಿರ್ಣಯ ಅವರ ದೃಷ್ಟಿಯಲ್ಲಿ ಇದ್ದಿದ್ದರೆ ಆಗಲೆ ಸಭೆಯ ಅಧಿವೇಶನದಲ್ಲೆ ಒಂದು ಅಧಿನಿಯಮವನ್ನು ಜಾರಿಗೆ ತರುತ್ತಿದ್ದರು. ತುರ್ತು ಪರಿಸ್ಥಿತಿಯು ಸಭೆಯ ಅಧಿವೇಶನದ ಅನಂತರ ಉದ್ಭವಿಸಿದರೆ ಆಗ ಅವರು ಅಧಿಕಾರವನ್ನು ಚಲಾಯಿಸುತ್ತಿದ್ದರು ಮತ್ತು ೬ ತಿಂಗಳ ಅನಂತರ ಮತ್ತೊಂದು ಅಧಿವೇಶನ ಸಹಜವಾಗಿ ಜರುಗುತ್ತಿತ್ತು. ಅಧ್ಯಾದೇಶ ಜಾರಿಗೆ ಬಂದ ಅಥವಾ ಉದ್ಘೋಷಿಸಿದ ಆರು ತಿಂಗಳ ಒಳಗೆ ಸಭೆಯ ಅಧಿವೇಶನ ಅಗತ್ಯವಾಗಿ ನಡೆಯಲೇಬೇಕೆಂಬ ಶಾಸನಬದ್ಧ ಉಪಬಂಧವಿಲ್ಲ. ಯಾವುದೇ ನೀತಿ ನಿಯಮವಿಲ್ಲದ ಸಣ್ಣಪುಟ್ಟ ವಿಷಯಗಳಿಗೂ ಅಧ್ಯಾದೇಶದ ಉದ್ಘೋಷ ಅನಿವಾರ್ಯವಾಗಬಹುದಾದ ಅನೇಕ ಪ್ರಕರಣಗಳಿರುತ್ತವೆ. ಅಂತಹ ಅಧ್ಯಾದೇಶಗಳಿಗಾಗಿ ಸಭೆಯ ಅಧಿವೇಶನದ ಅಗತ್ಯವಿರುವುದಿಲ್ಲ. ಆದುದರಿಂದ ಪ್ರಸ್ತಾವಿಸಲಾದ ತಿದ್ದುಪಡಿಗಳಲ್ಲಿ ಯಾವ ತಿರುಳಿಲ್ಲ; ಅಂತೆಯೇ ಇಡೀ ಖಂಡಕ್ಕೆ ಶ್ರೀ ಶಿಬನ್‌ಲಾಲ್ ಸಕ್ಸೇನ ಅವರ ಆಕ್ಷೇಪಣೆಯಲ್ಲೂ ತಿರುಳಿಲ್ಲವೆಂಬುದನ್ನು ನಾನು ಅರಿಕೆ ಮಾಡುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ಸನ್ಮಾನ್ಯ ಅಧ್ಯಕ್ಷರೆ, ೧೭ನೇ ಖಂಡದಲ್ಲಿ ಕಿಂಚಿತ್ ಸಂದಿಗ್ಧತೆ ಇದೆ ಎಂಬುದನ್ನು ನಾನು ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಅದನ್ನು ಸರ್ ಗೋಪಾಲಸ್ವಾಮಿ ಅವರು ತಮ್ಮ ಉತ್ತರದಲ್ಲಿ ಪರಿಹರಿಸುವಂತೆ ಕೋರುತ್ತೇನೆ. ಈ ಖಂಡದಲ್ಲಿ ನಾವು ರಾಷ್ಟ್ರಪತಿಗಳನ್ನೂ, ಸಮ್ಮಿಶ್ರ ಸಂಸತ್ತನ್ನೂ ಎರಡು ವಿಭಿನ್ನ ಅಸ್ತಿತ್ವಗಳಂತೆ ಪರಿಗಣಿಸುತ್ತಿದ್ದೇವೆ. ಆದರೆ ೧೩ನೇ ಖಂಡದಲ್ಲಿ ಒಕ್ಕೂಟ ಸಂಸತ್ತಿಗೆ ವ್ಯಾಖ್ಯೆ ನೀಡುತ್ತ ರಾಷ್ಟ್ರಪತಿಗಳೊಡನೆ, ಉಭಯ ಸದನಗಳು ಎಂದರೆ ಲೋಕಸಭೆ ಮತ್ತು ರಾಜ್ಯಸಭೆಗಳನ್ನು ಒಳಗೊಂಡಿರುವಂತೆ ಅರ್ಥೈಸಲಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯದಂತೆ 'ಒಳಗೊಂಡ ರಾಷ್ಟ್ರೀಯ ಸಭೆ' ಎಂಬ ಪದಗಳನ್ನು ಕೈಬಿಟ್ಟಿದ್ದು ದುರ್ದೈವ. ಏಕೆಂದರೆ ಅದನ್ನು ನಾವು ಉಳಿಸಿಕೊಂಡಿದ್ದರೆ ಉಭಯ ಸದನಗಳನ್ನು ಸಂಯುಕ್ತವಾಗಿ ರಾಷ್ಟ್ರೀಯ ಸಭೆ ಎಂದು ಕರೆಯಬಹುದಿತ್ತು. ಮತ್ತು ಸಂಸತ್ತು ರಾಷ್ಟ್ರಪತಿಗಳ ಜೊತೆಗೆ ರಾಷ್ಟ್ರೀಯ ಸಭೆ ಎಂಬರ್ಥ ಬರುತ್ತಿತ್ತು. ಇಲ್ಲವಾದರೆ ಇಡೀ ಸಂವಿಧಾನದಲ್ಲಿ ಒಕ್ಕೂಟ ಸಂಸತ್ತು, ಅಧ್ಯಕ್ಷರು ಮತ್ತು ಉಭಯ ಸದನಗಳು ಕೂಡಿ ಎಂಬ ಪದಗಳ ನಡುವೆ ಸಂದಿಗ್ಧತೆ ಏರ್ಪಡುತ್ತದೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯ ಸಭಾಧ್ಯಕ್ಷರೆ, ೩ನೇ ಅಧ್ಯಾಯದ ಸೇರ್ಪಡೆಯ ವಿರುದ್ಧ ಗೌರವಾನ್ವಿತ ಸದಸ್ಯರು ಮಾಡಿದ ಟೀಕೆಯ ಬಗ್ಗೆ ಕೆಲ ಮಾತುಗಳನ್ನು ಆಡಲು ಬಯಸುತ್ತೇನೆ. ಅವರು ತಮ್ಮ ಭಾಷಣದಲ್ಲಿ ಕೆಲ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವು ಈ ಸದನದ ಸಾಮಾನ್ಯ ಭಾವನೆಗಳು. ನಾವು ಸ್ವತಂತ್ರ ಭಾರತವನ್ನು ಹೊಂದಲು ಹೊರಟಿದ್ದೇವೆ. ಆದರೆ ಅವರ ಇತರ ಭಾವನೆಗೆ ನನ್ನ ಸಹಮತವಿಲ್ಲ. ಸ್ವತಂತ್ರ ಭಾರತದಲ್ಲಿ ಅಂಥದೊಂದು ಕಾನೂನು ಇರಬಾರದೆಂದು ಗೌರವಾನ್ವಿತ ಸದಸ್ಯರು ಭಾವಿಸಿದಂತಿದೆ. ಆದರೆ ನಾವು ಗಳಿಸುತ್ತಿರುವುದು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯ. ಪ್ರಜಾಪ್ರಭುತ್ವವೆಂದರೆ ಕಾನೂನಿನ ಆಡಳಿತ. ಗೌರವಾನ್ವಿತ ಸದಸ್ಯರು ಅಧ್ಯಾದೇಶದ ದುರುಪಯೋಗದ ದುಃಸ್ವಪ್ನಗಳನ್ನು ಕಂಡು ನಲುಗಿದ್ದಾರೆ. ಅದರ ಅನುಭವ ಕಳೆದ ಯುದ್ಧದ ಸಂದರ್ಭದಲ್ಲಿ ನಮಗಾಗಿದೆ. ಆ ದುಃಸ್ವಪ್ನ ಕಣ್ಮರೆಯಾಗಬೇಕೆಂದೆನಿಸುತ್ತದೆ. ಈಗ ಅಧಿಕಾರ ಚಲಾಯಿಸುವವರು ನಮ್ಮ ಚುನಾಯಿತ ಸದಸ್ಯರು ಮತ್ತು ನಮ್ಮ ಆಯ್ದ ಪ್ರತಿನಿಧಿಗಳು. ಅವರು ನಿಸ್ಸಂಶಯವಾಗಿ ಜವಾಬ್ದಾರಿಯುತ ಸಚಿವರ ಸಲಹೆಯ ಮೇಲೆ ನಡೆದುಕೊಳ್ಳುತ್ತಾರೆ. ಆದುದರಿಂದ

ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂಬುದು ತರ್ಕಬದ್ಧ ನಿರೀಕ್ಷೆ. ಇಂತಹ ಸಂದರ್ಭಗಳಲ್ಲಿ ಅವರಿಗೆ ಅಧಿಕಾರವಿರಬೇಕೆಂಬುದು ನನ್ನ ಅಭಿಪ್ರಾಯ. ಆದರೆ ಪ್ರಶ್ನೆ ಏಳುವುದು ಅದರ ಸೂಕ್ತ ಬಳಕೆ ಅಥವಾ ದುರ್ಬಳಕೆಯಲ್ಲಿ. ನನ್ನ ಅಭಿಪ್ರಾಯದಲ್ಲಿ ಸರ್ಕಾರ ಸುಗಮವಾಗಿ ನಡೆಯಬೇಕಿದ್ದರೆ ಅಧಿಕಾರದ ಅಗತ್ಯವಿದೆ. ಶಾಸನಸಭೆಗಳ ಅಧಿವೇಶನ ನಡೆಯದಿದ್ದಾಗ ಒಂದು ಗಂಭೀರ ಪರಿಸ್ಥಿತಿ ಉದ್ಭವಿಸಿದಾಗ ಏನಾಗುವುದು? ಮಿತಿಯಿಲ್ಲದ ರಖಂವಾರು ತುರ್ತು ಪರಿಸ್ಥಿತಿಗಳು ಏಳುತ್ತವೆ. ಯುದ್ಧ, ದಂಗೆ, ಪ್ರವಾಹ, ಬರ ಅಥವಾ ಅಂತಹ ಯಾವುದೇ ಪರಿಸ್ಥಿತಿ ಏಳಬಹುದು. ಆಗ ಶಾಸನಸಭೆಯ ಅಧಿವೇಶನ ನಡೆಯದಿರಬಹುದು. ಸಮುದಾಯದ ಒಳಿತಿಗಾಗಿ ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಪ್ರಯೋಜನಕಾರಿಯಾಗಿ ಚಲಾಯಿಸಬಹುದು. ಅಂತಹ ಸಂದರ್ಭಗಳಲ್ಲಿ ಒಂದು ದೊಡ್ಡ ಅಧಿಕಾರವಿರುವುದು ಅಗತ್ಯವೆಂದು ನನ್ನ ನಿವೇದನೆ. ಅದರ ದುರ್ಬಳಕೆಯಾಗುವುದಕ್ಕೆ ಕಾರಣವೇನೂ ನನಗೆ ತೋರಲಿಲ್ಲ. ಬದಲಾಗಿ ಅವುಗಳ ಸದ್ಬಳಕೆಯಾಗುತ್ತದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನನ್ನ ಗೌರವಾನ್ವಿತ ಮಿತ್ರ, ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಗೆ ನಾನು ಬಹಳ ಋಣಿಯಾಗಿದ್ದೇನೆ. ಮಂಡಿಸಿದ ಎರಡೂ ತಿದ್ದುಪಡಿಗಳನ್ನೂ ಅವುಗಳ ಅಂಗೀಕಾರಕ್ಕೆ ಪ್ರಕಟಿಸಲಾದ ಆಕ್ಷೇಪಣೆಯನ್ನು ಪರಿಣಾಮಕಾರಿಯಾಗಿ ಇತ್ಯರ್ಥಗೊಳಿಸಿದ ಕಾರಣಕ್ಕಾಗಿ ನಾನು ಋಣಿ. ಈ ಎರಡೂ ಅಂಶಗಳ ಬಗ್ಗೆ ಅವರು ಆಡಿರುವ ಮಾತುಗಳಿಗೆ ಪೂರಕವಾಗಿ ನಾನು ಹೇಳುವಂತಹುದೇನೂ ಇಲ್ಲ.

ಶ್ರೀ ಕಾಮತರು ಪ್ರಸ್ತಾವಿಸಿದ ಒಂದು ಅಂಶವನ್ನು ಕುರಿತು ಮಾತನಾಡಬೇಕಿದೆ. ಇಲ್ಲಿ ಒಕ್ಕೂಟ ಸಂಸತ್ತು ಎಂಬ ಪದಗಳ ಬಳಕೆಯಾಗಿದೆ. ಅದು ಪರಿಶೀಲನಾರ್ಹ ವಿಷಯ. ರಾಷ್ಟ್ರಪತಿಗಳಿಂದ ಅಧ್ಯಾದೇಶ ಜಾರಿಯಾಗುತ್ತದೆ. ಅವರು ಶಾಸನಸಭೆಯ ಉಭಯ ಸದನಗಳ ಮುಂದೆ ಮಂಡಿಸುವಾಗ ಉದ್ಭವಿಸುವ, ಅನಿರೀಕ್ಷಿತ ಪರಿಸ್ಥಿತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಅಧ್ಯಾದೇಶವು ಶಾಶ್ವತ ಶಾಸನವೊಂದರ ರಚನೆಯ ಅಗತ್ಯವನ್ನು ಬೇಡುವಂತಹುದಾದರೆ ಅದು ರಾಷ್ಟ್ರಪತಿಗಳನ್ನೂ ಒಳಗೊಂಡಂತೆ ಇಡೀ ಸದನದ ಅನುಮೋದನೆಯನ್ನು ಪಡೆಯಬೇಕಾಗುತ್ತದೆ. ಏಕೆಂದರೆ ಅದು ಶಾಸನವಾಗುತ್ತದೆ. ಆದರೆ ಅಧ್ಯಾದೇಶವು ತಾತ್ಕಾಲಿಕವಾದರೆ ಅಥವಾ ಅದನ್ನು ತಿರಸ್ಕರಿಸುವ ನಿರ್ಣಯವನ್ನು ಉಭಯ ಸದನಗಳು ಅಂಗೀಕರಿಸುವಂತಹುದಾದರೆ ಅಥವಾ ಅದು ಪರಿಣಾಮಕಾರಿಯಾಗದಿದ್ದರೆ ಪ್ರಾಯಃ ಸಂಸತ್ತು ಎಂಬ ಪದವನ್ನು ಬಳಸುವುದು ಸೂಕ್ತವಲ್ಲ. ಆದರೆ ಸಂವಿಧಾನದ ಕರಡು ಪತ್ರ ಒಂದು ಖಚಿತ ರೂಪವನ್ನು ಪಡೆದಾಗ ಈ ಕಂಡಿಕೆಯ ೨ನೇ ಖಂಡದ ೨ನೇ ಉಪಖಂಡದ ವಾಕ್ಯರಚನೆಯನ್ನು ಗಣನೆಗೆ ತಂದುಕೊಳ್ಳಲಾಗುವುದು.

**ಮಾನ್ಯ ಸಭಾಧ್ಯಕ್ಷರು** : ನಾನೀಗ ೧೭ನೇ ಖಂಡವನ್ನು ಮತಕ್ಕೆ ಹಾಕುತ್ತೇನೆ.

೧೭ನೇ ಖಂಡ ಅಂಗೀಕರಿಸಲಾಯಿತು.

## ಖಂಡ – ೧೮

**ಮಾನ್ಯ ಸಭಾಧ್ಯಕ್ಷರು** : ಈಗ ನಾವು ಮುಂದಿನ ಖಂಡವನ್ನು ಪರಿಶೀಲಿಸೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾವು ಅಧ್ಯಾಯ ೪ಕ್ಕೆ ಹೋಗೋಣ–ಒಕ್ಕೂಟ ನ್ಯಾಯ ನಿರ್ವಹಣೆ; ನಾನು ಮಂಡಿಸಬೇಕಾಗಿರುವ ಖಂಡ ಸಂವಿಧಾನದ ಬಹುಮುಖ್ಯ ಭಾಗಕ್ಕೆ ಸಂಬಂಧಿಸಿದೆ. ನಮ್ಮ ಮುಂದೆ ಎರಡು ಅಥವಾ ಮೂರು ತಿದ್ದುಪಡಿಗಳಿವೆ. ಈ ಒಂದು ಖಂಡವನ್ನು ನಾನು ಮಂಡಿಸಿದ ಅನಂತರ ಈ ಸಂಬಂಧ ಮುಂದಿನ ವ್ಯವಹಾರಗಳನ್ನು ನಾಳೆಯವರೆಗೆ ತಡೆದಿಟ್ಟುಕೊಳ್ಳಲು ತಾವು ಸಮ್ಮತಿಸುತ್ತೀರೆಂದು ನಂಬಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ತಾವು ಔಪಚಾರಿಕವಾಗಿ ಖಂಡವನ್ನು ಮಂಡಿಸಬಹುದು. ತಿದ್ದುಪಡಿಗಳನ್ನು ತಾವು ಔಪಚಾರಿಕವಾಗಿ ಇಂದೇ ಮಂಡಿಸಬಹುದು. ಖಂಡವನ್ನೂ ತಿದ್ದುಪಡಿಗಳನ್ನೂ ನಾಳೆ ಚರ್ಚಿಸಬಹುದೆಂದು ನಾನು ಸಲಹೆ ಮಾಡಬೇಕೆಂದಿದ್ದೆ. ಇಂದು ತಾವು ಖಂಡವನ್ನು ಮಂಡಿಸಬಹುದಾಗಿದ್ದರೆ, ಇಂದೇ ತಿದ್ದುಪಡಿಗಳನ್ನೂ ಮಂಡಿಸಬಹುದು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ವಾಸ್ತವವಾಗಿ ಒಂದು ಸರ್ವಸಮ್ಮತ ತಿದ್ದುಪಡಿ, ಮಿಕ್ಕೆಲ್ಲ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಮೊದಲು ತಾವು ಖಂಡವನ್ನು ಮಂಡಿಸಿ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ೧೮ನೇ ಖಂಡವನ್ನು ಮಂಡಿಸಲು ಅನುಮತಿ ಕೋರುತ್ತೇನೆ :

"೧೮. ಸರ್ವೋಚ್ಚ ನ್ಯಾಯಾಲಯ ಮುಖ್ಯ ನ್ಯಾಯಾಧೀಶರು ಮತ್ತಿತರ ನ್ಯಾಯಾಧೀಶರರೊಡನೆ ಸಮಾಲೋಚಿಸಿ ರಾಷ್ಟ್ರಪತಿಗಳು ಅಗತ್ಯ ಉದ್ದೇಶಕ್ಕಾಗಿ ಒಬ್ಬರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಹೊರತುಪಡಿಸಿ ಒಕ್ಕೂಟ ನ್ಯಾಯಾಂಗದ ತಾತ್ಪೂರ್ತಿಕ ಸಮಿತಿಯ ಶಿಫಾರಸಿನಂತೆ ನೇಮಿಸುವ ಸಂವಿಧಾನ ಅಧಿಕಾರಗಳು ಮತ್ತು ಅಧಿಕಾರದ ವ್ಯಾಪ್ತಿಯನ್ನು ಹೊಂದಿರುವ ಒಂದು ಸರ್ವೋಚ್ಚ ನ್ಯಾಯಾಲಯ ಇರಬೇಕು."

, ನಾನು ಮಂಡಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ನನಗೆ ಎರಡೋ ಮೂರೋ ತಿದ್ದುಪಡಿಗಳಿಗೆ ಸೂಚನೆ ಬಂದಿದೆ. ಅವುಗಳನ್ನು ಪ್ರಾಸ್ತಾವಿಕವಾಗಿ ಇಂದು ಮಂಡಿಸಬಹುದು. ಅದರಿಂದ ನಾಳೆ ಒಂದಿಷ್ಟು ವೇಳೆ ಉಳಿತಾಯವಾಗುತ್ತದೆ.

(ಶ್ರೀಯುತರಾದ ಜಸಪತ್‌ರಾಯ್ ಕಪೂರ್, ಬಿ. ಪಾಕರ್ ಸಾಹಿಬ್ ಬಹಾದುರ್, ಕೆ.ಟಿ.ಎಂ. ಅಹಮದ್ ಇಬ್ರಾಹಿಂ ಸಾಹಿಬ್ ಬಹಾದುರ್, ರಾಯ್ ಬಹಾದುರ್ ಶ್ಯಾಮನಂದನ್ ಸಹಾಯ ಮತ್ತು ಎಚ್.ವಿ. ಪಾಟಸ್ಕರ್ ಅವರು ತಮ್ಮ ಸಂ.೩೩೩ ರಿಂದ ೩೩೭ನೇ ವರೆಗಿನ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಕೆ. ಸಂತಾನಮ್** : ನಾನು ಮಂಡಿಸುತ್ತೇನೆ:

"೧೮ನೇ ಖಂಡಕ್ಕೆ ಬದಲು ಕೆಳಕಂಡಂತೆ ಪ್ರತಿಯೋಜಿಸಬೇಕು:

'೧೮. ಕೆಳಕಂಡ ವಿವರಗಳಲ್ಲಿ ಹೊರತುಪಡಿಸಿ ಒಕ್ಕೂಟದ ಕಾರ್ಯಾಂಗದ ತಾತ್ಪೂರ್ತಿಕ ಸಮಿತಿಯ ಶಿಫಾರಸಿನಂತೆ ಸಂವಿಧಾನ ಅಧಿಕಾರಗಳು ಮತ್ತು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಒಂದು ಸರ್ವೋಚ್ಚ ನ್ಯಾಯಾಲಯವಿರಬೇಕು.

ಎ) ಒಕ್ಕೂಟ ಕಾನೂನಿನಂತೆ ೧೦ನೇ ಕಂಡಿಕೆಯ ಅನುಸಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಹೆಚ್ಚುವರಿ ಅಧಿಕಾರ ವ್ಯಾಪ್ತಿಯಲ್ಲಿ ವಹಿಸಬೇಕು.

ಒಕ್ಕೂಟ ಸಂಸತ್ತಿನ ಜನತಾ ಸದನದಿಂದ ಆರು ಮತ್ತು ರಾಜ್ಯಗಳ ಐದು ಸದಸ್ಯರುಗಳನ್ನು ಒಳಗೊಂಡಂತೆ ಉಭಯ ಸದನಗಳ ಜಂಟಿ ಸ್ಥಾಯಿ ಸಮಿತಿಯೊಡನೆ ಸಮಾಲೋಚಿಸಿದ ಬಳಿಕ ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನೂ ಇತರ ನ್ಯಾಯಾಧೀಶರನ್ನೂ ನೇಮಕ ಮಾಡಬೇಕು.

ಸಿ) ಒಕ್ಕೂಟ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಪಿಂಚಣಿಯನ್ನು ಒಕ್ಕೂಟ ಕಾನೂನಿನ ಅಡಿಯಲ್ಲಿ ನಿಗದಿಗೊಳಿಸಬೇಕು ಮತ್ತು ಅವುಗಳನ್ನು ಯಾರೇ ಒಬ್ಬರು ನ್ಯಾಯಾಧೀಶರ ವಿಷಯದಲ್ಲೂ ಅವರಿಗೆ ಬಾಧಕವಾಗುವಂತೆ ಮಾರ್ಪಡಿಸಬಾರದು'."

ಮಾನ್ಯರೆ, ಬಿ ಖಂಡಕ್ಕೆ ಬದಲಾಗಿ ನಾನೊಂದು ಪರಿಷ್ಕೃತ ರೂಪದ ತಿದ್ದುಪಡಿಯನ್ನು ಪ್ರತಿಯೋಜಿಸುವಂತೆ ಇಂದು ಸೂಚನೆ ನೀಡಿದ್ದೇನೆ. ಅದನ್ನು ನಾಳೆ ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಕೆಳಕಂಡ ತಿದ್ದುಪಡಿಯನ್ನು ಮಂಡಿಸಲು ನಾನು ತಮ್ಮ ಅನುಮತಿ ಬೇಡುತ್ತೇನೆ:

"೧೮ನೇ ಖಂಡದ ಅನಂತರ ಕೆಳಕಂಡ ಹೊಸ ಖಂಡವನ್ನು ಒಳಸೇರಿಸಬೇಕು:

'೧೮–ಎ ಹೊಸದಾಗಿ ರಚಿಸಲಾದ ಪ್ರಾಂತ್ಯದ ಶಾಸನ ಸಭೆ ರಾಜ್ಯಪಾಲರಿಗೆ ಒಂದು ಪತ್ರ ಸಲ್ಲಿಸಿ, ಅದನ್ನು ರಾಷ್ಟ್ರಪತಿಗಳು ಅನುಮೋದಿಸಿದ ಅನಂತರ ಆ ಪ್ರಾಂತ್ಯದಲ್ಲಿ ನೂತನ ಉಚ್ಚ ನ್ಯಾಯಾಲಯಗಳು ಸ್ಥಾಪನೆಯಾಗಬೇಕು'."

ಮಾನ್ಯರೆ, ಅನಂತರ ಇದನ್ನು ಕುರಿತ ಚರ್ಚೆಗೆ ತಮ್ಮ ಅನುಮತಿ ಬೇಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅದೊಂದು ಸ್ವತಂತ್ರ ಖಂಡ. ಅದನ್ನು ನಾವು ಪ್ರತ್ಯೇಕವಾಗಿ ಪರಿಶೀಲಿಸೋಣ. ಈಗ ಮಧ್ಯಾಹ್ನ ಒಂದು ಗಂಟೆ. ನಾಳೆ ಬೆಳಗ್ಗೆ ೧೦ ಗಂಟೆಗೆ ಸಭೆಯನ್ನು ಮುಂದುವರಿಸೋಣ.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಮಾನ್ಯರೆ ನಾನು ಒಂದು ತಿದ್ದುಪಡಿಗೆ ಈ ಬೆಳಗ್ಗೆ ಸೂಚನೆ ಕಳುಹಿಸಿದ್ದೆ. ನಾನೀಗ ಅದನ್ನು ಓದಲೆ?

**ಮಾನ್ಯ ಸಭಾಧ್ಯಕ್ಷರು :** ನಾವು ಈಗ ಸಭೆಯನ್ನು ಮುಂದೂಡಿದ್ದೇವೆ. ನಾಳೆ ಅದನ್ನು ಪರಿಶೀಲಿಸೋಣ.

ಸದನವನ್ನು ಅನಂತರ ೧೯೪೭ರ ಜುಲೈ ೨೯ರಂದು ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಯಿತು.

*[ಹಿಂದುಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*